

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 16 ಸೋಮವಾರ 2023

ಸಂಪುಟ: 44 | ಸಂಚಿಕೆ: 181 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4



ಮೈಸೂರು ದಸರಾಗೆ ಚಾಲನೆ

ಚಾಮುಂಡೇಶ್ವರಿಗೆ ಪುಷ್ಪವೃಷ್ಟಿಗೈಯ್ದು ದಸರಾ ಉದ್ಘಾಟಿಸಿದ ನಾದಬ್ರಹ್ಮ ಹಂಸಲೇಖ ಕನ್ನಡ ಗೊತ್ತಿಲ್ಲದವರ ಬಗ್ಗೆ ಸಮೀಕ್ಷೆ ಮಾಡಿ, 30 ದಿನದಲ್ಲಿ ಕನ್ನಡ ಕಲಿಸಿ ಎಂದು ಸಲಹೆ

● ನಾಡದೇವತೆ ಚಾಮುಂಡೇಶ್ವರಿಗೆ ಹಂಸಲೇಖ ಅಗ್ರಪೂಜೆ ● ಜ್ಯೋತಿ ಬೆಳಗಿಸಿ ದಸರಾಗೆ ಶುಭ ಹಾರೈಕೆ ● ಈ ಅವಕಾಶ ನಿರಾಯಾಸವಾಗಿ ಸಿಕ್ಕಿಲ್ಲ ● ಕರ್ನಾಟಕ ಐದಶವೆಂದು ಕರೆಯೋಣ ● ಪ್ರತಿಭೆ, ಉದ್ಯಮ ವಿನಿಮಯವಾಗಲಿ




ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಾನುವಾರ ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ಅವರು ದೀಪ ಬೆಳಗಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಅ.15(ಬಿಎಲ್‌ಎಂ)–ನಾಡಿನ ಸಾಂಸ್ಕೃತಿಕ ಪರಂಪರೆ, ರಾಜರ ಕಾಲದ ಗತವೈಭವವನ್ನು ಅನಾವರಣಗೊಳಿಸುವ ಶರನ್ನವ ರಾತ್ರಿಯ 9 ದಿನಗಳ ವಿಶ್ವ ವಿಖ್ಯಾತ 414ನೇ ಮೈಸೂರು ದಸರಾ ಮಹೋತ್ಸವಕ್ಕೆ ಭಾನುವಾರ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ವಿಧ್ಯುಕ್ತ ಚಾಲನೆ ನೀಡಿದರು.

ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ನಡೆದ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಇಂದು ಬೆಳಗ್ಗೆ 10.15ರಿಂದ 10.36 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಬೆಳ್ಳಿ ರಥದಲ್ಲಿ ಸರ್ವಾಲಂಕೃತಗೊಂಡಿದ್ದ ನಾಡದೇವತೆ ತಾಯಿ ▶ 6ನೇ ಪುಟಕ್ಕೆ

ಚಾಮುಂಡಿಬೆಟ್ಟಕ್ಕೆ ಶಾಶ್ವತ ದೀಪಾಲಂಕಾರ ಮಾಡಿ



ಮೈಸೂರು: ಮೈಸೂರಿನ ಚಾಮುಂಡಿಬೆಟ್ಟಕ್ಕೆ ಶಾಶ್ವತ ದೀಪಾಲಂಕಾರ ಮಾಡುವಂತೆ ದಸರಾ ಉದ್ಘಾಟಕರಾದ ನಾದಬ್ರಹ್ಮ ಹಂಸಲೇಖ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ▶ 6ನೇ ಪುಟಕ್ಕೆ

ನಾಡಿನ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು

ದಸರ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ಮೈಸೂರು, ಅ. 15(ಆರ್‌ಕೆ)– ಈ ನಾಡಿನ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರತಿಪಾದನೆ ಮಾಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ 2023ರ ನವರಾತ್ರಿ ಉತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬ ನಾಗರಿಕರೂ ಸಮಾನರು ಎಂದು ಭಾರತದ ಸಂವಿಧಾನದಲ್ಲಿ ಬರೆದಿದೆ. ಪ್ರತಿಯೊಂದು ಸರ್ಕಾರವೂ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕು. ಈ ನಾಡಿನ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂದರು.

ಸಾಮಾಜಿಕ ಸಮಾನತೆಯಿಂದ ಯಾರೂ ವಂಚಿತರಾಗಬಾರದು. ಎಲ್ಲಾ ವರ್ಗದ ಜನರ ಅಭಿವೃದ್ಧಿಗಾಗಿ ನಾವು 5 ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿ, ಅದರಲ್ಲಿ ನಾಲ್ಕು ಗ್ಯಾರಂಟಿಗಳನ್ನು ▶ 7ನೇ ಪುಟಕ್ಕೆ

ಮೈಸೂರು ಅರಮನೆಯಲ್ಲಿ ಖಾಸಗಿ ದರ್ಬಾರ್ ಆರಂಭ



ದಸರಾ ಹಿನ್ನೆಲೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಭಾನುವಾರ ಆರಂಭವಾದ ಖಾಸಗಿ ದರ್ಬಾರ್‌ನಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನಖಚಿತ ಸಿಂಹಾಸನಾರೂಢರಾಗಿ ಸೆಲ್ಯೂಟ್ ಹೊಡೆಯುತ್ತಿರುವುದು.

ಮೈಸೂರು,ಅ.15(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ವೇಳೆ ಅರಮನೆಯಲ್ಲಿ ನಡೆಯಲಿರುವ ಖಾಸಗಿ ದರ್ಬಾರ್ ಭಾನುವಾರ ಆರಂಭವಾಗಿದ್ದು, ನವರಾತ್ರಿಯ ಮೊದಲ ದಿನ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿವಿಧ ಧಾರ್ಮಿಕ ಕೈಂಕರ್ಯಗಳಲ್ಲಿ ಪಾಲ್ಗೊಂಡು, ರತ್ನಖಚಿತ ಸಿಂಹಾಸನರೂಢರಾಗಿ ರಾಜರ ಕಾಲದ ಗತವೈಭವ ಮರುಕಳಿಸುವಂತೆ ಮಾಡಿದರು.

ನವರಾತ್ರಿ ಅಂಗವಾಗಿ ಮೈಸೂರು ಅರಮನೆಯ ಒಳಾಂಗಣ ಕಂಗೊಳಿಸುತ್ತಿದ್ದು, ಹೊರ ಆವರಣದಲ್ಲೂ ದಸರಾ ಸಂಭ್ರಮ ಮನೆ ಮಾಡಿದೆ.

- ■ ದರ್ಬಾರ್ ಹಾಲ್‌ನಲ್ಲಿ ರತ್ನಖಚಿತ ಸಿಂಹಾಸನವೇರಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್
- ■ ರಾಜಮನೆತನದವರ ಸಮ್ಮುಖದಲ್ಲಿ ನೆರವೇರಿದ ಖಾಸಗಿ ದರ್ಬಾರ್
- ■ ಪಾದಪೂಜೆ ಮಾಡಿದ ತ್ರಿಷಿಕಾ ಕುಮಾರಿ ಒಡೆಯರ್

ಅರಮನೆಯ ದರ್ಬಾರ್ ಹಾಲ್‌ನಲ್ಲಿ ಇಂದು ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ನಡೆದ ವಿವಿಧ ಪೂಜಾ ಕೈಂಕರ್ಯಗಳಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ ನರಸಿಂಹರಾಜ ಒಡೆಯರ್ ಸಕ್ರಿಯವಾಗಿ ಪಾಲ್ಗೊಂಡು, ಯದುವಂಶದ ಸಾಂಪ್ರದಾಯಿಕ ಆಚರಣೆಗಳಲ್ಲಿ ಪ್ರಮುಖವಾದ ಖಾಸಗಿ ದರ್ಬಾರ್‌ಗೆ ಚಾಲನೆ ನೀಡಿದರು.

ಖಾಸಗಿ ದರ್ಬಾರ್ ಅಂಗವಾಗಿ ಮುಂಜಾನೆಯೇ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಸಂಪ್ರದಾಯದಂತೆ ಎಣ್ಣೆ ಶಾಸ್ತ್ರ ನೆರವೇರಿಸಲಾಯಿತು. 6.05ರಿಂದ 6.25 ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಸಿಂಹಾಸನಕ್ಕೆ 'ಸಿಂಹ' ಜೋಡಣೆ ಮಾಡಲಾಯಿತು. ▶ 7ನೇ ಪುಟಕ್ಕೆ



ಮೈಸೂರು ದಸರಾ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ


ಪುಷ್ಪದಲ್ಲಿ ಅರಳಿದ ಚಾಮುಂಡೇಶ್ವರಿ ದೇವಿ, ಚಂದ್ರಯಾನ-3

ಮೈಸೂರು, ಅ.15(ಎಂಟಿವೈ)- ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ತೋಟಗಾರಿಕಾ ಇಲಾಖೆ ಹಾಗೂ ತೋಟಗಾರಿಕಾ ಸಂಘದ ಸಂಯುಕ್ತಾಶ್ರಯದಲ್ಲಿ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಬೇಕಾಗಿತ್ತು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವಾಗಿ ಫಲಪುಷ್ಪ ಪ್ರದರ್ಶನಕ್ಕೆ ಆಗಮಿಸಿದರು. ಇದರಿಂದ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿಗಳೇ ಉದ್ಘಾಟಿಸಬೇಕಾದ ಅನಿವಾರ್ಯತೆ ಎದುರಾಯಿತು. ಗಾಜಿನ ಅರಮನೆಯಲ್ಲಿ ನಿರ್ಮಾಣಗೊಂಡಿದ್ದ ಚಂದ್ರಯಾನ-3 ಪುಷ್ಪ ಕಲಾಕೃತಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಹೊರ ಆವರಣದಲ್ಲಿ ಸೈಕಲ್ ಬ್ರ್ಯಾಂಡ್ ಅಗರ ಬತ್ತಿ ವತಿಯಿಂದ ನಿರ್ಮಿಸಲಾಗಿದ್ದ ಅಗರ ಬತ್ತಿಯನ್ನು ಸಿದ್ದರಾಮಯ್ಯ ಹಚ್ಚುವ ಮೂಲಕ ಚಾಲನೆ ನೀಡಿದರು.

ದಸರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯ ಪ್ರವಾಸಿಗರನ್ನು ಸೆಳೆಯುವ ಫಲಪುಷ್ಪ ಪ್ರದರ್ಶನ ಈ ಬಾರಿ ವಿಶೇಷತೆಯಿಂದ ಕೂಡಿದ್ದು, ಜನಾಕರ್ಷಣೀಯ ಕೇಂದ್ರ ಬಿಂದುವಾಗಿದೆ. ಫಲಪುಷ್ಪ ಪ್ರದರ್ಶನ ನೋಡುವ ಹಂಬಲದಿಂದ ಮುಖ್ಯಮಂತ್ರಿಗಳೇ ಆಗಮಿಸಿದ್ದು, ಪ್ರದರ್ಶನ ಕಳೆ ಕಟ್ಟುವಂತೆ ಮಾಡಿತು. ಈ ಬಾರಿ ವಿವಿಧ ಬಗೆಯ ಹೂವಿನ ಗಿಡಗಳ 85 ಸಾವಿರ ಕುಂಡಗಳನ್ನು ಕುಪ್ಪಣ್ಣ ಪಾರ್ಕ್‌ನ ವಿವಿಧೆಡೆ ಜೋಡಿಸಿದ್ದು, ಜನರನ್ನು ಆಕರ್ಷಿಸುತ್ತಿದೆ.







ಹೂವುಗಳಿಂದ ರೂಪತಳೆದ ಚಾಮುಂಡೇಶ್ವರಿ ಮೂರ್ತಿ: ಫಲಪುಷ್ಪ ಪ್ರದರ್ಶನದಲ್ಲಿ ಚಾಮುಂಡೇಶ್ವರಿ ದೇವಿಯ ಮೂರ್ತಿಯೊಂದಿಗೆ ದೇಗುಲ ನಿರ್ಮಿಸಲಾಗಿದೆ. ಅಲ್ಲದೆ, ಬೆಟ್ಟದ ಮಧ್ಯೆ ಇರುವ ನಂದಿಯನ್ನೂ ಸ್ಥಾಪಿಸಲಾಗಿದೆ. ತೋಟಗಾರಿಕೆ ಇಲಾಖೆಯು ಉಲ್ಲಾಸ್ ಅಗರಬತ್ತಿಸ್ ವತಿಯಿಂದ ಈ ಚಾಮುಂಡೇಶ್ವರಿ ದೇವಾಲಯದ ಪ್ರತಿರೂಪವನ್ನು 50 ಸಾವಿರಕ್ಕೂ ಹೆಚ್ಚು ಹೂಗಳಿಂದ ನಿರ್ಮಿಸಲಾಗಿದೆ. ಗೋಪುರದ ಮುಂಭಾಗದ ಚಾಮುಂಡೇಶ್ವರಿ ಪ್ರತಿಮೆಯೊಂದಿಗೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಫಲಪುಷ್ಪ ವೀಕ್ಷಣೆಗೆ ಬರುತ್ತಿದ್ದ ಮಹಿಳೆಯರು ಭಕ್ತಿಯಿಂದ ದೇವಿಯ ಪ್ರತಿಮೆಗೆ ಕೈಮುಗಿದು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಗಾಜಿನ ಮನೆಯಲ್ಲಿ ಚಂದ್ರಯಾನ: ಗಾಜಿನ ಮನೆಯಲ್ಲಿ 6 ಲಕ್ಷ ಕೊಲ್ಕತ್ತಾ ಸೇವಂತಿಗೆ ಹೂಗಳಿಂದ ನಿರ್ಮಾಣಗೊಂಡಿದ್ದ ಚಂದ್ರಯಾನ-3ರ ಪ್ರತಿರೂಪ, ರಾಕೆಟ್, ಪ್ರಜ್ಞಾನ್ ರೋವರ್ ನಿರ್ಮಿಸಲಾಗಿದೆ. ಹೂಗಳು ಬಾಡದಂತೆ ಫಾಗರ್ ಮೂಲಕ ನೀರು ಚಿಮುಕಿಸುವ ವ್ಯವಸ್ಥೆ ಮಾಡಲಾಗಿದೆ.

ಗಮನ ಸೆಳೆದ ವಿವಿಧ ಆಕೃತಿಗಳು: ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ತಂಡಕ್ಕೆ ಶುಭ ಕೋರುವ ನಿಟ್ಟಿನಲ್ಲಿ ಡೇರಿ ಡೇ ಪ್ರಾಯೋಜಕತ್ವದಲ್ಲಿ ಕ್ರೀಡಾ ಸಾಮಗ್ರಿಗಳಾದ ಬ್ಯಾಟ್-ಬಾಲ್, ಫುಟ್ಬಾಲ್, ಬ್ಯಾಡ್ಮಿಂಟನ್‌ನ ವಸ್ತುಗಳನ್ನು ಹೂಗಳಿಂದ ನಿರ್ಮಿಸಲಾಗಿದೆ. ಜೆಕೆ ಟೈರ್ಸ್‌ನಿಂದ ಹೆರಿಟೇಜ್ ಕಾರು, ಮಹಾರಾಜರ ಸಿಂಹಾಸನ, ಅಮೃತ್ ನೋನಿಯಿಂದ ವರ್ಲ್ಡ್ ಕಪ್ ಥೀಮ್, ಲೆವಿಸ್ಟಾ ವತಿಯಿಂದ ಬೃಹತ್ ಕಾಫಿ ಮಗ್, ಸೆಲ್ಫಿ ಪಾಯಿಂಟ್ ಮೊದಲಾದವು ವಿಶೇಷ ಆಕರ್ಷಣೆಯಾಗಿವೆ. ಖಾಸಗಿ ವಾಹಿನಿಯಿಂದ ಸುವರ್ಣ ಕರ್ನಾಟಕದ ಪರಿಕಲ್ಪನೆ ನಿರ್ಮಿಸಲಾಗಿದೆ.

ಮೂರು ಪ್ರವೇಶ ದ್ವಾರ: ಫಲಪುಷ್ಪ ಪ್ರದರ್ಶನಕ್ಕೆ ಮೂರು ಕಡೆ ಪ್ರವೇಶ ದ್ವಾರ ನಿರ್ಮಿಸಿದ್ದು, ಮೂರು ಕಡೆಯೂ ಟಿಕೆಟ್ ಕೌಂಟರ್‌ಗಳನ್ನು ತೆರೆಯುವ ಮೂಲಕ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲಾಗಿದೆ. ತೋಟಗಾರಿಕೆ ಇಲಾಖೆಯಿಂದ ಜೇನು ಸಾಕಾಣಿಕೆ ಮಾಹಿತಿಯೊಂದಿಗೆ ತೋಟಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೂ ವ್ಯವಸ್ಥೆ ಮಾಡಲಾಗಿದೆ.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಡಿಸಿ ಡಾ.ಕೆ.ಎಂ.ರಾಜೇಂದ್ರ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ನಾಗರಾಜು, ಉಪನಿರ್ದೇಶಕ ಮಂಜುನಾಥ್ ಅಂಗಡಿ, ಹಿರಿಯ ಸಹಾಯಕ ನಿರ್ದೇಶಕಿ ಸುವೇದಾ, ಸಹಾಯಕ ನಿರ್ದೇಶಕ ನವೀನ್, ತೋಟಗಾರಿಕೆ ಸಂಘದ ಶಶಿಕಲಾ ನಾಗರಾಜು ಇನ್ನಿತರರಿದ್ದರು.









ಆರೋಗ್ಯವಂತ ಜೀವನಕ್ಕೆ ದೈಹಿಕ, ಮಾನಸಿಕ ಸಮತೋಲನ ಮುಖ್ಯ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಮೈಸೂರು,ಅ.15(ಎಂಟಿವೈ)- ಆರೋಗ್ಯವಂತ ಜೀವನ ನಡೆಸಲು ಎಲ್ಲರೂ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ವತಿಯಿಂದ ಭಾನುವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರೂ ಆರೋಗ್ಯವಂತರಾಗಿ ಜೀವನ ಸಾಗಿಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯ ಎರಡೂ ಮುಖ್ಯ. ಈ ಎರಡನ್ನು ಸಮತೋಲನವಾಗಿ ಸರಿದೂಗಿಸಿಕೊಂಡು ಬದುಕಬೇಕು. ದಸರಾ ಮಹೋತ್ಸವದ ಅಂಗವಾಗಿ ಕನಕ ಗುರುಪೀಠ ಪ್ರತಿವರ್ಷ ಕೆ.ಆರ್.ನಗರದಲ್ಲಿ ಆರೋಗ್ಯ ತಪಾಸಣಾ ಕಾರ್ಯಕ್ರಮ ಆಯೋಜಿಸಲಾಗುತ್ತಿತ್ತು. ಈ ಬಾರಿ ಮೈಸೂರಲ್ಲೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿರುವುದು ಈ ಭಾಗದ ಜನರಿಗೆ ಅನುಕೂಲವಾಗಿದೆ. ಶ್ರೀಮಠದ ಸೇವೆ ಹೀಗೆ ಮುಂದುವರೆಯಲಿ ಎಂದರು.

ಇದೇ ವೇಳೆ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಸ್ವಾಮೀಜಿ ಶ್ರೀ ಶಿವಾನಂದಪುರಿ ಮಹಾಸ್ವಾಮೀಜಿ ಮಾತನಾಡಿ, ಸುತ್ತೂರು ಶ್ರೀಗಳು ಆರೋಗ್ಯ, ಶಿಕ್ಷಣ, ಸಾಮಾಜಿಕ ಕ್ಷೇತ್ರದಲ್ಲಿ ಮಾಡುತ್ತಿರುವ ಸೇವೆ ಅನನ್ಯವಾಗಿದ್ದು, ಆಯುರ್ವೇದ, ಪ್ರಕೃತಿ ಚಿಕಿತ್ಸೆಗಳನ್ನು ಜನಸಾಮಾನ್ಯರಿಗೆ ಒದಗಿಸಿ, ಅನುಕೂಲಮಾಡಿಕೊಟ್ಟಿದ್ದಾರೆ. ನಾನು ಸಹ ಪ್ರಕೃತಿ ಚಿಕಿತ್ಸೆ ಪಡೆದು ಗುಣಮುಖನಾಗಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಶಾಖಾಮಠದ ಶ್ರೀಗಳಾದ ಶ್ರೀ ಸೋಮನಾಥಸ್ವಾಮೀಜಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಬೈರಪ್ಪ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪುಟ್ಟಬಸವೇಗೌಡ, ಡಾ.ನರೇಂದ್ರ ಡಾ.ಮಾಲೇಗೌಡ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಕಾರ್ಯಾಧ್ಯಕ್ಷ ನಾಡನಹಳ್ಳಿ ರವಿ, ಹಿನಕಲ್ ರಾಜು, ಶಿವರುದ್ರಪ್ಪ, ಕಮಲ ಅನಂತ ರಾಮು, ವಿಶ್ವ, ಮಂಜುನಾಥ್, ಪಾಪಣ್ಣ, ಶಿವಣ್ಣ, ಮಾದೇಗೌಡ ಹಾಜರಿದ್ದರು.

ಜ್ಞಾನೋದಯ ಪಿಯು ಕಾಲೇಜಿಗೆ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ



ಮೈಸೂರು, ಅ.15- ನಗರದ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮೈಸೂರು ಜಿಲ್ಲೆ ಹಾಗೂ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸಹಪಠ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವು ಬಹುಮಾನ ಪಡೆದಿರುತ್ತಾರೆ.

ಪ್ರಥಮ ಪಿಯುಸಿ ವಿಭಾಗದ ರಸಪ್ರಶ್ನೆ ಸ್ಪರ್ಧೆಯಲ್ಲಿ ಕಿರಣ್‌ಕುಮಾರ್ ಎಸ್. ಹಾಗೂ ಮಂಜುನಾಥ್ ಎಸ್.ಆರ್. (ಪ್ರಥಮ), ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಚೈತ್ರ ವೈ.ಡಿ. (ಪ್ರಥಮ), ಇಂಗ್ಲೀಷ್ ಚರ್ಚಾ ಸ್ಪರ್ಧೆಯಲ್ಲಿ ಸ್ವಾತಿ(ಪ್ರಥಮ), ಜನಪದ ಗೀತೆ ಸ್ಪರ್ಧೆಯಲ್ಲಿ ಅಂಚಲ್ ಎಸ್.ಜೋಷಿ (ಪ್ರಥಮ), ಇಂಗ್ಲಿಷ್ ಪ್ರಬಂಧ ಸ್ಪರ್ಧೆ ಧೃತಿ ಎಂ.(ತೃತೀಯ) ಬಹುಮಾನ ಪಡೆದವರು.

ದ್ವಿತೀಯ ಪಿಯುಸಿ ವಿಭಾಗದ ಭಕ್ತಿಗೀತೆ ಹಾಗೂ ಭಾವಗೀತೆ ಸ್ಪರ್ಧೆಯಲ್ಲಿ ಶರ್ವಾಣಿ(ಪ್ರಥಮ), ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಪ್ರಿಯಾಂಕ ಎ.(ದ್ವಿತೀಯ), ಇಂಗ್ಲೀಷ್ ಪ್ರಬಂಧ ಸ್ಪರ್ಧೆಯಲ್ಲಿ ಲಕ್ಷ್ಮಿ ಹೆಚ್.ಎಸ್.(ತೃತೀಯ), ರಸಪ್ರಶ್ನೆ ಸ್ಪರ್ಧೆಯಲ್ಲಿ ಸಮರ್ಥ್ ಎಸ್. ಹಾಗೂ ವೈಷ್ಣವಿ ಜಿ.ಮೋರೆ (ತೃತೀಯ) ಬಹುಮಾನ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಜ್ಞಾನೋದಯ ಕಾಲೇಜು ಮಂಡಳಿ, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದರು.

ಪಲ್ಲವಿಗೆ ಪಿಹೆಚ್.ಡಿ ಪದವಿ



ಮೈಸೂರು,ಅ.15-ಡಾ.ಶೌಕರ್ ಅರಾ ಖಾನಂ ಅವರ ಮಾರ್ಗದರ್ಶನದಲ್ಲಿ ಹೆಚ್.ಎಂ.ಪಲ್ಲವಿ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.10.2023 ಸೋಮವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ ಸ್ವಾತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಚಂದ್ರ ಘಂಟಾ, ಶ್ರೀ ಜಾತವೇದ ದುರ್ಗಾಪೂಜಾ, ಸಪ್ತಪತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನ, ಸಂಜೆ 5.30ಕ್ಕೆ ಶ್ರೀ ಮಹಾಮೃತ್ಯುಂಜಯ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ಕರ್ನಾಟಕ ಸಂಗೀತ ಗಾಯನ: ವಿದ್ವಾನ್ ಆರ್.ಡಿ.ಶ್ರವಣ್ ಅವರಿಂದ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ರಾಜರಾಜೇಶ್ವರಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ- ಮಹಾ ಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ದುರ್ಗಾ ಸಪ್ತಪತಿ ಪಾರಾಯಣ, ರುದ್ರಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ಬಿದಿಗೆ, ತುಳಸಿ ಅರ್ಚನೆ, ಸಂಜೆ ಅಂಕುರಾರ್ಪಣೆ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಪತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ನವಗ್ರಹ ಮೃತ್ಯುಂಜಯ ಹೋಮ, ಮಹೇಶ್ವರಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ವೃಷಭವಾಹನೇಲಂಕಾರ, ಸಂಜೆ 5 ಗಂಟೆಗೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಪಂದನ ಸಾಂಸ್ಕೃತಿಕ ಪರಿಷತ್ತು:** ದಸರಾ ಯುವ ಕವಿಗೋಷ್ಠಿ ಉದ್ಘಾಟನೆ: ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ನಟನ:** ನವರಾತ್ರಿ ನಾಟಕೋತ್ಸವ, ಸ್ಥಳ: ನಟನರಂಗ ಮಂದಿರ, ರಾಮಕೃಷ್ಣನಗರ, ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ- ಕೃಷ್ಣ ತಿಪ್ಪೂರು, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು: ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ್, ಸಂಕಲನ : ಎಸ್. ಲಕ್ಷ್ಮೀನಾರಾಯಣ, 6.35 ಹಾಗೂ 6.10 "ಅಂಚೆ-ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಪ್ರಸ್ತುತಿ- ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 8.30 ಚಿತ್ರಗೀತೆಗಳು, 9.05 ಮೈಸೂರು ಮಹಲುಗಳು: ರೂಪಕ ಸರಣಿ, ಪ್ರಸ್ತುತಿ:-ಡಾ. ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ "ರಕ್ತ ಭೀಜಾಸುರ ಸಂಹಾರ" ನಡೆಸಿಕೊಡುತ್ತಾರೆ ವಿ. ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 "ಕನಕ-ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ- ದಿವಾಕರ ಹೆಗಡೆ, 12.45 ನಮ್ಮ ಆರೋಗ್ಯ: ಸ್ತನ ಕ್ಯಾನ್ಸರ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿ ಕೊಡುತ್ತಾರೆ ಡಾ. ಮೇಖಲಾ ಶ್ವೇತಾದ್ರಿ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ: ಆರ್.ವಿ. ಅನುಪಮ, 3.00 ಶ್ರೀಮತಿ ಸ್ಮಿತಾ ಶ್ರೀಕಿರಣ್: ವೇಣುವಾದನ.

ಸಂಜೆ 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ- ಆರೋಗ್ಯಪೂರ್ಣ ಹಾಗೂ ಕಾಂತಿಯುಕ್ತ ತ್ವಚೆಯನ್ನು ಪಡೆಯುವುದು ಹೇಗೆ? ಭಾಗವಹಿಸುವವರು ಡಾ. ಆರ್.ಸಿ. ಮೈತ್ರೇಯಿ, 4.45 ಹಿಂದಿ ಪಾಠ: ಎಸ್. ಈಶ್ವರ್ ಭಟ್, 6.00 "ಅಂಚೆ-ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು-ಹೊನ್ನು" ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಹಳ್ಳೀ ಹಾಡು: ಪ್ರಸ್ತುತಿ- ಅಬ್ದುಲ್ ರಶೀದ್, 10.00 ನಾಟಕ.

ಮೈಸೂರು ದಸರಾ ಕಾರ್ಯಕ್ರಮ

■ **ಅರಮನೆ ಆವರಣ**



ಸಂಜೆ 4.30ರಿಂದ 5.ರವರೆಗೆ ನಾದಸ್ವರ- ಮೈಸೂರಿನ ಪುಟ್ಟಸ್ವಾಮಿ ಅವರಿಂದ, ಸಂಜೆ 5ರಿಂದ 5.30ರವರೆಗೆ ಮೈಸೂರಿನ ರಮ್ಯ ಮತ್ತು ತಂಡ ಹಾಗೂ ಮಂಡ್ಯದ ಸವಿತ ಚೇರು ಕುನ್ನಮ್ಮ ಮತ್ತು ತಂಡದಿಂದ ಮಹಿಳಾ ಡೊಳ್ಳು-ಮಹಿಳಾ ಪೂಜಾ ಕುಣಿತ, ಸಂಜೆ 5.30ರಿಂದ 6.15ರವರೆಗೆ ಪಿಚ್ಚಳ್ಳಿ ಶ್ರೀನಿವಾಸ ಮತ್ತು ತಂಡದಿಂದ ಕೈವಾರ ತಾತಯ್ಯನ ಅನುಭಾವ ಪದಗಳು, ಸಂಜೆ 6.15ರಿಂದ 7ರವರೆಗೆ ವಿದ್ವಾನ್ ಡಾ.ದುಂಡಯ್ಯ ಪೂಜೇರ ಅವರಿಂದ ತಾಳ-ಗಾನ-ಯಾನ (ಶಾಸ್ತ್ರೀಯ ವಾದ್ಯವೃಂದ ಕಚೇರಿ, ಸಂಜೆ 7ರಿಂದ 8ರವರೆಗೆ ಬೆಂಗಳೂರಿನ ಹರಿ ಮತ್ತು ಚೇತನ ಅವರಿಂದ ಕಥಕ್ ಸಂಭ್ರಮ ರಾತ್ರಿ 9.30ರವರೆಗೆ ಬೆಂಗಳೂರಿನ ಆಯನಾ ಡ್ಯಾನ್ಸ್ ಕಂಪನಿಯಿಂದ ಭಾರತೀಯ ಡ್ಯಾನ್ಸ್ ವೈವಿಧ್ಯ.

■ **ಜಗನ್ಮೋಹನ ಅರಮನೆ**

ಸಂಜೆ 6ರಿಂದ 6.45ರವರೆಗೆ ಎಂ.ಜಿ. ತ್ರಿಲೋಕ ಮತ್ತು ತಂಡದಿಂದ ಪ್ಯಾಕ್ಸೋಫೋನ್, ಸಂಜೆ 6.45ರಿಂದ 7.30ರವರೆಗೆ ಶ್ರೀ ಸಾಯಿ ಕೀರ್ತಿನಾಥ ಸ್ವಾಮೀಜಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 7.30ರಿಂದ 8.30ರವರೆಗೆ ತಾಳವಾದ್ಯ-ಶಿವಗಣೇಶ್ ಅವರಿಂದ ತಾಳವಾದ್ಯ ಬ್ಯಾಂಡ್, ರಾತ್ರಿ 8.30ರಿಂದ 9.30ರವರೆಗೆ ಬೆಂಗಳೂರಿನ ಸೀಮಾ ಜವಾಹರ್ ಅವರಿಂದ ಭರತನಾಟ್ಯ.

■ **ಕರ್ನಾಟಕ ಕಲಾಮಂದಿರ**

ಸಂಜೆ 6ರಿಂದ 6.45ರವರೆಗೆ ಮೈಸೂರಿನ ಶ್ರೇಯ ಕಶ್ಯಪ್ ಅವರಿಂದ ಭರತನಾಟ್ಯ, ಸಂಜೆ 6.45ರಿಂದ 7.30ರವರೆಗೆ ಉಡುಪಿಯ ಕಲಾವತಿ ದಯಾನಂದ್ ಅವರಿಂದ ಸುಗಮ ಸಂಗೀತ, ಸಂಜೆ 7.30ರಿಂದ 8.30ರವರೆಗೆ ಸೌಮ್ಯ ನೃತ್ಯ ಶಾಲೆಯವರಿಂದ ಜಾನಪದ ನೃತ್ಯ, ರಾತ್ರಿ 8.30ರಿಂದ 9.30ರವರೆಗೆ ಸರಸ್ವತಿ ಕಲಾ ಪ್ರತಿಷ್ಠಾನದಿಂದ ಕನ್ನಡವೇ ಸತ್ಯ-ಗೀತಗಾಯನ.

■ **ಗಾನಭಾರತಿ**

ಸಂಜೆ 6ರಿಂದ 6.45ರವರೆಗೆ ವಿದುಷಿ ರೇಣುಕಾ ನಾಕೋಡ ಅವರಿಂದ ಸ್ವರವಾದ್ಯ ಸಂಗೀತ, ಸಂಜೆ 6.45ರಿಂದ 7.30ರವರೆಗೆ ಕೈಲಾಸ್ ಕಲಾವಿದ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್‌ನ ಡಾ.ಕೆ. ಜಯಲಕ್ಷ್ಮಿ ಜಿತೇಂದ್ರ ಅವರಿಂದ ನೃತ್ಯ ರೂಪಕ, ಸಂಜೆ 7.30 ರಿಂದ 8ರವರೆಗೆ ಮೈಸೂರಿನ ಪ್ರಭುರಾವ್ ಮತ್ತು ತಂಡದಿಂದ ವಚನ ಗಾಯನ, ರಾತ್ರಿ 8.30ರಿಂದ 9.30ರವರೆಗೆ ಕು.ಮೇಘನಾ ಚಂದ್ರಮೌಳಿ ಮತ್ತು ತಂಡದಿಂದ ಕೂಚುಪುಡಿ ನೃತ್ಯ.

■ **ನಾದಬ್ರಹ್ಮ ಸಂಗೀತಾ ಸಭಾ**

ಸಂಜೆ 6 ರಿಂದ 6.45ರವರೆಗೆ ವಿಜಯನಗರದ ಎಸ್.ಶ್ಯಾವಳಿಗಪ್ಪ ಅವರಿಂದ ಪೌರಾಣಿಕ ರಂಗಗೀತೆ, ಸಂಜೆ 6.45ರಿಂದ 7.30ರವರೆಗೆ ಕಲ್ಬುರ್ಗಿಯ ಬಸವಣ್ಣಪ್ಪ ಮಂಡೋಡಗಿ ಅವರಿಂದ ಜಾನಪದ ಗಾಯನ, ಸಂಜೆ 7.30 ರಿಂದ 8.30ರವರೆಗೆ ಬೆಂಗಳೂರಿನ ಎ.ಆರ್. ಹರ್ಷಿತ ಅವರಿಂದ ಭರತನಾಟ್ಯ, ಕನ್ನಡ ಕಲಾಲಯ ಟ್ರಸ್ಟ್‌ನ ವಿದುಷಿ ಪ್ರಿಯಾಂಕ ತರುಣ್ ಅವರಿಂದ ನೃತ್ಯರೂಪಕ, ರಾತ್ರಿ 8.30ರಿಂದ 9.30ರವರೆಗೆ ಮೈಸೂರಿನ ಸ್ವಪ್ನ ಸುಂದರ್ ಮತ್ತು ತಂಡದಿಂದ ಸುಗಮ ಸಂಗೀತ.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6ರಿಂದ 6.45ರವರೆಗೆ ಮೈಸೂರಿನ ಮೇಘನಾದ ಚಂಡೆ ಬಳಗದಿಂದ ಮಹಿಳಾ ಚಂಡೆವಾದನ, ಸಂಜೆ 6.45ರಿಂದ 7.30ರವರೆಗೆ ಚಾಮರಾಜನಗರ ಜಿಲ್ಲಾ ಸೋಬಾನೆ ಪದ ಕಲಾವಿದರಿಂದ ಸೋಬಾನೆ ಪದ, ಸಂಜೆ 7.30ರಿಂದ 8.30ರವರೆಗೆ ಬೀದರ್‌ನ ಅಖಿಲ ಭಾರತ ಗೊಂದಳಿ ಸಂಘಟನೆಯ ಡಾ.ಸಿದ್ರಾಮ್ ಡಿ.ವಾಘಮೊರೆ ಅವರಿಂದ ಗೊಂದಳಿ ಪದಗಳು, ರಾತ್ರಿ 8.30ರಿಂದ 9.30ರವರೆಗೆ ಚಿತ್ರದುರ್ಗದ ಕೆ.ಒ.ಶಿವಣ್ಣನವರಿಂದ ಸುಗಮ ಸಂಗೀತ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ 12.30ರವರೆಗೆ ಬೆಂಗಳೂರಿನ ಡಿಂಗ್ರಿ ನಾಗರಾಜ್ ಮಿತ್ರಮಂಡಳಿಯಿಂದ 'ಧರ್ಮದೇವತೆ' ಸಾಮಾಜಿಕ ನಾಟಕ, ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಚಿಕ್ಕನಾಯಕ ಮತ್ತು ತಂಡದಿಂದ 'ಪಂಚವಟಿ ರಾಮಾಯಣ' ಪೌರಾಣಿಕ ನಾಟಕ, ಸಂಜೆ 6ರಿಂದ 9ರವರೆಗೆ ಮೈಸೂರಿನ ಶ್ರೀ ಸಿದ್ದರಾಮೇಶ್ವರ ಕನ್ನಡ ಕಲಾ ಸಂಘದಿಂದ 'ಚಂದ್ರಮ್ಮನ ಶಾಪ ಮೋಚನೆ' ಪೌರಾಣಿಕ ನಾಟಕ.

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ 2.45ರವರೆಗೆ ಹಾಸನದ ತೀರ್ಥನ್ ಮತ್ತು ತಂಡದಿಂದ ಕೋಲಾಟ, ಹಾಸನದ ಸುಮಲತ ಮತ್ತು ತಂಡದಿಂದ ಕರಗ ನೃತ್ಯ, ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಮೈಸೂರಿನ ಇಂಟಿಮೇಟ್ ಥಿಯೇಟರ್‌ನಿಂದ 'ನೋವು ಕೇಳದ ಕಾವಿಗಳು' ನಾಟಕ, ಸಂಜೆ 7 ಗಂಟೆಯಿಂದ ರಾತ್ರಿ 9ರವರೆಗೆ ಮೈಸೂರಿನ ಜಿಪಿಐಆರ್ ತಂಡದಿಂದ 'ಆಲ್‌ರೈಟ್ ಮತ್ತು ಮಾಂಗಲ್ಯ' ನಾಟಕ.

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30ರಿಂದ 6.30ರವರೆಗೆ ಶಿಕಾರಿ ತಿಮ್ಲಾಪುರ ಗ್ರಾಮದ ಶ್ರೀ ಕನಕ ಡೊಳ್ಳಿನ ಸಂಘದಿಂದ ಡೊಳ್ಳು ಕುಣಿತ, ಕಡೂರಿನ ಕೆರೆ ಸಂತೆ ಶ್ರೀ ಮಹಾಲಕ್ಷ್ಮಿ ಭಜನಾ ಮಂಡಳಿಯ ರಂಜಿತಾ ಎಂ.ರಾಯ್ಕರ್ ಅವರಿಂದ ಭಜನೆ, ಸಂಜೆ 6.30ರಿಂದ 7.30ರವರೆಗೆ ಸಿದ್ದರಾಮನಹುಂಡಿಯ ನಾಟ್ಯಾಂಕುರ ಪರ್ಫಾರ್ಮಿಂಗ್ ಆರ್ಟ್ಸ್ ಕಲಾಕೇಂದ್ರದ ಬಿ.ನಾಗೇಶ್ ಅವರಿಂದ ಮೋಹಿನಿ ಭಸ್ಮಾಸುರ ನೃತ್ಯರೂಪಕ, ಸಂಜೆ 7.30ರಿಂದ 9.30ರವರೆಗೆ ಮೈಸೂರಿನ ವಸಂತ ಮಿತ್ರ ಮಂಡಳಿಯಿಂದ ಸಾಮಾಜಿಕ ನಾಟಕ.

■ **ನಟನ ರಂಗಮಂದಿರ**

ಸಂಜೆ 5ರಿಂದ 6ರವರೆಗೆ ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ- ಹೆಚ್.ಎಸ್.ತಾಂಡವಮೂರ್ತಿ ಅವರಿಂದ ಪಿಟೀಲು ವಾದನ, ಸಂಜೆ 6.30ರಿಂದ 8.30ರವರಗೆ ಬೆಂಗಳೂರಿನ ರಂಗಸೌರಭ ಕಲಾವಿದರಿಂದ 'ಮಾವಿನಗುಡಿ ಕಾಲೋನಿ' ನಾಟಕ.

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6ರಿಂದ 6.45ರವರೆಗೆ ಮಂಡ್ಯದ ಕೆ.ಜಿ.ರಮೇಶ್ ಮತ್ತು ತಂಡದಿಂದ ಪೂಜಾ ಕುಣಿತ, ಹದಗದ ಶ್ರೀ ಕೋಟೆ ವೀರ ಭದ್ರೇಶ್ವರ ನಂದಿಕೋಲು ಸಮ್ಮಾಳ ಮೇಳದಿಂದ ಸಮ್ಮಾಳ ಮೇಳ, ಸಂಜೆ 5.45ರಿಂದ 7.30ರವರೆಗೆ ಮೈಸೂರಿನ ಜಿಲ್ಲೆ ಹೆಚ್.ಡಿ. ಕೋಟೆ ತಾಲೂಕಿನ ಹೆಚ್.ಬಿ.ಮರಿಸ್ವಾಮಿ ಮತ್ತು ತಂಡಿದಿಂದ ಸುಗಮ ಸಂಗೀತ, ಸಂಜೆ 7.30ರಿಂದ ರಾತ್ರಿ 8.30ರವರೆಗೆ ಓ.ಹಿಲೇಶ ಲಕ್ಷ್ಮಣ ಅವರಿಂದ ಬೊಮ್ಮನಹಳ್ಳಿಯ ಕಿಂದರಿಜೋಗಿ ನೃತ್ಯರೂಪಕ, ರಾತ್ರಿ 8.30ರಿಂದ 9.30ರವರೆಗೆ ಮೈಸೂರು ರಮ್ಯ ಕಲಾ ಪ್ರತಿಷ್ಠಾನದಿಂದ ಜಾನಪದ ಗೀತೆ.

ಮಹಿಳಾ ಮತ್ತು ಮಕ್ಕಳ ದಸರಾ-2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ರಂಗೋಲಿ ಚಿತ್ತಾರ ಉದ್ಘಾಟನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀ ಕರಣ ಸಚಿವೆ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಸ್ಥಳ: ಅಂಬಾವಿಲಾಸ ಅರಮನೆ ಮುಂಭಾಗ, ಬೆಳಗ್ಗೆ 7.30ರಿಂದ ಮಹಿಳಾ ದಸರಾ ಉದ್ಘಾಟನೆ ಬೆಳಗ್ಗೆ 11 ಗಂಟೆಗೆ ನಾಡಗೀತೆ-ನಾಗರಾಜು, ಪಿರಿಯಾಪಟ್ಟಣದ ಕುಮಾರ್ ಮತ್ತು ಸಂಗಡಿಗರಿಂದ ಡೊಳ್ಳು ಕುಣಿತ, ಮಧ್ಯಾಹ್ನ 2.30ರಿಂದ ಗಿಚ್ಚಿ ಗಿಲಿಗಿಲಿ ಕಾರ್ಯಕ್ರಮ-ಚಂದ್ರಪ್ರಭಾ ಮತ್ತು ವಿನೋದ್ ಗೊಬ್ಬರಗಾಲ, ಸುಮರಾಜ್‌ಕುಮಾರ್ ಅವರಿಂದ ಮಿಮಿಕ್ರಿ ಕಾರ್ಯಕ್ರಮ (ಮಾತನಾಡುವ ಗೊಂಬೆ), ಮೈಸೂರು ನೃತ್ಯ ವಿದ್ಯಾಪೀಠದಿಂದ ಭರತನಾಟ್ಯ ಕಾರ್ಯಕ್ರಮ, ಮೈಸೂರು ಗ್ರಾಮಾಂತರ ಮತ್ತು ನಗರ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿಯ ಕಾರ್ಯಕರ್ತರಿಂದ ಸಮೂಹ ನೃತ್ಯ ಕಾರ್ಯಕ್ರಮ ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್):**

ಕನ್ನಡ ಚಿತ್ರಗಳು: ಬೆಳಗ್ಗೆ 10ಕ್ಕೆ-ಬಂಗಾರದ ಮನುಷ್ಯ, ಮಧ್ಯಾಹ್ನ 1ಕ್ಕೆ-ಗಂಧದ ಗುಡಿ, ಸಂಜೆ 4ಕ್ಕೆ-ಬನಾರಸ್, ಸಂಜೆ 7ಕ್ಕೆ-ಕನ್ನಡಿ.

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ಅಂತರ್ಮುಖಿ, 1.15ಕ್ಕೆ ಬ್ರಹ್ಮ ಕಮಲ, ಸಂಜೆ 4.15ಕ್ಕೆ ಕಿಡಿಗಳು, ಸಂಜೆ 7.15ಕ್ಕೆ ಇನ್.

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ಸವೆನ್ ಸಮುರಾಯ್, ಮಧ್ಯಾಹ್ನ 1.30ಕ್ಕೆ ಅಟ್‌ವಾರ್, ಸಂಜೆ 4.30ಕ್ಕೆ ದಟ್ರುತ್, ಸಂಜೆ 7.30ಕ್ಕೆ ದ ಸರ್ಕಸ್.

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ-ಲಕ್ಕಿ ಮ್ಯಾನ್, ಮಧ್ಯಾಹ್ನ 1 ಗಂಟೆಗೆ ತೋತಾಪುರಿ, ಸಂಜೆ 4 ಗಂಟೆಗೆ ವೀರಂ, ಸಂಜೆ 7 ಗಂಟೆಗೆ ತತ್ಸಮ ತದ್ಭವ.

■ **ಕಿರು ಚಿತ್ರಗಳು:** ಸಂಜೆ 4.15ಕ್ಕೆ ದಾರಿದೀಪ ಮತ್ತು ಘಮ ಘಮ, ಸಂಜೆ 7.15ಕ್ಕೆ ಉಯಿಲು ಮತ್ತು ಪರಿವರ್ತನೆ.

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯುವರೆಗೆ, ವೈವಿಧ್ಯಮಯ ತಿಂಡಿ-ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ. ಜಿಲ್ಲಾಧಿಕಾರಿ ಕಚೇರಿ ಹಿಂಭಾಗ.

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ಗ್ರಾಮೀಣ ಯೋಗ, ಸಾಮಾಜಿಕ ಯೋಗಾಭ್ಯಾಸ ಮತ್ತು ಶಿವ ನಮಸ್ಕಾರ:** ಉದ್ಘಾಟನೆ: ಶಾಸಕ ದರ್ಶನ್ ಧ್ರುವನಾರಾಯಣ್, ಸ್ಥಳ: ಶ್ರೀ ನಂಜುಂಡೇಶ್ವರ ದೇವಸ್ಥಾನದ ಆವರಣ, ನಂಜನಗೂಡು ಬೆಳಗ್ಗೆ 6 ಗಂಟೆಯಿಂದ.

ಅರಮನೆ ಆವರಣದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ

ಸಂಗೀತ ಸಾಧಕಿ ಡಾ.ಪದ್ಮಾ ಮೂರ್ತಿಗೆ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ

ಮೈಸೂರು, ಅ.15(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯ ಕ್ರಮಗಳಿಗೆ ಅರಮನೆ ಅಂಗಳದ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿದ್ಯುಕ್ತ ಚಾಲನೆ ನೀಡಿದರು.

ವೇದಿಕೆ ಇಕ್ಕೆಲದಿಂದ ಮೊಳಗಿದ ಕಹಳೆ ಸದ್ದಿನ ನಡುವೆ ಗಣ್ಯರೊಡಗೂಡಿ ದೀಪ ಬೆಳಗುವ ಮೂಲಕ ಅರಮನೆ ಪ್ರಧಾನ ವೇದಿಕೆ ಸೇರಿದಂತೆ ಒಟ್ಟು 11 ವೇದಿಕೆಗಳಲ್ಲಿ ನಡೆಯಲಿರುವ ಸಾಂಸ್ಕೃತಿಕ ವೈಭವಕ್ಕೆ ಚಾಲನೆ ನೀಡಿದರು. ಈ ವೇಳೆಗೆ ಅಂಬಾವಿಲಾಸ ಅರಮನೆಯ ವಿದ್ಯುತ್ ದೀಪಗಳು ಪ್ರಜ್ವಲಿಸಿದ್ದು ಮನಮೋಹಕವಾಗಿತ್ತು. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ಕೊಡಮಾಡುವ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ(5 ಲಕ್ಷ ನಗದು, ಸರಸ್ವತಿ ವಿಗ್ರಹ ಸ್ಮರಣಿಕೆ)ಯನ್ನು ಸಂಗೀತ ಸಾಧಕಿ 91 ವರ್ಷದ ಡಾ.ಪದ್ಮಾ ಮೂರ್ತಿ ಅವರಿಗೆ ಪ್ರದಾನ ಮಾಡಿ, ಆತ್ಮೀಯವಾಗಿ ಗೌರವಿಸಲಾಯಿತು.

ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಮೈಸೂರಿನ ರಾಜ ಮಹಾರಾಜರು ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆಯನ್ನು ಪೋಷಿಸಿಕೊಂಡು ಬಂದಿದ್ದರು. ಇದನ್ನು ರಾಜ್ಯ ಸರ್ಕಾರವೂ ಮುಂದುವರೆಸಿಕೊಂಡು ಬಂದಿದೆ. ಮೈಸೂರು ದಸರಾ ಸಂದರ್ಭದಲ್ಲಿ ಮೂವತ್ತು ವರ್ಷಗಳಿಂದ ಕಲಾ ಸಾಧಕರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ. ಮೊದಲು 1993ರಲ್ಲಿ ಪುಟ್ಟರಾಜ ಗವಾಯಿ ಅವರಿಗೆ ಪ್ರಶಸ್ತಿ ಸಂದಿತ್ತು. ಪ್ರಸ್ತುತ ಡಾ.ಪದ್ಮಾ ಮೂರ್ತಿ ಅವರು ಬಾಜನರಾಗಿದ್ದಾರೆ ಎಂದರು.

ದೇಶ–ವಿದೇಶಗಳಲ್ಲಿ ಸಂಗೀತ ಕಚೇರಿ ನೀಡುವ ಮೂಲಕ ಪ್ರಸಿದ್ಧರಾಗಿರುವ ಡಾ.ಪದ್ಮಾ ಮೂರ್ತಿ ಅವರು ಸುದೀರ್ಘ ಕಲಾ ಸೇವೆ ಸಲ್ಲಿಸಿದ್ದಾರೆ. ಇವರು ಹುಟ್ಟಿ, ಬೆಳೆದಿದ್ದು ಮೈಸೂರಿನಲ್ಲಿ. ಅವರ ಸಂಗೀತ ಕಲಿತಿದ್ದೂ ಇಲ್ಲಿಯೇ. ಅವರ ತಂದೆ ನಮ್ಮೊಂದಿಗೆ ಸೀನಿಯರ್ ಲಾಯರ್ ಆಗಿದ್ದರು. ಶ್ರದ್ಧಾಭಕ್ತಿಯಿಂದ ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಪದ್ಮಾ ಮೂರ್ತಿ ಅವರನ್ನು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಶ್ಲಾಘನೀಯ. ಅರಮನೆ ಮುಂಭಾಗದ ವೇದಿಕೆಯಲ್ಲಿ ಮೈಸೂರಿನ ಮಗಳಿಗೆ ಪ್ರಶಸ್ತಿ ಪ್ರದಾನ ಮಾಡಿದ್ದು, ನಮ್ಮೆಲ್ಲರಿಗೂ ಹೆಮ್ಮೆ. ಸರ್ಕಾರದ ಪರವಾಗಿ ಹಾಗೂ ವೈಯಕ್ತಿಕವಾಗಿ ಇವರಿಗೆ ಅಭಿನಂದನೆ ಸಲ್ಲಿಸುತ್ತೇನೆ. 91 ವರ್ಷವಾದರೂ ಇವರ ಕಂಠ ಚೆನ್ನಾಗಿದೆ, ಸ್ಪಷ್ಟ ಧ್ವನಿ ಇದೆ. ಇವರು ನೂರು ವರ್ಷಗಳಿಗೂ ಹೆಚ್ಚು ಕಾಲ ಆರೋಗ್ಯವಾಗಿದ್ದು ಸಂಗೀತ ಕ್ಷೇತ್ರಕ್ಕೆ ಮತ್ತಷ್ಟು ಕೊಡುಗೆ ನೀಡುವುದರ ಜೊತೆಗೆ ಯುವ ಸಂಗೀತಗಾರರಿಗೆ ಮಾರ್ಗದರ್ಶನ ನೀಡಲಿ ಎಂದು ಆಶಿಸಿದರು.

ರಾಜ್ಯದ ವಿಶೇಷ ಹಬ್ಬ: ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಮಾತನಾಡಿ, ದುಷ್ಟ ಶಕ್ತಿಗಳ ಸಂಹರಿಸಿ ಲೋಕಕ್ಕೆ ಶುಭವನ್ನುಂಟು ಮಾಡಿದ ಪ್ರತೀತಿಯಾಗಿ ದಸರಾ ಆಚರಿಸಲಾಗುತ್ತದೆ. ದಸರಾ ರಾಜ್ಯದ ವಿಶೇಷ ಹಬ್ಬ. ಆರಂಭದಲ್ಲಿ ವಿಜಯನಗರ ಸಂಸ್ಥಾನ ನಂತರ ಶ್ರೀರಂಗಪಟ್ಟಣದಲ್ಲಿ ನಡೆದ ದಸರಾ ಮೈಸೂರು ಸಂಸ್ಥಾನದಲ್ಲಿ ಮುಂದುವರೆದುಕೊಂಡು ಬಂದಿತು. ರಾಜ ಮಹಾರಾಜರು ಕಲೆ, ಸಾಹಿತ್ಯ, ಸಂಗೀತ, ನೃತ್ಯವನ್ನು ಪೋಷಿಸಿಕೊಂಡು ಬಂದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಉತ್ತಮ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದರು.

ಸಾರ್ಥಕತೆ ಲಭಿಸಿದೆ: ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಇದು ನನ್ನ ಪಾಲಿನ ಶುಭದಿನ. ಸಂಗೀತ ದಿಗ್ಗಜರು, ಅರಮನೆ ಬಳಿ ಕಚೇರಿ ನಡೆಸಯವ ಅವಕಾಶ ಸಿಕ್ಕರೆ ಜೀವನ ಪಾವನ ಎನ್ನುತ್ತಿದ್ದರು. ನಾವು ಹಲವು ಸಂಗೀತ ದಿಗ್ಗಜರ ಕಾರ್ಯಕ್ರಮ ಕಣ್ತುಂಬಿಕೊಂಡಿದ್ದೇನೆ. ಆದರೆ ಇಂದು ವೇದಿಕೆಯಲ್ಲಿ ಡಾ.ಪದ್ಮಾಮೂರ್ತಿ ಸನ್ಮಾನದಲ್ಲಿ ನಾನು ಭಾಗಿಯಾಗಿದ್ದು ನನ್ನ ಸುದೈವ ಎಂದರು.

ಸಮಾರಂಭದಲ್ಲಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ಜೆ.ಜಾರ್ಜ್, ಶಾಸಕರಾದ ತನ್ವೀರ್ ಸೇಠ್, ಎ.ಆರ್.ಕೃಷ್ಣಮೂರ್ತಿ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ.ಎನ್.ಮಂಜುಳಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಗಾಯತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಮಣ್ಯ ಮತ್ತಿತರರು ಉಪಸ್ಥಿತರಿದ್ದರು.

ವೈವಿಧ್ಯಮಯ ಕಾರ್ಯಕ್ರಮ: ಉದ್ಘಾಟನೆಗೆ ಮುನ್ನ ವಿದ್ವಾನ್ ಎಸ್.ಪುಟ್ಟರಾಜು ಹಾಗೂ ಯದುಕುಮಾರ್ ತಂಡದವರಿಂದ 'ನಾದಸ್ವರ' ಪ್ರಸ್ತುತಿ ಹಾಗೂ ರಾಜಪ್ಪ ಮತ್ತು ಮಲ್ಲೇಶ್ ತಂಡದವರಿಂದ 'ವೀರಭದ್ರ ಕುಣಿತ' ನೆರವೇರಿತು. ನಂತರ ಖ್ಯಾತ ಚಿತ್ರನಟಿ ಭಾವನ ರಾಮಣ್ಣ ನೇತೃತ್ವದಲ್ಲಿ ಮೂಡಿಬಂದ 'ಶ್ರೀ ಚಾಮುಂಡೇಶ್ವರಿ ಮರ್ದಿನಿ ಸಿಂಹವಾಹಿನಿ' ನೃತ್ಯರೂಪಕ ಹಾಗೂ ಅಜಯ್ ವಾರಿಯರ್ ಹಾಗೂ ಸುನೀತಾ ತಂಡದ 'ಸಂಗೀತ ಯಾನ' ಕಿಕ್ಕಿರಿದಿದ್ದ ಕಲಾಪ್ರೇಮಿಗಳ ಹೃನ್ಮನ ತಣಿಸಿತು. ಜಗನ್ಮೋಹನ ಅರಮನೆ, ಕಲಾಮಂದಿರ, ಗಾನಭಾರತಿ, ನಾದಬ್ರಹ್ಮ, ಚಿಕ್ಕ ಗಡಿಯಾರ, ಪುರಭವನ, ಕಿರುರಂಗಮಂದಿರ, ರಮಾಗೋವಿಂದ ರಂಗಮಂದಿರ, ನಟನ ರಂಗ ಮಂದಿರ ಹಾಗೂ ನಂಜನಗೂಡು ವೇದಿಕೆಗಳಲ್ಲೂ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಿದವು.



ಮೈಸೂರಿನ ಅರಮನೆ ಅಂಗಳದ ಭವ್ಯ ವೇದಿಕೆಯಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯುಯ್ಯನವರು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಇನ್ನಿತರ ಗಣ್ಯರೊಡಗೂಡಿ ಸಂಗೀತ ವಿದ್ವಾಂಸರಾದ ಡಾ.ಪದ್ಮಾ ಮೂರ್ತಿ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು.



ಅರಮನೆ ವೇದಿಕೆ ಬದಿಯಲ್ಲಿಟ್ಟಿದ್ದ ಎರಡು ಬೃಹತ್ ಸೈಕಲ್ ಅಗರ್‌ಬತ್ತಿಗಳನ್ನು ಸಿಎಂ ಸಿದ್ದಾಮಯ್ಯ ಹೊತ್ತಿಸಿದರು.



ಚಿತ್ರನಟಿ ಭಾವನ ರಾಮಣ್ಣ ನೇತೃತ್ವದಲ್ಲಿ 'ಶ್ರೀ ಚಾಮುಂಡೇಶ್ವರಿ ಮರ್ದಿನಿ ಸಿಂಹವಾಹಿನಿ' ನೃತ್ಯರೂಪಕ

ಇದು ಬಹುದೊಡ್ಡ ಪ್ರಶಸ್ತಿ...

'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪುರಸ್ಕೃತರಾದ ಡಾ.ಪದ್ಮಾ ಮೂರ್ತಿ ಅವರು 'ಗುರು ಬ್ರಹ್ಮ, ಗುರು ವಿಷ್ಣು...' ಹಾಡುವ ಮೂಲಕ ಗುರುಗಳನ್ನು ಸ್ಮರಿಸಿಕೊಂಡು ಮಾತನಾಡಿದರು. ನನ್ನ ತವರೂರು ಹೆಮ್ಮೆಯ ಮೈಸೂರು. ವಿದ್ಯಾಭ್ಯಾಸವಾಗಿದ್ದು ಇಲ್ಲೇ. ತಂದೆ–ತಾಯಿ ಉತ್ತೇಜನ, ನುರಿತ ಗುರುಗಳ ಆಶೀರ್ವಾದ, ಪತಿ ಮತ್ತು ಮಕ್ಕಳ ಸಹಕಾರ, ಶ್ರೋತೃಗಳ ಆಶೀರ್ವಾದದಿಂದ ಸಂಗೀತ ಸಾಧನೆ ಸಾಧ್ಯವಾಗಿದೆ. ಕರ್ನಾಟಕ ಸಂಗೀತದಲ್ಲಿ ನನ್ನ ಅಳಿಲು ಸೇವೆ ಗುರುತಿಸಿ ರಾಜ್ಯ ಸರ್ಕಾರ ಈ ಪ್ರಶಸ್ತಿ ನೀಡಿ, ಗೌರವಿಸಿದೆ. ಇದು ಜನ್ಮದಲ್ಲಿ ಮರೆಯಲಾಗದ ಪರ್ವ ದಿನ. ಇದು ಬಹುದೊಡ್ಡ ಪ್ರಶಸ್ತಿ. ಇದಕ್ಕಾಗಿ ಮುಖ್ಯಮಂತ್ರಿಗಳು ಸೇರಿ ಸಂಬಂಧಪಟ್ಟವರೆಲ್ಲರಿಗೂ ಧನ್ಯವಾದಗಳು. ಎಲ್ಲವೂ ದೈವ ಕೃಪೆ. ಎಲ್ಲರಿಗೂ ಹೃದಯಸ್ಪರ್ಶಿ ನಮಸ್ಕಾರ ಎಂದರು.

ನೆಂಟರಿಷ್ಟರೊಂದಿಗೆ ಸಂಭ್ರಮಿಸಿ

ಈ ವರ್ಷ ಅದ್ದೂರಿಯಾಗಿ ದಸರಾ ಆಚರಿಸುವ ಇಂಗಿತವಿತ್ತಾದರೂ ಮಳೆ ಅಭಾವದಿಂದ ರೈತರಿಗೆ ಅಪಾರ ನಷ್ಟವಾಗಿದೆ. ಆಹಾರ ಉತ್ಪಾದನೆಯೂ ಕುಂಠಿತವಾಗಿದೆ. ಹಾಗಾಗಿ ಸರಳ ಹಾಗೂ ತುಂಬಾ ಅದ್ದೂರಿಯೂ ಅಲ್ಲದ ಸಾಂಪ್ರದಾಯಿಕ ದಸರಾ ಆಚರಿಸಲಾಗುತ್ತಿದೆ. ನವರಾತ್ರಿ ಉತ್ಸವದ ಬಳಿಕ ವಿಜಯದಶಮಿಯಂದು ಜಂಬೂಸವಾರಿ ಜರುಗಲಿದೆ. ಎಲ್ಲರೂ ತನ್ನ ನೆಂಟರಿಷ್ಟರನ್ನು ಆಹ್ವಾನಿಸಿ, ದಸರಾವನ್ನು ಸಂತೋಷದಿಂದ ಆಚರಿಸಿ ಎಂದು ಎಲ್ಲರಿಗೂ ದಸರಾ ಮಹೋತ್ಸವದ ಶುಭಾಶಯ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ನವರಾತ್ರಿ ರಂಗೋತ್ಸವಕ್ಕೆ ಚಾಲನೆ; 9 ದಿನಗಳ ಕಾಲ ವಿವಿಧ ನಾಟಕ ಪ್ರದರ್ಶನ

ಹಿರಿಯ ರಂಗಕರ್ಮಿ ಎ.ನಾರಾಯಣರೈ ಅವರಿಗೆ ನವರಾತ್ರಿ ರಂಗಗೌರವ ಪುರಸ್ಕಾರ ಪ್ರದಾನ



ಮೈಸೂರು,ಅ.15(ಪಿಎಂ)– ರಂಗಾಯಣದ ವತಿಯಿಂದ 9 ದಿನಗಳ ಕಾಲ ಹಮ್ಮಿಕೊಂಡಿರುವ ನವರಾತ್ರಿ ರಂಗೋತ್ಸವಕ್ಕೆ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ಚಾಲನೆ ನೀಡಿದರು.

ರಂಗಾಯಣದ ಭೂಮಿಗೀತ ರಂಗ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಂಗೋತ್ಸವಕ್ಕೆ ಚಾಲನೆ ನೀಡಿದ ಅವರು, ಇದೇ ವೇಳೆ ಹಿರಿಯ ರಂಗಕರ್ಮಿ ಎ.ನಾರಾಯಣ ರೈ ಅವರಿಗೆ ನವರಾತ್ರಿ ರಂಗಗೌರವ ಪುರಸ್ಕಾರ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಸಚಿವರು, ಕಲೆಗಳನ್ನು ಗುರುತಿಸಿ ಬೆಳೆಸುವಂತಹ ಕಾರ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತಾ ಬಂದಿದೆ. ಮೈಸೂರು ರಂಗಾಯಣ ಅನೇಕ ರಂಗಕರ್ಮಿಗಳನ್ನು ಬೆಳಕಿಗೆ ತಂದಿದೆ. ಈ ಬಾರಿಯ ನವರಾತ್ರಿ ರಂಗೋತ್ಸವದಲ್ಲಿ ಎ.ನಾರಾಯಣ ರೈ ಅವರಿಗೆ ರಂಗಗೌರವ ಪುರಸ್ಕಾರ ನೀಡಿರುವುದು ಸಂತಸದ ಸಂಗತಿ ಎಂದರು.

ಎ.ನಾರಾಯಣ ರೈ ಅವರು ಮೂಲತಃ ಕಾಸರಗೋಡು ಸಮೀಪದ ಏವುಂಜೆ ಎಂಬ ಪುಟ್ಟ ಗ್ರಾಮದವರು. ಅಲ್ಲೇ ಬಾಲ್ಯವನ್ನು ಕಳೆದ ಇವರು ಕುಟುಂಬದ ನಿರ್ವಹಣೆಗಾಗಿ ಉದ್ಯೋಗ ಅರಿಸಿಕೊಂಡು ಹುಣಸೂರಿಗೆ ಬಂದು ನೆಲೆಸಿದರು. ಕಲೆಯ ಸೆಳೆತದಿಂದ ನಾಟಕ ರಂಗದಲ್ಲಿ ತೊಡಗಿಸಿಕೊಂಡ ಇವರು, ಭೂತಕೋಲ, ದೈವಾರಾಧನೆ, ಬಯಲಾಟ, ಯಕ್ಷಗಾನದಂತಹ ದೇಸಿ ಕಲೆಗಳನ್ನು ಹುಣಸೂರಿಗೆ ಪರಿಚಯಿಸಿದವರು. ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳನ್ನು ಆಡುತ್ತಾ, ಆಡಿಸುತ್ತಾ ಹುಣಸೂರನ್ನು ಕಲೆಯ ಸಿರಿನೆಲವನ್ನಾಗಿಸುವಲ್ಲಿ ವಿಶಿಷ್ಟ ಕೊಡುಗೆ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನವರಾತ್ರಿ ಬೊಂಬೆ ಪ್ರದರ್ಶನ: ಇದಕ್ಕೂ ಮುನ್ನ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಹಮ್ಮಿಕೊಂಡಿರುವ ನವರಾತ್ರಿ ಬೊಂಬೆ ಹಬ್ಬಕ್ಕೆ (ಪ್ರದರ್ಶನ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಎನ್.ಮಂಜುಳಾ ಚಾಲನೆ ನೀಡಿದರು.

ಮೈಸೂರಿನ ವಿಶ್ವೇಶ್ವರನಗರದ ಶಶಿಕಲಾ ಗೋವಿಂದರಾಜ್ ಮತ್ತು ಕುಟುಂಬದವರು ಈ ಬೊಂಬೆ ಪ್ರದರ್ಶನ ಕಲೆಯ ಕಲಾವಿದರಾಗಿದ್ದಾರೆ. ಸಾರ್ವಜನಿಕರು ಪ್ರತಿದಿನ ಬೆಳಗ್ಗೆ 10.30ರಿಂದ ರಾತ್ರಿ 8ರವರೆಗೆ ಈ ಬೊಂಬೆ ಪ್ರದರ್ಶನವನ್ನು ಉಚಿತವಾಗಿ ವೀಕ್ಷಿಸಬಹುದು.

ಇದೇ ಸಂದರ್ಭದಲ್ಲಿ ರಂಗಾಯಣದ ಆವರಣದಲ್ಲಿ ರಂಗಾಯಣ ಮತ್ತು ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ನಾಟಕಗಳ ಛಾಯಾಚಿತ್ರ ಮತ್ತು ಭಿತ್ತಿಚಿತ್ರ ಪ್ರದರ್ಶನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಮತ್ತಿತರರು ಹಾಜರಿದ್ದರು.

ಪ್ರತಿದಿನ ಪ್ರದರ್ಶನಗೊಳ್ಳುವ ನಾಟಕಗಳು...

ರಂಗಾಯಣದ ಭೂಮಿಗೀತದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕಗಳು ಪ್ರದರ್ಶನಗೊಳ್ಳಲಿದ್ದು, ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ. ಭಾನುವಾರ ರಂಗಾಯಣ ರೆಪರ್ಟರಿ ವತಿಯಿಂದ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ ಕಂಡಿತು.


ಅಂತೆಯೇ ಅ.16ರಂದು ಮೈಸೂರು ರಂಗಾಯಣದ ರಂಗಶಿಕ್ಷಣ ಕೇಂದ್ರದ ವತಿಯಿಂದ 'ವೆನಿಸ್ಸಿನ ವ್ಯಾಪಾರಿ', 17ರಂದು ಹಾರ್ಡ್ವಿಕ್ ಸ್ವತಂತ್ರ ಪದವಿಪೂರ್ವ ಕಾಲೇಜು ವಿದ್ಯಾರ್ಥಿ ತಂಡದ ವತಿಯಿಂದ 'ಕಿಂದರಿಜೋಗಿ', 18ರಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ತಂಡದ ವತಿಯಿಂದ 'ತುಘಲಕ್', 19ರಂದು ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ತಂಡದ ವತಿಯಿಂದ 'ರೂಪರೂಪಗಳನು ದಾಟಿ', 20ರಂದು ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ವಿದ್ಯಾರ್ಥಿ ತಂಡದ ವತಿಯಿಂದ 'ಒಥೆಲೋ', 21ರಂದು ಲಾ ಸಲೆಟ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿ ತಂಡದ ವತಿಯಿಂದ 'ಕೂಳಿನ ಕಾಳಗ', 22ರಂದು ಅಮೃತಾ ವಿಶ್ವವಿದ್ಯಾಪೀಠಂ ವಿದ್ಯಾರ್ಥಿ ತಂಡದ ವತಿಯಿಂದ 'ಪರಿಜು' ಮತ್ತು 23ರಂದು ಟ್ಯಾಲೆಂಟ್ ಎಜುಕೇಷನ್ ಟ್ರಸ್ಟ್ ವಿದ್ಯಾರ್ಥಿ ತಂಡದ ವತಿಯಿಂದ 'ಹುಲಿಯ ನೆರಳು' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಕನ್ನಡ ಪುಸ್ತಕ ರಿಯಾಯತಿ ಮಾರಾಟ ಮೇಳಕ್ಕೆ ಚಾಲನೆ

ಪ್ರಕಾಶಕರ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸುತ್ತದೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ

ಮೈಸೂರು,ಅ.15(ಎಸ್‌ಪಿಎನ್)– ಪ್ರಕಾಶಕರ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸದಾ ಸ್ಪಂದಿಸುತ್ತದೆ. ಪ್ರಕಾಶಕರ ಆರ್ಥಿಕ ನಷ್ಟದ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಯಾವ ಸ್ವರೂಪದಲ್ಲಿ ಅನುದಾನ ಬಿಡುಗಡೆ ಮಾಡಬೇಕು ಎಂಬುದರ ಕುರಿತು ಚರ್ಚಿಸುತ್ತೇನೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಸಂಗಪ್ಪ ತಂಗಡಗಿ ಅಭಿಪ್ರಾಯಪಟ್ಟರು.



ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಾಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ಕನ್ನಡ ಪುಸ್ತಕಗಳ ರಿಯಾಯತಿ ಮಾರಾಟ ಮೇಳಕ್ಕೆ ಚಾಲನೆ ನೀಡಿ, ಮಾತನಾಡಿದರು.

ಪ್ರಕಾಶಕರು ಆರ್ಥಿಕ ಸಂಕಷ್ಟದಲ್ಲಿದ್ದಾರೆ ಎಂಬುದು ಇಲಾಖೆ ಗಮನದಲ್ಲಿದೆ. ಇದರ ಬಗ್ಗೆ ದಸರಾ ನಂತರ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ ಎಂದ ಸಚಿವರು, ದಸರಾ ಮಹೋತ್ಸವದಲ್ಲಿ ಕನ್ನಡ ಪುಸ್ತಕಗಳ ರಿಯಾಯತಿ ಮಾರಾಟ ಮೇಳಕ್ಕೆ ಅವಕಾಶ ಮಾಡಿಕೊಂಡಿದ್ದು, ಎಲ್ಲರಿಗೂ ಒಳ್ಳೆಯದಾಗಲಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಸಂಗಪ್ಪ ತಂಗಡಗಿ, ಕಾರ್ಯದರ್ಶಿ ಡಾ.ಮಂಜುಳಾ, ನಿರ್ದೇಶಕಿ ಡಾ.ಧರಣಿ ದೇವಿ ಮಾಲಗತ್ತಿ, ಕೆ.ಬಿ.ಕಿರಣ್‌ಸಿಂಗ್ ಸೇರಿದಂತೆ ಇತರರು ಸಂವಹನ ಪ್ರಕಾಶನ, ಮೈಸೂರು ವಿವಿ ಸೇರಿದಂತೆ ಕನ್ನಡ ಪುಸ್ತಕ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಅಮೂಲ್ಯ ಪುಸ್ತಕಗಳನ್ನು ವೀಕ್ಷಿಸಿದರು.

ನಂತರ ಸಾಹಿತಿಗಳೊಂದಿಗಿನ ಸೆಲ್ಫಿಗೆ ವೈದ್ಯ ಸಾಹಿತಿ ಡಾ.ವಿ.ಲಕ್ಷ್ಮೀನಾರಾಯಣ ಭಾಗವಹಿಸಿದ್ದರು. ಜಾನಪದ ಗಾಯಕ ಎನ್.ಬಸವಯ್ಯ ಮತ್ತು ತಂಡವರು ಜಾನಪದ ಗೀತೆಗಳನ್ನ ಹಾಡಿದರು. ಈ ವೇಳೆ ಪ್ರಕಾಶಕರಾದ ಸಂಸ್ಕೃತಿ ಸುಬ್ರಹ್ಮಣ್ಯ, ಲೋಕಪ್ಪ ಸೇರಿದಂತೆ ಇತರರಿದ್ದರು.

ಈ ಮೇಳದಲ್ಲಿ ಮೈಸೂರು ವಿವಿ, ಕೆಎಸ್‌ಓಯು ಪ್ರಸಾರಾಂಗ, ಕರ್ನಾಟಕ ಜಾನಪದ ವಿವಿ, ಕರ್ನಾಟಕ ಸಾಹಿತ್ಯ, ಕೊಂಕಣಿ, ಯಕ್ಷಗಾನ, ಸಂಗೀತ,ನೃತ್ಯ, ಶಿಲ್ಪಕಲಾ, ಲಲಿತಾಕಲಾ, ತುಳು, ಬ್ಯಾರಿ,ನಾಟಕ ಅಕಾಡೆಮಿ ಮಳಿಗೆಗಳು, ಚಿಂತನ ಚಿತ್ತಾರ ಪ್ರಕಾಶನ, ಅಖೀಲಾ ಏಜೆನ್ಸೀಸ್, ಮೈಸೂರು ಸಾಗರಿ ಪ್ರಕಾಶನ, ಸಾಹಿತ್ಯ ಸ್ತಂಬ ಬುಕ್ ಹೌಸ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಧಾತ್ರಿ ಪ್ರಕಾಶನ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ತನುಮನ ಪ್ರಕಾಶನ, ವಿಜಯವಾಹಿನಿ ಪಬ್ಲಿಕೇಷನ್, ಜೆಎಸ್‌ಎಸ್ ಗ್ರಂಥಮಾಲೆ, ನಿಸರ್ಗ ಪ್ರಕಾಶನ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಸಂಸ್ಕೃತಿ ಬುಕ್‌ಹೌಸ್, ಲಿಖಿಕ ಪ್ರಕಾಶನ, ವಿವೇಕಾನಂದ ಕನ್ನಡ ಪ್ರಕಾಶನ, ಸ್ನೇಹ ಬುಕ್ ಹೌಸ್, ರೂಪ ಪ್ರಕಾಶನ, ಅಯೋಧ್ಯಾ ಪಬ್ಲಿಕೇಷನ್, ಗಾಯಿತ್ರಿ ಪ್ರಕಾಶನ, ಸಂವಹನ, ಭಾರತೀ ಬುಕ್ ಹೌಸ್, ಸಾಧನಾ ಪಬ್ಲಿಕೇಷನ್, ಅಭಿರುಚಿ, ಪುಸ್ತಕ ಪ್ರಕಾಶನ, ಆರ್ಯ ಸಮಾಜ ನೇರಳಕಟ್ಟೆ, ಜಯರಾಮ ಪ್ರಕಾಶನ, ಸಪ್ನ ಬುಕ್ ಹೌಸ್, ವೀರಲೋಕ ಬುಕ್ಸ್, ಅಭಿನವ, ಅಂಕಿತ, ನವಕರ್ನಾಟಕ, ಕದಂಬ ಪ್ರಕಾಶನ ಸೇರಿದಂತೆ ಇತರ ಪ್ರಕಾಶಕರು ಪುಸ್ತಕ ಮಳಿಗೆಗಳನ್ನು ತೆರೆದು ರಿಯಾಯತಿ ದರದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಿದ್ದರು.

ಮರದ ಒಣಕೊಂಬೆ ಬಿದ್ದು ಸಾರಿಗೆ ಬಸ್ ಗ್ಲಾಸ್ ಜಖಂ



ಮೈಸೂರು, ಅ.15 (ಎಸ್‌ಪಿಎನ್)– ಒಣ ಕೊಂಬೆಯೊಂದು ಬಿದ್ದು ಕೆಎಸ್ ಆರ್‌ಟಿಸಿ ಬಸ್ ಮುಂಭಾಗದ ಗ್ಲಾಸ್ ಜಖಂ ಗೊಂಡಿರುವ ಘಟನೆ ಮೈಸೂರು ಸಬರ್ಬನ್ ಬಸ್ ನಿಲ್ದಾಣದ ಸಮೀಪ (ಇರ್ವಿನ್ ರೋಡ್ ಪ್ರಾರಂಭದಲ್ಲಿನ ಕಮಾನ್ ಗೇಟ್) ಭಾನುವಾರ ನಡೆದಿದೆ.

ಪಿರಿಯಾಪಟ್ಟಣ ಡಿಪೋಗೆ ಸೇರಿದ ಮೈಸೂರು–ಕೊಡಗು ಮಾರ್ಗದಲ್ಲಿ ಸಂಚರಿಸುವ(ಕೆಎಸ್–45.ಎಫ್.0004) ಸಾರಿಗೆ ಬಸ್ ಮೇಲೆ ಭಾನುವಾರ ಬೆಳಗ್ಗೆ ಮೈಸೂರಿಂದ ಪಿರಿಯಾಪಟ್ಟಣಕ್ಕೆ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಿಂದ ಹೊರಟು, ಇರ್ವಿನ್ ರಸ್ತೆ ಜಂಕ್ಷನ್‌ನಲ್ಲಿರುವ ಕಮಾನ್ ಗೇಟ್ ಬಳಿಯ ಮರದಲ್ಲಿ ಒಣ ಕೊಂಬೆಯೊಂದು ಆಕಸ್ಮಾತ್ ಬಸ್ ಮುಂಭಾಗದ ಗ್ಲಾಸ್ ಮೇಲೆ ಬಿದ್ದು, ರೆಂಬೆ ಬಿದ್ದ ಗ್ಲಾಸ್‌ನಲ್ಲಿ ಕ್ರಾಕ್ ಬಿಟ್ಟಿದೆ. ಈ ಸಂಬಂಧ ಸಿದ್ಧಾರ್ಥ ಸಂಚಾರ ಠಾಣೆಯಲ್ಲಿ ಬಸ್ ಚಾಲಕ ದೂರು ದಾಖಲಿಸಿದ್ದಾರೆ.

ಅಫ್ಘಾನ್ ವಿರುದ್ಧ ಸೋಲು: ಇಂಗ್ಲೆಂಡ್‌ಗೆ ಮುಖಭಂಗ

ದೆಹಲಿ, ಅ.15– ಪ್ರಸಕ್ತ ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶ ಹೊರಬಿದ್ದಿದ್ದು, ಅಫ್ಘಾನಿಸ್ತಾನದ ವಿರುದ್ಧ ಹಾಲಿ ಚಾಂಪಿಯನ್ ಇಂಗ್ಲೆಂಡ್ 69 ರನ್‌ಗಳ ಹೀನಾಯ ಸೋಲು ಅನುಭವಿಸಿದೆ.

ಕಳೆದ ವಿಶ್ವಕಪ್‌ನಲ್ಲಿ ಘಟಾನುಘಟಿ ತಂಡಗಳನ್ನು ಮಣಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಹಾಲಿ ಚಾಂಪಿಯನ್ ಇಂಗ್ಲೆಂಡ್ ಮುಖಭಂಗ ಅನುಭವಿಸಿದರೇ, ಅಫ್ಘಾನಿಸ್ತಾನ ವಿಶ್ವಕಪ್ ಇತಿಹಾಸದಲ್ಲಿ ಅತೀ ದೊಡ್ಡ ಗೆಲುವುದಾಖಲಿಸಿ ಇತಿಹಾಸನಿರ್ಮಿಸಿದೆ.



ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 49.5 ಓವರ್‌ಗಳಲ್ಲಿ 284ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೆಹಮಾನುಲ್ಲಾ ಗುರ್ಬಾಝ್ ಹಾಗೂ ಇಬ್ರಾಹಿಂ ಜರ್ದಾನ್ ಮೊದಲ ವಿಕೆಟ್‌ಗೆ 114ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ 28ರನ್ ಗಳಿಸಿದ್ದ ಇಬ್ರಾಹಿಂ ಜರ್ದಾನ್ ವಿಕೆಟ್ ಒಪ್ಪಿಸಿದರು. ನಂತರ ಬಂದ ರಹಮತ್ ಕೇವಲ 3 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ ಕೇವಲ 57 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಒಳಗೊಂಡ 80 ರನ್ ಗಳಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ರೆಹಮಾನುಲ್ಲಾ ಗುರ್ಬಾಝ್ ರನೌಟ್‌ಗೆ ಬಲಿಯಾದರು. ಇನಿಂಗ್ಸ್ ಮಧ್ಯದಲ್ಲಿ ಇಕ್ರಮ್ ಅಲಿಖಿಲ್ 66 ಎಸೆತಗಳಲ್ಲಿ 58 ರನ್‌ಗಳ ಜವಾಬ್ದಾರಿಯುತ ಇನ್ನಿಂಗ್ಸ್ ಆಡಿ ತಂಡಕ್ಕೆ ಆಸರೆಯಾದರು. ಉನ್ನುಳಿದ ಕೆಳ ಕ್ರಮಾಂಕದಲ್ಲಿ ರಶೀದ್ ಖಾನ್ 23, ಮುಜೀಬ್ ಉರ್ ರೆಹಮಾನ್ 28 ರನ್ ಗಳಿಸುವ ಮೂಲಕ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು. ಉಳಿದಂತೆ ಅಜ್ಮತುಲ್ಲಾ 19, ಶಾಹಿದಿ 14ರನ್ ಗಳಿಸಿದರು.

ಇಂಗ್ಲೆಂಡ್ ಪರ ಆದಿಲ್ ರಶೀದ್ 3, ಮಾರ್ಕ್ ವುಡ್ 2, ರೀಸ್ ಟಾಪ್ಲಿ, ಜೋ ರೂಟ್ ಮತ್ತು ಲಿಯಾಮ್ ಲಿವಿಂಗ್ ಸ್ಟೋನ್ ಒಂದೊಂದು ವಿಕೆಟ್ ಕಬಳಿಸಿದರು.

ಅಫ್ಘಾನಿಸ್ತಾನ ನೀಡಿದ 285 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 40.3 ಓವರ್‌ಗಳಲ್ಲಿ 215 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಹೀನಾಯ ಸೋಲು ಅನುಭವಿಸಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ ಆರಂಭದಿಂದಲೇ ಹಳಿ ತಪ್ಪಿತ್ತು. ತಂಡದ ಮೊತ್ತ 33 ರನ್ ಆಗುವಷ್ಟರಲ್ಲಿ ಜಾನಿ ಬೈರ್‌ಸ್ಟೋವ್ ಹಾಗೂ ಜೋ ರೂಟ್ ಅವರ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಇನ್ನು ಆಫ್ಘಾನ್ ಬೌಲರ್‌ಗಳ ವಿರುದ್ಧ ಹೋರಾಡಿದ ಡೇವಿಡ್ ಮಲನ್ 32 ರನ್ ಗಳಿಸಿ ನಿರ್ಗಮಿಸಿದರು. ನಾಯಕ ಜೋಸ್ ಬಟ್ಲರ್ ಕೇವಲ 9 ರನ್ ಸಿಡಿಸಿ ಔಟಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಗಟ್ಟಿಯಾಗಿ ನಿಂತಿದ್ದ ಹ್ಯಾರಿ ಬ್ರೂಕ್ 7 ಬೌಂಡರಿ, 1 ಸಿಕ್ಸರ್ ಒಳಗೊಂಡ 66 ರನ್ ಗಳಿಸಿ ಏಕಾಂಗಿ ಹೋರಾಟ ನಡೆಸಿದರಾದರೂ ತಂಡಕ್ಕೆ ಜಯ ತಂದು ಕೊಡುವಲ್ಲಿ ವಿಫಲವಾದರು. ಆಫ್ಘಾನಿಸ್ತಾನ ಬೌಲರ್‌ಗಳ ಬೌಲಿಂಗ್ ದಾಳಿಗೆ ತತ್ತರಿಸಿದ ಇಂಗ್ಲೆಂಡ್ ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ಉಳಿದಂತೆ ಜಾನಿ ಬೆಸ್ಟೊ 2, ಜೋ ರೂಟ್ 11, ಲಿಯಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್ ತಲಾ 10, ಆದೀಲ್ ರಶೀದ್ 20, ಮಾರ್ಕ್ ವುಡ್ 18, ರೀಸ್ ಟೋಪ್ಲಿ 15 ರನ್ ಗಳಿಸಿದರು. ಆಫ್ಘಾನಿಸ್ತಾನ್ ಪರ ರಶೀದ್ ಖಾನ್, ಮುಜೀಬ್ ಉರ್ ರೆಹಮಾನ್ ತಲಾ 3, ಮೊಹಮ್ಮದ್ ನಬಿ 2, ನವೀನ್ ಉಲ್ ಹಕ್ ಹಾಗೂ ಫಜಲ್ಹಕ್ ಫಾರೂಕಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಮುಜೀಬ್ ಉರ್ ರೆಹಮಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಕ್ಕರೆ ಅದೇ ಸ್ವರ್ಗ

ಪತಿ : ಯಾವಾಗಲೂ ನನಗೆ ಅದನ್ನ ತನ್ನಿ... ಇದನ್ನ ತನ್ನೀ ಅಂದ್ರೆ, ಹೋಗಿ ನದಿಗೆ ಹಾರ್ತಿನಿ...
ಹೆಂಡತಿ : ನದಿಯಿಂದ ಮೇಲೆ ಬರುವಾಗ ಮೀನು ತನ್ನಿ...

ಮೈಸೂರು ಮಿತ್ರ
ಸೋಮವಾರ, 16 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

'ಜೀವನದಲ್ಲಿ ಯಾವುದಕ್ಕೂ ಚಿಂತೆ ಮಾಡಿ ಕೊರಗಬಾರದು,
ಒಳ್ಳೆದಾದರೆ ಅದ್ಭುತ ಎಂದು ಭಾವಿಸಬೇಕು,
ಕೆಡಕಾದರೆ ಅನುಭವ ಎಂದು ಪರಿಗಣಿಸಬೇಕು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೆಂಪಕ್ಕಿ ಅನ್ನ ಚೆಂದ, ಕೆಂಪು ಮೊಗದ ಹೆಣ್ಣು ಚೆಂದ

ನಿಮ್ಮ ಪತ್ರಗಳು

ಪ್ರವಾಸಿಗರ ಪ್ರವಾಸಕ್ಕೆ ಅಡ್ಡಿ ಸರಿಯೆ?

ಮಾನ್ಯರೆ,




ದಸರಾ ಹಬ್ಬದ ಪ್ರಯುಕ್ತ ಮೈಸೂರಿನಲ್ಲಿ ಸಾಲು, ಸಾಲು ಕಾರ್ಯಕ್ರಮಗಳು ಇರುವುದರಿಂದ ಮೈಸೂರಿನ ಪ್ರಮುಖ ಸ್ಥಳಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಮತ್ತು ಸಾರ್ವಜನಿಕರು ಭೇಟಿ ನೀಡುವುದು ಸಾಮಾನ್ಯ. ಪ್ರತಿನಿತ್ಯ ಬಳಸುವ ರಸ್ತೆಗಳಲ್ಲಿ ಪೊಲೀಸರು ಮತ್ತು ಹೋಮ್ ಗಾರ್ಡ್‌ಗಳು ಪ್ರವಾಸಿಗರನ್ನು ಮತ್ತು ಸಾರ್ವಜನಿಕರನ್ನು ಕೆಲ ಕಾಲ ತಡೆ ಹಿಡಿದಿದ್ದು ಸರಿಯಲ್ಲ. ಭಾನುವಾರ ಚಾಮುಂಡಿಬೆಟ್ಟದಲ್ಲಿ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳ ಜೊತೆ ಇನ್ನಿತರ ಗಣ್ಯರು ಆಗಮಿಸಿದ್ದ ಹಿನ್ನೆಲೆಯಲ್ಲಿ ಬೆಳಗ್ಗೆ 9 ಗಂಟೆಯಿಂದ ಬೆಳಗ್ಗೆ 11 ಗಂಟೆವರೆಗೆ ಭಕ್ತರನ್ನು ತಡೆದರು. ಇದರಿಂದ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತಾದಿಗಳು ಮತ್ತು ಪ್ರವಾಸಿಗರಿಗೆ ತೊಂದರೆಯಾಗಿ ತಮ್ಮ ತಮ್ಮ ಸ್ವಗ್ರಾಮಗಳಿಗೆ ತೆರಳಲು ಸಮಸ್ಯೆಯಾಯಿತು.

ಗಣ್ಯರು ಬರುವಾಗ ಚಾಮುಂಡಿಬೆಟ್ಟದ ರಸ್ತೆಯನ್ನು ತಡೆಯುವುದನ್ನು ಬಿಟ್ಟು ಅದಕ್ಕೆ ಪರ್ಯಾಯವಾಗಿ ಏಕಮುಖ ಸಂಚಾರ ವ್ಯವಸ್ಥೆ ಅಥವಾ ಸೂಕ್ತವಾದ ರಸ್ತೆಯ ವ್ಯವಸ್ಥೆಯನ್ನು ಮಾಡಬೇಕು. ಸಾರ್ವಜನಿಕರ ಮಧ್ಯೆ ಬೆರೆತು ಸಮಸ್ಯೆಗಳನ್ನು ಬಗೆಹರಿಸಬೇಕಾದ ನಾಯಕರುಗಳೇ ಇಂದು ಸಾರ್ವಜನಿಕರನ್ನು ತಡೆದು ನಿಲ್ಲಿಸಿ ತೊಂದರೆ ನೀಡಿರುವುದು ನ್ಯಾಯವೇ? ಮೈಸೂರಿನ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆಗೆ ಸಂಬಂಧಿಸಿದಂತೆ ಕೂಡಲೇ ರಾಜ್ಯ ಸರ್ಕಾರಕ್ಕೆ ಹಾಗೂ ಮೈಸೂರಿನ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕು.

ರಸ್ತೆಗಳಲ್ಲಿ ಸಂಚರಿಸುವಾಗ ಗಂಟೆಗಟ್ಟಲೆ ಜನರನ್ನು ಮತ್ತು ಭಕ್ತಾದಿಗಳನ್ನು ಚಾಮುಂಡಿಬೆಟ್ಟದ ಎಲ್ಲಾ ರಸ್ತೆಗಳಲ್ಲಿ ತಡೆಯುವ ಬದಲು ಒಂದು ರಸ್ತೆಯಲ್ಲಿ ಗಣ್ಯರು ಸಂಚರಿಸಲು ಅವಕಾಶ ಮಾಡಿ, ಉಳಿದ ರಸ್ತೆಗಳಲ್ಲಿ ಯಾವುದಾದರೂ ಒಂದು ರಸ್ತೆಯಲ್ಲಿ ಸಾರ್ವಜನಿಕರು, ಭಕ್ತರು ಮತ್ತು ಪ್ರವಾಸಿಗರಿಗೆ ಸಂಚರಿಸಲು ಅವಕಾಶ ಮಾಡಿಕೊಡುವ ಮೂಲಕ ಸಮಸ್ಯೆಯನ್ನು ಹೋಗಲಾಡಿಸಬೇಕು.

– **ನಾಗೇಶ್, ಮಾನಸಗಂಗೋತ್ರಿ, ಮೈಸೂರು.**

ಸರ್ಕಾರ ಪ್ರೊ.ಭಗವಾನ್ ವಿರುದ್ಧ ಕ್ರಮ ಕೈಗೊಳ್ಳಲಿ



ಮಾನ್ಯರೆ,

'ಒಕ್ಕಲಿಗರು ಸಂಸ್ಕೃತಿ ಹೀನರು' ಈ ಮಾತನ್ನು ನಾನು ಹೇಳುತ್ತಿರುವುದಲ್ಲ, ರಾಷ್ಟ್ರಕವಿ ಕುವೆಂಪುರವರು ಹೇಳಿದ್ದು ಎಂದು, ತಾನೊಬ್ಬನೇ ವಿಚಾರವಾದಿ ಎಂದು ಡೋಂಗಿ ಬಿಡುವ ಪ್ರೊ. ಭಗವಾನ್‌ರವರು ಮೊನ್ನೆ ಮೈಸೂರಿನಲ್ಲಿ ನಡೆದ ಮಹಿಷ ದಸರಾದ ಬಹಿರಂಗ ಸಭೆಯಲ್ಲಿ ತಮ್ಮ ಅಜ್ಞಾನ ಪ್ರದರ್ಶಿಸಿದ್ದಾರೆ.

ಕುವೆಂಪು ಹೀಗೆ ಹೇಳಿದ್ದರು ಎಂಬುದಕ್ಕೆ ಇವರ ಬಳಿ ಯಾವುದಾದರೂ ಆಧಾರ ಅಥವಾ ದಾಖಲೆ ಇದೆಯಾ? ಒಕ್ಕಲುತನ ಮಾಡುವ ರೈತರೆಲ್ಲರೂ, ಒಕ್ಕಲಿಗರೇ ಆಗಿದ್ದಾರೆ, ಎಲ್ಲಾ ಸಮುದಾಯದಲ್ಲೂ ಇದ್ದಾರೆ, ಬ್ರಾಹ್ಮಣರು, ಲಿಂಗಾಯತರು, ಕುರುಬರು, ಅಷ್ಟೇ ಏಕೆ, ಮುಸ್ಲಿಮರು ಮತ್ತು ದಲಿತರು ಸಹ ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಇವರೆಲ್ಲರೂ ಒಂದು ರೀತಿಯಲ್ಲಿ ಒಕ್ಕಲಿಗರೇ ಆಗಿದ್ದಾರೆ.

ಪುಕ್ಕಟೆ ಪ್ರಚಾರಕ್ಕಾಗಿ, ಆಗಾಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ, ಸಮಾಜದಲ್ಲಿ ಅಶಾಂತಿ ಉಂಟುಮಾಡುತ್ತಿರುವ ಭಗವಾನ್ ವಿರುದ್ಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ರೈತರ ಬಗ್ಗೆ ಅಪಾರ ಕಾಳಜಿ ಇದ್ದ ಕಾಣದಿಂದಲೇ ಕುವೆಂಪು 'ನಾಡಗೀತೆ' ರಚಿಸಿದ್ದಾರೆ. ಮೈಸೂರಿನಲ್ಲಿರುವ ಕುವೆಂಪುರವರ ಅನೇಕ ಶಿಷ್ಯರನ್ನು ನಾನು ವಿಚಾರಿಸಿದಾಗ, ಅದರಲ್ಲೂ ಮುಖ್ಯವಾಗಿ ಪ್ರಸಾರಂಗದ ಮಾಜಿ ನಿರ್ದೇಶಕರಾದ ಕೆ.ಟಿ. ವೀರಪ್ಪನವರನ್ನು ಈ ಬಗ್ಗೆ ವಿಚಾರಿಸಿದಾಗ, ಕುವೆಂಪು ಕನಸಿನಲ್ಲೂ ಹಾಗೆ ಯೋಚಿಸಿದವರಲ್ಲ, ಇದೆಲ್ಲಾ ಪ್ರೊ. ಭಗವಾನ್‌ರವರ ಮನೋಕಲ್ಪಿತ, ಇಂತವರಿಂದಲೇ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಎಂದರು.

ಭಗವಾನ್‌ರವರ ಈ ಹೇಳಿಕೆಯಿಂದ ಕುವೆಂಪುರವರ ಅನುಯಾಯಿಗಳು ಮತ್ತು ಶಿಷ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು.

– **ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**

ಜಾತಿ ನಿಂದನೆಯ ಹೇಳಿಕೆಗಳಿಗೆ ಕಡಿವಾಣ ಹಾಕಬೇಕಿದೆ!

ಮಾನ್ಯರೆ,

ಕುವೆಂಪು ಅವರ ಹೆಸರು ಬಳಸಿಕೊಂಡು ಒಕ್ಕಲಿಗ ಸಮುದಾಯದ ಬಗ್ಗೆ ಪ್ರೊ. ಕೆ.ಎಸ್.ಭಗವಾನ್ ಅವರ ಅವಹೇಳನಕಾರಿ ಮಾತುಗಳು ನಿಜಕ್ಕೂ ಖಂಡನೀಯ. ಬುದ್ಧಿಜೀವಿಗಳು ಎಂದು ಬಿಂಬಿಸಿಕೊಂಡು ಒಂದು ಸಮುದಾಯದ ವಿರುದ್ಧ ಈ ರೀತಿ ತುಚ್ಚವಾಗಿ ಮಾತನಾಡುವುದು ಸರಿಯಲ್ಲ. ಇದು ತಪ್ಪಬೇಕಿದೆ.

ಯಾವುದೇ ಸಮುದಾಯದ ಹಾಗೂ ಜಾತಿಯ ವಿರುದ್ಧ ಮಾತನಾಡುವ, ಹೀಯಾಳಿಸುವ ಹಕ್ಕು ಯಾರಿಗೂ ಇರುವುದಿಲ್ಲ. ಆದರೆ ಕೆಲವರು ಬುದ್ಧಿಜೀವಿಗಳ ಸೋಗಿನಲ್ಲಿ ಅನ್ಯ ಸಮುದಾಯದ ವಿರುದ್ಧ ತುಚ್ಚವಾಗಿ ಮಾತನಾಡಿ ವಿವಾದ ಸೃಷ್ಟಿಸುತ್ತಿರುವುದು ಅವರ ವ್ಯಕ್ತಿತ್ವಕ್ಕೆ ತರವಲ್ಲ. ಸದಾ ಒಂದಿಲ್ಲೊಂದು ವಿವಾದಾತ್ಮಕ ಹೇಳಿಕೆಗಳಿಂದಲೇ ತಾವೊಬ್ಬ ಮೇಧಾವಿ ಎಂದು ಬಿಂಬಿಸಿಕೊಂಡು ಪ್ರಚಾರ ಪ್ರಿಯರಾದ ಭಗವಾನ್ ಇನ್ನಾದರೂ ಬುದ್ಧಿ ಕಲಿಯಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಯಾವುದೇ ಬುದ್ಧಿಜೀವಿಗಳು ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಾರೆಯೇ ಹೊರತೂ, ಶಾಂತಿ ಭಂಗಕ್ಕೆ ಆಸ್ಪದ ಕೊಡುವುದಿಲ್ಲ. ಆದರೆ ಭಗವಾನ್ ಅವರ ಪ್ರತಿ ಬಾರಿಯ ಹೇಳಿಕೆಗಳು ಬರೀ ವಿವಾದ ಹಾಗೂ ಸಮಾಜದ ಮನಃಶಾಂತಿಯ ಧಕ್ಕೆಗೆ ದಾರಿ ಮಾಡಿಕೊಡುತ್ತಿರುವುದು ವಿಪರ್ಯಾಸ.

ಈ ಬಾರಿ ಒಕ್ಕಲಿಗರು ಸಂಸ್ಕೃತಿ ಹೀನರು ಎಂದು ಹೇಳಲು ಕುವೆಂಪುರವರ ಹೆಸರು ಬಳಸಿರುವ ಭಗವಾನ್ ಹೇಳಿಕೆ ಆಕ್ಷೇಪಣೀಯ. ಸರ್ವಜನಾಂಗದ ಶಾಂತಿಯನ್ನು ಬಯಸುವ ಕುವೆಂಪುರವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಆಧಾರ ರಹಿತವಾಗಿ ಇಡೀ ಒಕ್ಕಲಿಗ ಜನಾಂಗದವರ ಭಾವನೆಗಳಿಗೆ ಧಕ್ಕೆ ತರುವುದು ಸರಿಯಲ್ಲ. ಸಮಾಜದ ಸ್ವಾಸ್ಥ್ಯ ಕೆಡಿಸುವ ಇಂತಹ ಬುದ್ಧಿಜೀವಿಗಳ(!?) ಅಸಂಬದ್ಧ ಹೇಳಿಕೆಗಳಿಗೆ ಇನ್ನು ಮುಂದೆಯಾದರೂ ಕಡಿವಾಣ ಬೀಳಬೇಕಿದೆ.

–**ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ನಿಲ್ಲದು ಮನುಷ್ಯನ ಆಟಾಟೋಪ; ತಪ್ಪದು ಪ್ರಕೃತಿಯ ಶಾಪ...!



"ಜರ್ಮನ್‌ನಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿಯೇ ಪ್ರತಿದಿನ ಜನರು 250 ವಿವಿಧ ಬಗೆಯ ವಿಷಕಾರಕ ಅಂಶಗಳನ್ನು ಗಾಳಿ, ನೀರು ಹಾಗೂ ಆಹಾರದಿಂದ ದೇಹಕ್ಕೆ ಸೇವಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಅಂದರೆ ನಮ್ಮ ದೇಶದಲ್ಲಿ ಇದು 500ಕ್ಕೂ ಹೆಚ್ಚಾಗಿದ್ದರೂ ಆಶ್ಚರ್ಯಪಡಬೇಕಿಲ್ಲ. ಬೆಂಗಳೂರಿನಲ್ಲಿ ಇಂದು ಆಕ್ಸಿಜನ್ ಪಾರ್ಲರ್‌ಗಳು ಬಂದಿವೆ. ಒಂದು ಗಂಟೆಯ ಶುದ್ಧ ಗಾಳಿ ಸೇವನೆಗೆ 250 ರೂಪಾಯಿಗಳನ್ನು ಪಾವತಿಸಬೇಕು. ಅಂದಮೇಲೆ ಒಂದು ದಿನಕ್ಕೆ ರೂ.6000 ಪಾವತಿಸಬೇಕಾಗುತ್ತದೆ. ಪ್ರಕೃತಿಯಲ್ಲಿನ ಶುದ್ಧ ಗಾಳಿಯನ್ನು ಮಲಿನ ಮಾಡಿ ನಮ್ಮ ಸಮಾಧಿ ಗುಂಡಿಯನ್ನು ನಾವೇ ತೋಡಿಕೊಳ್ಳುತ್ತಿದ್ದೇವೆ ಎಂದೆನಿಸುತ್ತಿಲ್ಲವೇ?

ಮನುಷ್ಯ ಹೆಚ್ಚೆಚ್ಚು ವಿದ್ಯಾವಂತನಾದಂತೆ, ಬುದ್ಧಿವಂತನಾದಂತೆ ಭೂಮಿಗೆ ಹಾಗೂ ತನ್ನೊಟ್ಟಿಗೆ ಬದುಕುತ್ತಿರುವ ಜೀವಸಂಕುಲಗಳಿಗೆ ಉಪಕಾರಿಯಾಗುವ ಬದಲು ಅಪಾಯಕಾರಿ ಆಗುತ್ತಿರುವುದು ವಿಷಾದಕರ ಸಂಗತಿ. ಮನುಷ್ಯನ ದುರಾಸೆ, ದುಶ್ಚಟಗಳಿಗೆ ಅನೇಕ ಅಮಾಯಕ ಜೀವಿಗಳು ಬಲಿಯಾಗುತ್ತಿರುವುದರ ಜೊತೆ ಪ್ರಕೃತಿಯಲ್ಲಿ ಅಸಮತೋಲನ ಸಹ ಉಂಟಾಗುತ್ತಿದೆ. "ನಿಸರ್ಗವು ಮನುಷ್ಯನ ಅವಶ್ಯಕತೆಗಳನ್ನು ಪೂರೈಸುತ್ತದೆಯೇ ಹೊರತು ಮನುಷ್ಯನ ದುರಾಸೆಗಳನ್ನಲ್ಲ" ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಮನುಷ್ಯ ತನ್ನ ಅವಶ್ಯಕತೆಗೆ ನಿಸರ್ಗವನ್ನು ಅವಲಂಬಿಸಿದರೆ ಭೂಮಿಯು ಸ್ವರ್ಗಸಮಾನವಾಗಿರುತ್ತಿತ್ತು. ಆದರೆ ದುರಾಸೆಯಿಂದ ಇಂದು ಬಹುಪಾಲು ಜನರು ನರಕಯಾತನೆ ಅನುಭವಿಸುವ ಹಾಗೆ ಆಗಿದೆ. ಮನುಷ್ಯ ನಿಸರ್ಗದಲ್ಲಿ ಇರುವ ಎಲ್ಲಾ ಗಿಡಮರಗಳು ಹಾಗೂ ಪ್ರಾಣಿಪಕ್ಷಿಗಳು ತನ್ನ ಅವಶ್ಯಕತೆಗಳನ್ನು ಪೂರೈಸಲು, ತನ್ನ ಸೇವೆಗೆ ಸೃಷ್ಟಿಯಾದವು, ತನ್ನ ಶೋಕಿಯ ವಸ್ತುಗಳು ಎಂದು ಭಾವಿಸಿರುವುದೇ ತಪ್ಪಾಗಿದೆ. ಮನುಷ್ಯ ತನ್ನ ಅನುಕೂಲಕ್ಕೆ ಅಷ್ಟೇ ಅಲ್ಲದೆ ಶೋಕಿಗೆ ಪ್ರತಿ ದಿನವೂ ಒಂದಿಲ್ಲೊಂದು ಆವಿಷ್ಕಾರಗಳನ್ನು ಮಾಡುತ್ತಲೇ ಇದ್ದಾನೆ. ಅದರ ಪರಿಣಾಮ ಭೂಮಿಯ ಒಡಲನ್ನು ಬಗೆದು, ಸಮುದ್ರದ ಆಳವನ್ನು ಹೊಕ್ಕಿ, ಮುಗಿಲಿನ ಓಜೋನ್ ಪದರ ಹಾಳುಮಾಡಿ ಅಸಮತೋಲನ ಉಂಟಾಗುವಂತೆ ಮಾಡಿದ್ದಾನೆ. ಅದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತಿವೆ. ಮನುಷ್ಯನ ಅತಿಯಾದ ಬಯಕೆಯಿಂದ ಇಂದು ಅತಿವೃಷ್ಟಿ ಹಾಗೂ ಅನಾವೃಷ್ಟಿಗಳು ಉಂಟಾಗುತ್ತಿದೆ. ಇಂದಿನ ವ್ಯವಹಾರಿಕ ಬದುಕಿನಲ್ಲಿ ಎಲ್ಲವನ್ನು ಮಾರಾಟದ ಸರಕಾಗಿ ಕಾಣುತ್ತಿದ್ದಾನೆ. ಇಷ್ಟಾದರೂ ಪ್ರಕೃತಿ ಸಂರಕ್ಷಣೆ ತನ್ನ ಹೊಣೆ ಎಂಬುದನ್ನು ಎಳ್ಳಷ್ಟು ತಿಳಿಯದೇ ಇರುವುದು ದುರದೃಷ್ಟಕರ.

ಇದು ವೈಶ್ಯ ಯುಗ ಅಂದರೆ ವ್ಯಾಪಾರಿ ಯುಗ. ಎಲ್ಲವೂ ಮಾರಾಟದ ಸರಕಿನಂತೆ ಕಾಣುತ್ತವೆ. ಒಂದು ಬೆಟ್ಟವು ಕವಿಯೊಬ್ಬನಿಗೆ ಸೌಂದರ್ಯದ ಗಣಿಯಾಗಿ ಕಂಡರೆ ಗಣಿಗಾರಿಕೆ ಮಾಡುವ ವಿಜ್ಞಾನಿಗೆ/ವ್ಯಾಪಾರಿಗೆ ಅದರಲ್ಲಿ ಕರಿಕಲ್ಲು, ಬಿಳಿಕಲ್ಲು, ಖನಿಜಗಳು ಕಾಣುತ್ತವೆ. ಅದನ್ನು ವ್ಯಾಪಾರಿ ಮನೋಭಾವದಿಂದ ನೋಡುತ್ತಿರುವುದರಿಂದಲೇ ಇಂದು ಅನೇಕ ಬೆಟ್ಟಗಳು ಮಾಯವಾಗಿವೆ. ಒಂದು ಊರಿನಲ್ಲಿ ದೊಡ್ಡ ಬೆಟ್ಟವೊಂದಿತ್ತು. ಅದು ಬಿಳಿ ಕಲ್ಲಿನ ಬೆಟ್ಟ. ಅದರ ತಪ್ಪಲಲ್ಲೇ ಒಂದು ಸಣ್ಣ ಕಾಡು ಇತ್ತು. ಕಾಲಕಾಲಕ್ಕೆ ಮಳೆಯಾಗುತ್ತಿತ್ತು. ಊರಿನ ಜನ ಒಂದು ದಶಕದಲ್ಲಿ ಆ ಬೆಟ್ಟವನ್ನು ತಮ್ಮ ಅವಶ್ಯಕತೆಗಳಿಗೆ ಕರಗಿಸಿದರು, ಕಾಡನ್ನು ಕಡಿದರು. ಬೆಟ್ಟ ಕರಗಿದ ನಂತರ ಮಳೆ ನಿಂತು ಹೋಯಿತು. ಆ ಊರಿನ ಜನ ಆ ಬೆಟ್ಟದ ಹಾಗೂ ಕಾಡಿನ ಮರ ಬಳಸಿ ಒಂದು ದೊಡ್ಡ ದೇವಸ್ಥಾನ ನಿರ್ಮಿಸಿ, ಮಳೆಗಾಗಿ ಬೇಡುತ್ತಿದ್ದಾರೆ. ಇದಕ್ಕಿಂತ ವಿಪರ್ಯಾಸದ ಸಂಗತಿ ಉಂಟೇ?

ಮನುಷ್ಯ ತಾನೇ ಬ್ರಹ್ಮ ಎಂದು ತಿಳಿದಿರುವುದು ತಪ್ಪಾಗಿದೆ. ಶರಣ ಜೇಡರ ದಾಸಿಮಯ್ಯ ಅವರ ಈ ವಚನ ಮನುಷ್ಯನ ಮೂರ್ಖತನವನ್ನು ಬಿಂಬಿಸುತ್ತದೆ.

"ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ ಸುಳಿದು ಸೂಸುವ ಗಾಳಿ ನಿಮ್ಮ ದಾನ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ"

ಎಂದು ಹೇಳಿದ್ದಾರೆ. ಇವರ ಮಾತುಗಳು ಮನುಷ್ಯನ ಅಹಂಕಾರಕ್ಕೆ ಪೆಟ್ಟು ನೀಡುವಂತಿದೆ. ಪ್ರತಿಯೊಂದನ್ನು ಪ್ರಕೃತಿಯಿಂದಲೇ ಪಡೆದು ತಾ ಮಾಡಿದೆ ಎಂದು ಬೀಗುವ ಮನುಷ್ಯನ ತಿಳಿಗೇಡಿತನವನ್ನು ವರ್ಣಿಸಿದ್ದಾರೆ.

ಮನುಷ್ಯ ತನ್ನ ಆಯುಷ್ಯವನ್ನು ಹಿಗ್ಗಿಸಿಕೊಳ್ಳುತ್ತಿರುವುದರಿಂದಲೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ. ಪ್ರಕೃತಿ ನಿಯಮದಂತೆ ಮನುಷ್ಯನ ನಿಜವಾದ ಸರಾಸರಿ ಆಯುಷ್ಯ 25–30 ವರ್ಷಗಳು ಅಷ್ಟೇ. ಆಹಾರ ಭದ್ರತೆ, ವಸತಿ ಭದ್ರತೆ, ಪ್ರಕೃತಿ ವಿಕೋಪದಿಂದ ಭದ್ರತೆ, ಆರೋಗ್ಯ ಭದ್ರತೆ ಇಂದ ಇಂದು 25 ವರ್ಷಗಳಿದ್ದದ್ದು 70 ವರ್ಷಗಳಿಗೆ ಹಿಗ್ಗಿದೆ. ಅದರಿಂದಲೇ ಅನೇಕ ಅನಾಹುತಗಳು ಸಂಭವಿಸುತ್ತಿವೆ.

ಇಂದು ವರ್ಷದ ಪ್ರತಿ ಋತುಮಾನಗಳಲ್ಲಿ ಒಂದಿಲ್ಲೊಂದು ಪ್ರಕೃತಿ ವಿಕೋಪಗಳು ಆಗುತ್ತಿವೆ. ಅದಕ್ಕೆ ಕಾರಣ ಮನುಷ್ಯನ ಕೈಚಳಕದಿಂದಾದ ಕೃತ್ಯಗಳಿಂದ. ಇಂದು ಕಲ್ಲು, ಮರಳು, ಹರಳು ಹೀಗೆ ವಿವಿಧವಾದ ಗಣಿಗಾರಿಕೆಯಿಂದ ಅನೇಕ ಬೆಟ್ಟಗುಡ್ಡಗಳೇ ಮಾಯವಾಗಿವೆ. ಅನೇಕ ರಾಜ್ಯಗಳಲ್ಲಿ ಮಳೆಗಾಲದಲ್ಲಿ ಆದ ಪ್ರಕೃತಿ ವಿಕೋಪವು ಮನುಷ್ಯ ವಿನಾಶದ ಅಂಚನ್ನು ತಲುಪುವ ಮುನ್ಸೂಚನೆಯಂತಿದೆ. ಹಳ್ಳಿಗಳೇ ಕೊಚ್ಚಿ ಹೋಗುವಷ್ಟು, ಮುಚ್ಚಿ ಹೋಗುವ ಹಾಗೆ ಅಲ್ಲಿ ಬೆಟ್ಟ ಗುಡ್ಡಗಳು ಕುಸಿದಿವೆ. ಅಷ್ಟೇ ಅಲ್ಲ, ಉತ್ತರ ಕರ್ನಾಟಕದ ಇತಿಹಾಸದಲ್ಲಿ ಕಂಡರಿಯದ ಪ್ರವಾಹ ಉಂಟಾಗಿ ಲಕ್ಷಾಂತರ ಜನರ ಮನೆ, ಜಮೀನು ಹಾಳಾಗಿವೆ. ಹಾಗೆಯೆ ಮತ್ತೆ ಕೆಲವು ರಾಜ್ಯ ಗಳಲ್ಲಿ ವಾಡಿಕೆಯ ಮಳೆಯಾಗದೆ ಮನುಷ್ಯ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ. ಕುಡಿಯುವ ನೀರು ಹಾಗೂ ತಿನ್ನುವ ಅನ್ನಕ್ಕೆ ಕೊರತೆ ಉಂಟಾಗಿ ಸರ್ಕಾರಗಳು ಹೆಣಗುವಂತೆ ಆಗಿದೆ. ಇವುಗಳೆಲ್ಲವೂ ಮನುಷ್ಯ ಪ್ರಕೃತಿಗೆ ಮಾಡಿದ ಅಪಚಾರಕ್ಕೆ ಗಿಟ್ಟಿಸಿದ ಪ್ರತಿ ಅಪಚಾರ ಎನ್ನಬಹುದು. 'ಮಾಡಿದ್ದುಣ್ಣೋ ಮಾರಾಯ' ಎನ್ನುವ ಮಾತು ಅನ್ವಯವಾಗುವಂತಿದೆ.

ಮಕ್ಕಳು ನದಿ ತೀರದಲ್ಲಿ ಮರಳು ಮನೆ ಕಟ್ಟಿ ಆಟವಾಡಲು ನದಿಗಳಲ್ಲಿ ಇಂದು ಮರಳೇ ಇಲ್ಲ. ನದಿ ತೀರವಲ್ಲದೆ ನದಿಯ ಒಡಲನ್ನು ಬಗೆದು, ಬಸಿದು ತನ್ನ ಹಣದ ದಾಹವನ್ನು ಇಂಗಿಸಿಕೊಳ್ಳುತ್ತಿದ್ದಾನೆ ಮನುಷ್ಯ. ಮರಳು ಹರಿಯುವ ನೀರನ್ನು ಶುದ್ಧೀಕರಿಸುತ್ತಿತ್ತು. ಇಂದು ಯಾವ ನದಿಗಳಲ್ಲೂ ಕುಡಿಯಲು ಯೋಗ್ಯವಾದ ನೀರು ದೊರಕದೆ ಇರುವುದಕ್ಕೆ ಮನುಷ್ಯನ ಕೃತ್ಯವೇ ಕಾರಣ. ಪ್ರಕೃತಿ ಮಡಿಲಿನಿಂದ ಹರಿದು ಬರುತ್ತಿರುವ ಅಮೃತ ಸಮಾನವಾದ ನದಿಗಳಿಗೆ ಕಾರ್ಖಾನೆಗಳ ತ್ಯಾಜ್ಯ ಹಾಗೂ ಮೋರಿ ನಗರ/ಪಟ್ಟಣ ಹಾಗೂ ಹಳ್ಳಿಗಳ ಮಲಿನವಾದ ಮೋರಿ ನೀರನ್ನು ಹರಿಯಬಿಟ್ಟು ವಿಷದ ನೀರಾಗಿ ಪರಿವರ್ತಿಸುತ್ತಿದ್ದಾನೆ. ಅಷ್ಟೇ ಅಲ್ಲದೆ ಕಾರ್ಖಾನೆಗಳ ತ್ಯಾಜ್ಯ ಭೂಮಿಯನ್ನು ಸೇರುತ್ತಿರುವುದರಿಂದ ಅಂತರ್ಜಲದ ನೀರು ಸಹ ಕುಡಿಯಲು ಯೋಗ್ಯವಿಲ್ಲದೆ ಇಂದು ಹಳ್ಳಿಹಳ್ಳಿಗಳಲ್ಲಿಯೂ ಶುದ್ಧ ಕುಡಿಯುವ ನೀರಿನ ಘಟಕದಿಂದ ಹಣ ಕೊಟ್ಟು ಕುಡಿಯುವ ನೀರನ್ನು ಪಡೆಯುವ ಸ್ಥಿತಿ ಉಂಟಾಗಿದೆ. ಪುಣ್ಯಕ್ಷೇತ್ರಗಳಲ್ಲಿನ ನದಿನೀರನ್ನು ಬಗೆಬಗೆಯಲ್ಲಿ ಭಕ್ತಾದಿಗಳು ಮಲಿನ ಮಾಡುತ್ತಿದ್ದಾರೆ. ನಮ್ಮ ಕಾವೇರಿ ಹಾಗೂ ಕಪಿಲಾ ನದಿಗಳು ಪುಣ್ಯ ನದಿಯಾಗಿ ಉಳಿಯದೆ ಮನುಷ್ಯನ ಕೃತ್ಯ ದಿಂದ ಪಾಪದ ನದಿಗಳಾಗಿ ಪರಿವರ್ತನೆ ಆಗಿವೆ. ಪುಣ್ಯಸ್ನಾನದ ಹೆಸರಿನಲ್ಲಿ ಬಹುಪಾಲು ಮಂದಿ ಪಾಪದ ಕೆಲಸವನ್ನು ಮಾಡುತ್ತಿದ್ದಾರೆ. ತಮ್ಮ ಹಳೆಯ ಒಳಉಡುಪುಗಳನ್ನು ನದಿಗೆ ಅರ್ಪಿಸುವುದರಿಂದ ಯಾವ ಪುಣ್ಯ ಲಭಿಸುತ್ತದೆ ಹೇಳಿ?

ಇಂದು ಅಮೃತ ಸಮಾನವಾದ ಹಾಲು ಹಾಲಾಹಲವಾಗುತ್ತಿದೆ. ಮನುಷ್ಯನ ದುರಾಸೆಯಿಂದ ಕಾಮಧೇನು ಎಂದು ಕರೆಯಿಸಿಕೊಳ್ಳುವ, ಕೋಟ್ಯಾಂತರ ಜನ ಪೂಜಿಸುವ ಹಸುಗಳು ಸಹ ಇಂದು ಹಾಲು ಉತ್ಪಾದಿಸುವ ಕಾರ್ಖಾನೆಗಳಂತೆ ಕಾಣುತ್ತಿವೆ. ವಿಲಾಯಿತಿ ಹಸುಗಳು ಇಂದು ಹತ್ತಾರು ಲೀಟರ್ ಹಾಲು ನೀಡುತ್ತವೆ. ಅವುಗಳಿಗೆ ಹೆಚ್ಚು ಹಾಲು ನೀಡಲು ಕ್ಯಾಲ್ಷಿಯಂ ಇಂಜೆಕ್ಷನ್‌ಗಳನ್ನು ನೀಡಲಾಗುತ್ತಿದೆ. ಹಾಲು ಕರೆಯಲು ಮನುಷ್ಯನಿಗೆ ಸುಸ್ತಾಗಿ ಅದಕ್ಕಾಗಿ ಮೆಷಿನ್‌ಗಳು ಬಂದಿವೆ.

ಜರ್ಮನ್‌ನಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿಯೇ ಪ್ರತಿದಿನ ಜನರು 250 ವಿವಿಧ ಬಗೆಯ ವಿಷಕಾರಕ ಅಂಶಗಳನ್ನು ಗಾಳಿ, ನೀರು ಹಾಗೂ ಆಹಾರದಿಂದ ದೇಹಕ್ಕೆ ಸೇವಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಅಂದರೆ ನಮ್ಮ ದೇಶದಲ್ಲಿ ಇದು 500ಕ್ಕೂ ಹೆಚ್ಚಾಗಿದ್ದರೂ ಆಶ್ಚರ್ಯಪಡಬೇಕಿಲ್ಲ. ಬೆಂಗಳೂರಿನಲ್ಲಿ ಇಂದು ಆಕ್ಸಿಜನ್ ಪಾರ್ಲರ್‌ಗಳು ಬಂದಿವೆ. ಒಂದು ಗಂಟೆಯ ಶುದ್ಧ ಗಾಳಿ ಸೇವನೆಗೆ 250 ರೂಪಾಯಿಗಳನ್ನು ಪಾವತಿಸಬೇಕು. ಅಂದ ಮೇಲೆ ಒಂದು ದಿನಕ್ಕೆ ರೂ.6000 ಪಾವತಿಸಬೇಕಾಗುತ್ತದೆ. ಪ್ರಕೃತಿಯಲ್ಲಿನ ಶುದ್ಧ ಗಾಳಿಯನ್ನು ಮಲಿನ ಮಾಡಿ ನಮ್ಮ ಸಮಾಧಿ ಗುಂಡಿಯನ್ನು ನಾವೇ ತೋಡಿಕೊಳ್ಳುತ್ತಿದ್ದೇವೆ ಎಂದೆನಿಸುತ್ತಿಲ್ಲವೇ?

ಪ್ಲಾಸ್ಟಿಕ್ ಎಂಬುದು ಮಹಾಮಾರಿಯಾಗಿ ಕಾಡುತ್ತಿದೆ. ಇಂದು ಪ್ಲಾಸ್ಟಿಕ್ ಇಲ್ಲದ ಮನೆಯಿಲ್ಲ. ತಟ್ಟೆ, ಲೋಟ, ಚಮಚ, ಬಕೆಟ್, ಜಗ್, ಮಗ್, ಬಿಂದಿಗೆ ಚಾಪೆ, ಕುರ್ಚಿ, ಟೇಬಲ್, ಮಂಚ, ಮೊರ, ಬೀಸಣಿಕೆ... ಹೀಗೆ ಎಲ್ಲವೂ ಪ್ಲಾಸ್ಟಿಕ್‌ಮಯ. ಹಿಂದೆ ಲೋಹ ಹಾಗೂ ಮರದಲ್ಲಿ ಮಾಡುತ್ತಿದ್ದ ವಸ್ತುಗಳು ಇಂದು ಪ್ಲಾಸ್ಟಿಕ್‌ನಿಂದ ಮಾಡಲಾಗುತ್ತಿದೆ. ಲೋಹ ಹಾಗೂ ಮರ ಪ್ರಕೃತಿ ಕೊಟ್ಟ ವರ, ಪ್ಲಾಸ್ಟಿಕ್ ಮನುಷ್ಯ ಪ್ರಕೃತಿಗೆ ಕೊಟ್ಟ ಶಾಪ. ಇದರ ದುಷ್ಪರಿಣಾಮವನ್ನು ವರ್ಣಿಸಲು ಭಯವಾಗುತ್ತದೆ. ಗೋಬಿ ಮಂಚೂರಿಯನ್ನೂ ಸೇರಿದಂತೆ ಅನೇಕ ಬಿಸಿಯಾದ ತಿನಿಸುಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಪಾರ್ಸಲ್ ತರಲಾಗುತ್ತದೆ. ಅದರಲ್ಲಿ 45 ಬಗೆಯ ಕ್ಯಾನ್ಸರ್ ಬರುವ ಸಾಧ್ಯತೆ ಇದೆ. ಇಡ್ಲಿಯನ್ನು ಯಾವ ಹೋಟೆಲ್‌ನಲ್ಲಿಯೂ ಬಟ್ಟೆ ಹಾಕಿ ಮಾಡುವುದಿಲ್ಲ, ಪ್ಲಾಸ್ಟಿಕ್ ಹಾಕಿ ಮಾಡಲಾಗುತ್ತದೆ. ಅದರಿಂದ ಅನೇಕ ಕಾಯಿಲೆಗಳು ಬರುತ್ತವೆ ಎಂದು ವಿಜ್ಞಾನಿಗಳು ಹಾಗೂ ವೈದ್ಯರು ಆಗಾಗ್ಗೆ ಎಚ್ಚರಿಸುತ್ತಲೇ ಇದ್ದಾರೆ.

ನಿಸರ್ಗ ಮಾತೆ ನೀಡಿರುವ ಎಳನೀರನ್ನು ತ್ಯಜಿಸಿ ಮನುಷ್ಯ ಸೃಷ್ಟಿಸಿರುವ ನಿಧಾನ ವಿಷವಾದ, ಟಾಯ್ಲೆಟ್ ತೊಳೆಯಲು ಯೋಗ್ಯವಾದ ಕೋಲಾ–ಪೆಪ್ಸಿ ಕುಡಿಯುತ್ತಿರುವುದು ವಿಪರ್ಯಾಸ. ಪೆಪ್ಸಿಗೂ ದುಡ್ಡು, ಅದರಿಂದ ಉಂಟಾದ ಖಾಯಿಲೆಗೂ ದುಡ್ಡು ಕೊಡಬೇಕಾದ್ದು ಮಾತ್ರ ವಿಡಂಬನೆಯೇ ಸರಿ. ಮನುಷ್ಯನ ದುಷ್ಕೃತ್ಯದಿಂದ ಇಂದು ಆಸ್ಪತ್ರೆ ಹತ್ತಿರ ಆರೋಗ್ಯ ದೂರ, ಹಾಸಿಗೆ ಎತ್ತರ, ಆದರೆ ನಿದ್ರೆ ದೂರ, ವಿದ್ಯೆ ಎತ್ತರ ವಿವೇಕ ದೂರ ಅನ್ನುವಂತಾಗಿದೆ. ಪ್ರಕೃತಿಗೆ ಹತ್ತಿರವಾಗಿದ್ದವರು ಮಾತ್ರ ಆರೋಗ್ಯಕರವಾಗಿರಲು ಸಾಧ್ಯ.

ಮುಂದಿನ ಪೀಳಿಗೆಯವರ ಬದುಕನ್ನು ನೆನೆಸಿಕೊಂಡರೆ ದಿಗಿಲಾಗುತ್ತದೆ. ಮುಂದೆ ಏನಾದರೂ ಜಾಗತಿಕ ಯುದ್ಧ ನಡೆಯುವುದಾದರೆ ಅದು ನೀರಿಗಾಗಿ ಎಂದು ಹೇಳಲಾಗುತ್ತಿದೆ. ನಮ್ಮ ಪೂರ್ವಜರು ಈ ಭೂಮಿಯನ್ನು ಜತನದಿಂದ ಕಾಪಾಡಿಕೊಂಡು ಬಂದ ಕಾರಣಕ್ಕೆ ನಾವು ಇಂದು ಸುರಕ್ಷಿತ ಬದುಕನ್ನು ಕಾಣುತ್ತಿದ್ದೇವೆ. ಅದೇ ರೀತಿ ಪ್ರಕೃತಿಯನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಹೊಣೆ. ಕೆಲವು ಹೊಣೆಗೇಡಿ ನಾಗರಿಕರಿಂದ ಅಮಾಯಕರು ಸಹ ಶಿಕ್ಷೆ ಅನುಭವಿಸುವಂತಾಗುತ್ತದೆ. ಮನುಷ್ಯ ಜವಾಬ್ದಾರಿಯಿಂದ ವರ್ತಿಸಬೇಕು. ಪರಿಸರ ದಿನಾಚರಣೆ ದಿನ ಭಾಷಣ ಮಾಡುವುದು ಕೇಳುವುದಲ್ಲ, ಅನುಸರಣೆ ಮುಖ್ಯ. ನಿತ್ಯ ಜಾಗರೂಕತೆಯಿಂದ ಪ್ರಕೃತಿಗೆ ಮಾಡುತ್ತಿರುವ ಹಾನಿಯನ್ನು ಗಮನಿಸಿ ತಪ್ಪಿಸಲು ಯತ್ನಿಸಬೇಕು. ಪರಿಸರ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ಪ್ಲಾಸ್ಟಿಕ್ ನಿರ್ವಹಣೆ ಕುರಿತು ಜಾಗೃತಿ ಮೂಡಿಸಿಕೊಳ್ಳಬೇಕು. ಮುಂದಿನ ಪೀಳಿಗೆಯವರಿಗೆ ವಾಸಯೋಗ್ಯ ಭೂಮಿಯನ್ನು ಬಿಟ್ಟುಹೋಗಬೇಕು, ಏನಂತೀರಿ?

ಪದ ತಾಂಬೂಲ :
ಪ್ರಕೃತಿ ಒಲಿದರೆ ದೇವತೆ, ಮುನಿದರೆ ಕ್ಷುದ್ರದೇವತೆ !


ದಸರಾ ಯೋಗ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ

ಸ್ಪರ್ಧಿಗಳಿಂದ ಅನಾವರಣಗೊಂಡ ಯೋಗಾಸನದ ವಿವಿಧ ಭಂಗಿಯ ಆಸನಗಳು

ಮೈಸೂರು, ಅ.15(ಎಸ್‌ಪಿಎನ್)– 18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮೈಸೂರು ವಿವೇಕಾನಂದ ಯೋಗ ಕೇಂದ್ರದ ತಂಡಕ್ಕೆ ಹಾಗೂ ಬಾಲಕಿಯರ ವಿಭಾಗದಲ್ಲಿ ಎಸ್‌ಜಿಎಸ್ ಇಂಟರ್ ನ್ಯಾಷನಲ್ ಯೋಗ ಫೌಂಡೇಷನ್ ಸೆಂಟರ್ ವಿದ್ಯಾರ್ಥಿಗಳಿಗೆ ಪ್ರಥಮ ಸ್ಥಾನ ಹಾಗೂ ಐದು ಸಾವಿರ ನಗದು ಬಹುಮಾನ ನೀಡಿ, ದಸರಾ ಯೋಗ ಉಪಸಮಿತಿ ವತಿಯಿಂದ ಭಾನುವಾರ ಗೌರವಿಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಸೆನೆಟ್ ಹಾಲ್‌ನಲ್ಲಿ ದಸರಾ ಯೋಗಾ ಉಪ ಸಮಿತಿ ವತಿಯಿಂದ ನಡೆದ 18 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದ ಸ್ಪರ್ಧೆಗಳಲ್ಲಿ ವಿಜೇತರಾದ ತಂಡಕ್ಕೆ ಪ್ರಶಸ್ತಿ ಮತ್ತು ನಗದು ಬಹುಮಾನ ವಿತರಿಸಲಾಯಿತು.

ಹದಿನೆಂಟು ವರ್ಷ ಮೇಲ್ಪಟ್ಟ ಬಾಲಕರ ವಿಭಾಗದಲ್ಲಿ ಮೈಸೂರಿನ ವಾರಿಯರ್ ತಂಡಕ್ಕೆ ಹಾಗೂ ಯೋಗ ಸ್ಪೋರ್ಟ್ಸ್ ಫೌಂಡೇಷನ್ ತಂಡಕ್ಕೆ ಪ್ರಥಮ ಸ್ಥಾನ ಲಭಿಸಿದ್ದು, ಐದು ಸಾವಿರ ನಗದು ವಿತರಿಸಲಾಯಿತು. ಹದಿನೆಂಟು ವರ್ಷ ಮೇಲ್ಪಟ್ಟ ಬಾಲಕರ ವಿಭಾಗದಲ್ಲಿ ಮೈಸೂರು ವಿವೇಕಾನಂದ ಯೋಗ ಕೇಂದ್ರಕ್ಕೆ ದ್ವಿತೀಯ ಸ್ಥಾನ ಹಾಗೂ 3 ಸಾವಿರ ನಗದು, ಸರ್ಕಾರಿ ಆಯುರ್ವೇದ ಕಾಲೇಜು ತಂಡಕ್ಕೆ ತೃತೀಯ ಸ್ಥಾನ ಹಾಗೂ 2 ಸಾವಿರ ನಗದು, ಬಾಲಕಿಯರ ವಿಭಾಗದಲ್ಲಿ ಮೈಸೂರು ವಿವೇಕಾನಂದ ಯೋಗ ಕೇಂದ್ರದ ತಂಡಕ್ಕೆ ದ್ವಿತೀಯ ಸ್ಥಾನ ಹಾಗೂ 3 ಸಾವಿರ ನಗದು, ಮೈಸೂರು ವೆಲ್‌ನೆಸ್ ಯೋಗ ಕೇಂದ್ರದ ತಂಡಕ್ಕೆ ತೃತೀಯ ಸ್ಥಾನ ಹಾಗೂ 2 ಸಾವಿರ ನಗದು ನೀಡಿ ಗೌರವಿಸಲಾಯಿತು.





ಹದಿನೆಂಟು ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬೆಂಗಳೂರಿನ ದೀರ್ಘಾಯು ಇನ್‌ಸ್ಟಿಟ್ಯೂಟ್ ಆಫ್ ಯೋಗ ತಂಡಕ್ಕೆ ದ್ವಿತೀಯ ಸ್ಥಾನ ಹಾಗೂ 3 ಸಾವಿರ ನಗದು, ಬಾಲಕಿಯರ ವಿಭಾಗದಲ್ಲಿ ಸನ್ನಿಧಿ ಯೋಗ ತಂಡಕ್ಕೆ ದ್ವಿತೀಯ ಸ್ಥಾನ ಮತ್ತು 3 ಸಾವಿರ ನಗದು ನೀಡಿ, ಗೌರವಿಸಲಾಗಿದೆ. ಬಾಲಕರ ವಿಭಾಗದ ಎಸ್‌ಜಿಎಸ್ ಇಂಟರ್‌ನ್ಯಾಷನಲ್ ಯೋಗ ಫೌಂಡೇಷನ್ ಸೆಂಟರ್ ವಿದ್ಯಾರ್ಥಿಗಳಿಗೆ ತೃತೀಯ ಸ್ಥಾನ ಲಭಿಸಿದ್ದು, 2 ಸಾವಿರ ನಗದು ನೀಡಲಾಗಿದೆ. ಬಾಲಕಿಯರ ವಿಭಾಗದ ಮೈಸೂರು ವಿವೇಕಾನಂದ ಮತ್ತು ಸಂಶೋಧನಾ ಕೇಂದ್ರದ ತಂಡಕ್ಕೆ ತೃತೀಯ ಸ್ಥಾನ ಲಭಿಸಿದ್ದು, 2 ಸಾವಿರ ನಗದು ಬಹುಮಾನ ವಿತರಿಸಲಾಯಿತು.

ನೃತ್ಯರೂಪಕದ ಮೂಲಕ ಯೋಗಪಟುಗಳು ಹಾಕಿದ ಹೆಜ್ಜೆಗೆ ನೆರೆದಿದ್ದ ಸಭಿಕರು ಎದ್ದು ನಿಂತು ಚಪ್ಪಾಳೆ ತಟ್ಟಿದರೆ, ಯೋಗಪಟುಗಳು ಪ್ರದರ್ಶಿಸಿದ ವಿವಿಧ ಭಂಗಿಯ ಆಸನಗಳು ಎಲ್ಲರ ಕಣ್ಮನ ಸೂರೆಗೊಂಡವು. ಸಭಾಂಗಣ ಅಕ್ಷರಶಃ ಯೋಗದ ಆವರಣವಾಗಿ ಬದಲಾಗಿತ್ತು. ವೇದಿಕೆಯಲ್ಲಿ 25ಕ್ಕೂ ಅಧಿಕ ತಂಡಗಳು ತಮ್ಮ ಪ್ರತಿಭೆ ಪ್ರದರ್ಶಿಸಿದವು. ಯೋಗಪಟುಗಳ ವಿವಿಧ ಆಸನಗಳ ಭಂಗಿಗಳನ್ನು ಕಂಡು ಸಭಿಕರು ಆಶ್ಚರ್ಯಪಟ್ಟರು.

ಯೋಗ ಚಿಂತನೆ ನಡೆಸಿ: ಇದಕ್ಕೂ ಮೊದಲು ಕಾರ್ಯಕ್ರಮ ಉದ್ಘಾಟಿಸಿದ ಆಯುಷ್ ಇಲಾಖೆ ಆಯುಕ್ತೆ ಲೀಲಾವತಿ ಮಾತನಾಡಿ, ದಸರೆಯಂತೆ ಯೋಗಕ್ಕೂ ಪಾರಂಪರಿಕ ಹಿನ್ನೆಲೆ ಇದೆ. ದೈಹಿಕವಾಗಿ ಸದೃಢಗೊಳಿಸುವ ಶಕ್ತಿ ಯೋಗಕ್ಕಿದೆ ಎಂದರು.

ವೇದಿಕೆಯಲ್ಲಿ ಆರ್.ರವಿಚಂದ್ರ ಜಿ.ಎನ್. ಕೃಷ್ಣಮೂರ್ತಿ, ಕೆ.ಜಿ.ದೇವರಾಜ್, ಎನ್. ಮಹೇಶ್, ಗಣೇಶ್ ಕುಮಾರ್, ಗಜಾನನ ಹೆಗಡೆ, ಸುಧಾಕರ್, ರಾಧಾಕೃಷ್ಣ, ಹೇಮಂತ್ ಕುಮಾರ್, ರಫೀಕ್, ರವಿ ಕುಮಾರ್ ಇದ್ದರು. ದಸರಾ ಮಹೋತ್ಸವ ಅಂಗವಾಗಿ ಯೋಗ ದಸರಾ ಉಪ ಸಮಿತಿಯಿಂದ ಅ. 15ರಿಂದ 22ರವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ವಿವಿಧ ಅಂಗ ಸಂಸ್ಥೆಗಳು ಸಹಕಾರ ನೀಡಿದ್ದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದಸರಾ ದೀಪಾಲಂಕಾರಕ್ಕೆ ಚಾಲನೆ

ವಿದ್ಯುತ್ ದೀಪದ ಬೆಳಕಲ್ಲಿ ಪ್ರಜ್ವಲಿಸುತ್ತಿದೆ ಸಾಂಸ್ಕೃತಿಕ ನಗರಿ ಮೈಸೂರು





ಮೈಸೂರು,ಅ.15(ಎಸ್‌ಪಿಎನ್)–ಮೈಸೂರು ದಸರಾ ಮಹೋತ್ಸವ(2023)ದ 120.54 ಕಿ.ಮೀ ಉದ್ದದ ದೀಪಾಲಂಕಾರ, ನಗರದ ಪ್ರಮುಖ 98 ವೃತ್ತಗಳಲ್ಲಿನ ವಿಶೇಷ ಅಲಂಕಾರಕ್ಕೆ ಇಂಧನ ಸಚಿವ ಕೆ.ಜೆ.ಜಾರ್ಜ್ ಭಾನುವಾರ ಸಂಜೆ 7 ಗಂಟೆಗೆ ಚಾಲನೆ ನೀಡಿದರು.

ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯ ಕೆ.ಆರ್.ಆಸ್ಪತ್ರೆ ಮುಂಭಾಗದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹಾಗೂ ದಸರಾ ದೀಪಾಲಂಕಾರ ಉಪಸಮಿತಿ ಪದಾಧಿಕಾರಿಗಳ ನೇತೃತ್ವದಲ್ಲಿ ಹಸಿರು ಚಪ್ಪರ ಬಳಿ ನಡೆದ ಸರಳ ಸಮಾರಂಭದಲ್ಲಿ ಬಟನ್ ಒತ್ತುವ ಮೂಲಕ ಜಗಮಗಿಸುವ ದೀಪಾಲಂಕಾರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದದ ಸಚಿವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ನೀಡಿದ ಸಲಹೆ ಮೇರೆಗೆ ಸಾಂಪ್ರದಾಯಿಕ ದಸರಾಗೆ ಮೆರಗು ನೀಡಲು ದಸರಾ ದೀಪಾಲಂಕಾರ ಸಮಿತಿ ಸದಸ್ಯರು ನಿರ್ಧಾರದಂತೆ 120.54 ಕಿ.ಮೀ ಉದ್ದದ ದೀಪಾಲಂಕಾರ, 98 ವೃತ್ತದಲ್ಲಿ ವಿವಿಧ ಮಾದರಿ ವಿಶೇಷ ಅಲಂಕಾರ, ನಗರದ ವಿವಿಧೆಡೆ 86 ಪ್ರತಿಕೃತಿಗಳು ದಸರಾ ವೀಕ್ಷಣೆಗೆ ಬರುವ ಪ್ರವಾಸಿಗರ ವಿಶೇಷ ಆಕರ್ಷಣೆ ಆಗಲಿದೆ ಎಂದರು.

ಈ ಬಾರಿ ದಸರಾ ದೀಪಾಲಂಕಾರದಲ್ಲಿ ವಿದ್ಯುತ್ ದೀಪಾಲಂಕೃತಗೊಂಡ ಕಮಾನುಗಳನ್ನು ಬೆಂಗಳೂರು –ಮೈಸೂರು ಹೆದ್ದಾರಿ, ಮೈಸೂರು –ತಿ.ನರಸೀಪುರ ಹೆದ್ದಾರಿ, ಮೈಸೂರು– ನಂಜನಗೂಡು ಹೆದ್ದಾರಿ, ಮೈಸೂರು ನಗರಕ್ಕೆ ಪ್ರವೇಶ ಪಡೆಯುವ ಹೆದ್ದಾರಿಗಳಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗಿದೆ. ವಿಶೇಷವಾಗಿ ರಾಷ್ಟ್ರೀಯ ಹೆದ್ದಾರಿ ಬೆಂಗಳೂರು–ಮೈಸೂರು ಹಾಗೂ ನಂಜನಗೂಡು–ಮೈಸೂರು ರಸ್ತೆಗಳಲ್ಲಿ ರಿಂಗ್ ರಸ್ತೆವರೆಗೆ ಸಂಪೂರ್ಣ ದೀಪಾಲಂಕಾರ ಮಾಡಲಾಗಿದೆ ಎಂದು ತಿಳಿಸಿದರು.

ಐದು ಗ್ಯಾರಂಟಿಗಳಿಗೂ ಸ್ಥಾನ: ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಐದು ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವ ನಿಧಿ ಮತ್ತು ಶಕ್ತಿ ಯೋಜನೆಗಳ ಕುರಿತು ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಸಾಗಿಬಂದ ಹಾದಿಯ ಕುರಿತು ಪ್ರತಿಕೃತಿಯ ಪ್ರದರ್ಶನ, ತಾಯಿ ಭುವನೇಶ್ವರಿಯ ಪ್ರತಿಕೃತಿ(ಕನ್ನಡಾಂಬೆ), ಸೋಮನಾಥೇಶ್ವರಿಯ ಪ್ರತಿಕೃತಿ(ಯುನೆಸ್ಕೋ ಪಟ್ಟಿಯಲ್ಲಿ) ಸೇರ್ಪಡೆಗೊಂಡ ಹಿನ್ನೆಲೆಯಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗಿದೆ. ಅಲ್ಲದೆ, ಭಾರತದ ಸಂವಿಧಾನದ ಪ್ರಸ್ತಾವನೆಯ ಪ್ರತಿಕೃತಿ ಜನರ ಕಣ್ಮನಸೆಳೆಯುತ್ತಿದೆ ಎಂದರು.

ದೀಪಾಲಂಕಾರದೊಂದಿಗೆ ಸಾಗಲಿದೆ ಜಂಬೂ ಸವಾರಿ: ಈ ಬಾರಿ ಜಂಬೂಸವಾರಿ ಮೆರವಣಿಗೆ ಸಂಜೆ 4.40ಕ್ಕೆ ಪ್ರಾರಂಭವಾಗುವುದರಿಂದ ವಿದ್ಯುತ್ ದೀಪಾಲಂಕಾರದೊಂದಿಗೆ ಮೆರವಣಿಗೆ ಸಾಗಲಿದ್ದು, ಜಂಬೂಸವಾರಿ ಬನ್ನಿಮಂಟಪ ತಲುಪುವವರೆಗೂ ದೀಪಾಲಂಕಾರ ನಿರ್ವಹಣೆ ಜವಾಬ್ದಾರಿ ಇಂಧನ ಇಲಾಖೆ ಮೇಲಿದ್ದು, ವಿಶೇಷ ಮುತುವರ್ಜಿ ವಹಿಸುವಂತೆ ಸೂಚಿಸಲಾಗಿದೆ ಎಂದರು.

21 ದಿನಗಳ ದೀಪಾಲಂಕಾರ: ನಗರದ ವಾಹನಗಳ ದಟ್ಟಣೆ ತಪ್ಪಿಸಲು ಹಾಗೂ ಪ್ರವಾಸಿಗರು ವಿಶೇಷ ದೀಪಾಲಂಕಾರವನ್ನು ಸಂಪೂರ್ಣವಾಗಿ ವೀಕ್ಷಿಸಿ ಆನಂದಿಸಲು ದೀಪಾಲಂಕಾರದಲ್ಲಿ ರಾತ್ರಿ 7ರಿಂದ 10 ಗಂಟೆಯವರೆಗೆ ನಿಗದಿಪಡಿಸಿದೆ ಎಂದು ಘೋಷಿಸಿದರಲ್ಲದೆ, ದೀಪಾಲಂಕಾರ ಇಂದಿನಿಂದ(ಅ.15) ನ.4ರವರೆಗೆ 21 ದಿನಗಳ ಕಾಲ(ರಥೋತ್ಸವ ಮತ್ತು ತೆಪ್ಪೋತ್ಸವ ಒಳಗೊಂಡಂತೆ) ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಚಾಲ್ತಿಯಲ್ಲಿರುತ್ತದೆ ಎಂದು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ನಗರದ ಪ್ರಮುಖ ವೃತ್ತಗಳಲ್ಲಿ ಮೈಸೂರು ರಾಜಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ರಾಜ ಜಯ ಚಾಮರಾಜೇಂದ್ರ ಒಡೆಯರ್, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತು ರಾಣಿ ಕೆಂಪನಂಜಮ್ಮಣ್ಣಿ ಪ್ರತಿಕೃತಿಗಳನ್ನು ನಿರ್ಮಿಸಿದೆ. ಚಾಮುಂಡಿಬೆಟ್ಟದ ರಸ್ತೆಯ ಸಂಗೊಳ್ಳಿ ರಾಯಣ್ಣ ವೃತ್ತ, ದೇವಸ್ಥಾನದವರೆಗೂ ವಾಹನ ಸಂಚಾರ ಮತ್ತು ಪ್ರಾಣಿಗಳಿಗೆ ತೊಂದರೆಯಾಗದಂತೆ ಎಲ್‌ಇಡಿ ಟ್ಯೂಬ್ ಬಳಸಿ ಸುರಕ್ಷಿತವಾಗಿ ಅಲಂಕೃತಗೊಳಿಸಲಾಗಿದೆ ಎಂದರು.

ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ ಏಕಲವ್ಯ ವೃತ್ತದಲ್ಲಿ ಪುನೀತ್ ರಾಜಕುಮಾರ್ ಪ್ರತಿಕೃತಿ, ಜೆಕೆ.ಮೈದಾನದ ವೃತ್ತದ ಬಳಿ ಜ್ಞಾನಪೀಠ ಪುರಸ್ಕೃತರಾದ ಕುವೆಂಪು, ಡಾ.ಶಿವರಾಮಕಾರಂತ, ವಿ.ಕೃ.ಗೋಕಾಕ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ದ.ರಾ.ಬೇಂದ್ರೆ, ಪ್ರೊ.ಯು.ಆರ್. ಅನಂತಮೂರ್ತಿ, ಡಾ.ಚಂದ್ರಶೇಖರ್ ಕಂಬಾರ, ಡಾ.ಗಿರೀಶ್ ಕಾರ್ನಾಡ್ ಒಟ್ಟಾಗಿರುವ ಪ್ರತಿಕೃತಿ ಸೇರಿದಂತೆ ಇತರೆಡೆ ನಿರ್ಮಿಸಿರುವ ಪ್ರತಿಕೃತಿಗಳು ಪ್ರವಾಸಿಗರ ಕಣ್ಮನ ಸೆಳೆಯುತ್ತವೆ ಎಂದರು.

ಹಾರ್ಡಿಂಗ್ ವೃತ್ತ, ಚಾಮರಾಜ ಒಡೆಯರ್ ವೃತ್ತ, ಕೆ.ಆರ್.ವೃತ್ತ, ಸುಭಾಷ್ ಚಂದ್ರಬೋಸ್ ವೃತ್ತ, ತಿಲಕನಗರ ವೃತ್ತ, ಹೈವೇ ವೃತ್ತ, ಹಾಗೂ ಎಲ್‌ಐಸಿ ವೃತ್ತದಲ್ಲಿ ದೀಪಾಲಂಕಾರ ಗಮನ ಸೆಳೆಯುತ್ತಿದೆ. ವಿದ್ಯುತ್ ಉಳಿತಾಯದ ದೃಷ್ಟಿಯಿಂದ ದೀಪಾಲಂಕಾರಕ್ಕೆ ಫಿಕ್ಸಲ್ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಈ ಬಲ್ಬಗಳ ಅಳವಡಿಕೆಯಿಂದ ವಿದ್ಯುತ್ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗಲಿದೆ ಎಂದು ವಿದ್ಯುತ್ ದೀಪಾಲಂಕಾರದ ಗುತ್ತಿಗೆದಾರರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಿತ್ಯ 4 ಮೆ.ವ್ಯಾ ವಿದ್ಯುತ್ ವ್ಯಯ: ದಸರಾ ಮಹೋತ್ಸವದಲ್ಲಿ 120.54 ಕಿ.ಮೀ ದೀಪಾಲಂಕಾರಕ್ಕೆ ದಸರಾ ಉಪಸಮಿತಿ ಅನುಮತಿ ನೀಡಿದೆ. ಅಲ್ಲದೆ, ನಗರದ ಎಲ್ಲಾ ಸರ್ಕಾರಿ ಕಟ್ಟಡಗಳಲ್ಲೂ ವಿದ್ಯುತ್ ದೀಪಾಲಂಕಾರ ಪ್ರಕ್ರಿಯೆ ಮುಕ್ತಾಯಗೊಂಡಿದೆ. ಈ ಬಾರಿಯ ದೀಪಾಲಂಕಾರದ ವೆಚ್ಚ 6 ಕೋಟಿ ಎಂದು ಅಂದಾಜಿಸಲಾಗಿದೆ. ಒಂದು ದಿನದ ಒಟ್ಟಾರೆ ದೀಪಾಲಂಕಾರಕ್ಕೆ 3ರಿಂದ 4 ಮೆ.ವ್ಯಾ ವಿದ್ಯುತ್ ಅಗತ್ಯವಿದೆ ಎಂದು ಅವರು ತಿಳಿಸಿದರು.


ಈ ಬಾರಿಯ ದೀಪಾಲಂಕಾರಕ್ಕೆ ಒಟ್ಟು 70ರಿಂದ 80 ಗುತ್ತಿಗೆದಾರರು ಇದ್ದು, 350ರಿಂದ 400 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮೈಸೂರಿನ ಪ್ರಮುಖ 90 ವೃತ್ತಗಳ ದೀಪಾಲಂಕಾರಕ್ಕೆ ದಸರಾ ಉಪಸಮಿತಿ ಅನುಮತಿ ನೀಡಿದೆ. ನಗರದ ಹೊರವಲಯದಲ್ಲಿ ವೃತ್ತಗಳ ದೀಪಾಲಂಕಾರ ಕಾರ್ಯ ವೇಗವಾಗಿ ಸಾಗುತ್ತಿದೆ ಎಂದು ಮಾಹಿತಿ ನೀಡಿದರು. ವೇದಿಕೆಯಲ್ಲಿ ಶಾಸಕರಾದ ತನ್ವೀರ್ ಸೇಟ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಕೆ.ಹರೀಶ್‌ಗೌಡ ಸೇರಿದಂತೆ ದಸರಾ ದೀಪಾಲಂಕಾರ ಸಮಿತಿಯ ಸದಸ್ಯರು, ಸೆಸ್ಕಾಂ ಅಧಿಕಾರಿಗಳು ಭಾಗವಹಿಸಿದ್ದರು.


ಕಳಪೆ ವಿದ್ಯುತ್ ದೀಪ ಅಳವಡಿಕೆ

ಕೆಲ ಗುತ್ತಿಗೆದಾರರು ಕಳಪೆ ಗುಣಮಟ್ಟದ ಚೀನಾ ವಿದ್ಯುತ್ ದೀಪಗಳನ್ನು ಅಳವಡಿಸಿದ್ದಾರೆ. ಅಂದಾಜು 50ಕ್ಕೂ ಹೆಚ್ಚು ಕಿ.ಮೀ.ವರೆಗೆ ಈ ದೀಪಗಳನ್ನು ಬಳಸಲಾಗಿದ್ದು, ಮಳೆ ಬಂದರೆ ಈ ವಿದ್ಯುತ್ ದೀಪಗಳು ಕೆಟ್ಟು ನಿಲ್ಲುವ ಸಂಭವವಿದೆ. ಈ ಕುರಿತು ಸಾರ್ವಜನಿಕರು ಜಿಲ್ಲಾಡಳಿತವನ್ನು ಪ್ರಶ್ನೆ ಮಾಡಬೇಕಿದೆ. ಚೀನಾ ವಿದ್ಯುತ್ ದೀಪಗಳು ಕಡಿಮೆ ಬೆಲೆಗೆ ಸಿಗುತ್ತವೆ ಎಂಬ ಕಾರಣಕ್ಕೆ ಇವುಗಳನ್ನು ಉಪಯೋಗಿಸಿದ್ದು, ಇವುಗಳಿಂದ ಹೆಚ್ಚು ಪ್ರಮಾಣದ ವಿದ್ಯುತ್ ವ್ಯಯವಾಗಲಿದೆ. ಈ ಮಾರ್ಗದ ದೀಪಾಲಂಕಾರ ಕೆಟ್ಟರೆ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ನಿರಾಸೆಯಾಗಲಿದೆ ಎಂದು ಗುತ್ತಿಗೆಗಾರರೊಬ್ಬರು ಬೇಸರ ಹೊರಹಾಕಿದರು.












ದಸರಾ ವಸ್ತು ಪ್ರದರ್ಶನಕ್ಕೆ ಮುಖ್ಯಮಂತ್ರಿಗಳಿಂದ ಚಾಲನೆ

ವಿವಿಧ ಮಳಿಗೆಗಳ ಉದ್ಘಾಟನೆ, ಹರಿದು ಬಂದ ಜನಸಾಗರ





ಮೈಸೂರು, ಅ.15(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲೊಂದಾದ ದಸರಾ ವಸ್ತುಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಚಾಲನೆ ನೀಡಿದರು.

ವಸ್ತು ಪ್ರದರ್ಶನದ ಮುಖ್ಯದ್ವಾರದಲ್ಲಿ ಟೇಪ್ ಕತ್ತರಿಸುವ ಮೂಲಕ 90 ದಿನಗಳ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದ ಅವರು, ಬಳಿಕ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಾಣವಾಗಿರುವ ಬೇಲೂರು ಚೆನ್ನಕೇಶವ ದೇವಸ್ಥಾನ ಮಾದರಿಯ ಮಳಿಗೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮಾಹಿತಿ ನೀಡುವ ಮಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನಕಗಿರಿ ಕೋಟೆ, ಮಹಿಳಾ ಅಭಿವೃದ್ಧಿ ನಿಗಮದ ಮಹಿಳೆಯ ಸ್ವಯಂ ಉದ್ಯೋಗ ಕುರಿತ ಮಳಿಗೆ ಉದ್ಘಾಟಿಸಿದರಲ್ಲದೆ, ಸಮಾಜ ಕಲ್ಯಾಣ ಇಲಾಖೆ ಮಳಿಗೆ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಮೇಯರ್ ಶಿವಕುಮಾರ್, ಶಾಸಕರಾದ ತನ್ವೀರ್ ಸೇಠ್, ಶ್ರೀವತ್ಸ, ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ರವಿಶಂಕರ್, ವಿಧಾನಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ ಉಪ ಮೇಯರ್ ರೂಪ, ಪಾಲಿಕೆ ಸದಸ್ಯೆ ಛಾಯಾದೇವಿ, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ ಗೌಡ ಮತ್ತಿತರರಿದ್ದರು.

ನಡೆಯದ ವೇದಿಕೆ ಕಾರ್ಯಕ್ರಮ: ವಸ್ತು ಪ್ರದರ್ಶನ ಮುಖ್ಯದ್ವಾರದ ಎದುರು ವೇದಿಕೆ ಸಿದ್ಧವಾಗಿದ್ದರೂ ಟೇಪ್ ಕತ್ತರಿಸಿ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದ ಸಿದ್ದರಾಮಯ್ಯ ಅವರು, ನೇರವಾಗಿ ಮಳಿಗೆಗಳ ಉದ್ಘಾಟನೆ ನೆರವೇರಿಸಿ ಅರಮನೆ ವೇದಿಕೆ ಕಾರ್ಯಕ್ರಮಕ್ಕೆ ಸಾಗಿದರು. ಇತ್ತ ಸಿಎಂ ವೇದಿಕೆಗೆ ಆಗಮಿಸಬಹುದು ಎಂದು ಶಾಸಕರಾದ ಶ್ರೀವತ್ಸ, ಕೆ.ಹರೀಶ್ ಗೌಡ, ಮೇಯರ್ ಶಿವಕುಮಾರ್ ಇನ್ನಿತರರು ವೇದಿಕೆ ಮೇಲೆ ಕಾದು ಕುಳಿತು ಸಿದ್ದರಾಮಯ್ಯ ಅವರ ಕಾರು ವಸ್ತುಪ್ರದರ್ಶನದಿಂದ ಹೊರ ಹೋಗುತ್ತಿದ್ದಂತೆ ತಾವುಗಳು ಕೂಡ ವೇದಿಕೆಯಿಂದ ಇಳಿದು ಹೊರ ನಡೆದರು.

ಮೊದಲ ದಿನವೇ ಹರಿದು ಬಂದ ಜನ: ದಸರಾ ವಸ್ತುಪ್ರದರ್ಶನ ಉದ್ಘಾಟನೆಯಾಗುತ್ತಿದ್ದಂತೆ ತಂಡೋಪತಂಡವಾಗಿ ಆಗಮಿಸಿದ ಪ್ರವಾಸಿಗರು ಮೊದಲ ದಿನವೇ ವಸ್ತುಪ್ರದರ್ಶನಕ್ಕೆ ಕಳೆ ತಂದರು. ಮುಖ್ಯದ್ವಾರದ ಎದುರಿನ ಸೆಲ್ಫಿ ಸ್ಪಾಟ್ ಎದುರು ಫೋಟೋ ಕ್ಲಿಕ್ಕಿಸಿಕೊಂಡು ಹರ್ಷ ವ್ಯಕ್ತಪಡಿಸಿದರಲ್ಲದೆ ಇಷ್ಟದ ತಿಂಡಿ–ತಿನಿಸುಗಳ ಸವಿದು ಸಂಭ್ರಮಿಸಿದರು. ಮಟಾಣಿಗಳು ಅಮ್ಯೂಸ್ಮೆಂಟ್ ಪಾರ್ಕ್‌ನಲ್ಲಿನ ಜಾಯಿಂಟ್ ವೀಲ್‌ಗಳ ಆಟವಾಡಿ ಕುಣಿದಾಡಿದರು.

'ಅನಾವರಣ' ಕವನ ಸಂಕಲನ ಬಿಡುಗಡೆ



ಮೈಸೂರು, ಅ.15(ಜಿಎ)–ದಲಿತ ಸಾಹಿತ್ಯ ಪರಿಷತ್ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಟಿ.ಎಂ. ಪವಿತಾ ಅವರು ರಚಿಸಿರುವ 'ಅನಾವರಣ' ಎಂಬ ಕವನ ಸಂಕಲನವನ್ನು ಡಾ. ಕಲ್ಯಾಣಸಿರಿ ಬಂತೇಜಿ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಅವರು, ಅಂಬೇಡ್ಕರ್ ಲಕ್ಷಾಂತರ ಜನರೊಂದಿಗೆ ಬೌದ್ಧ ಧರ್ಮ ಅವಲಂಬಿಸಿದ ಈ ದಿನದಂದೇ ದಮ್ಮ ದೀಕ್ಷಾ ವೈಶಿಷ್ಟ್ಯತೆಯ ಕವನ ಸಂಕಲನ ಬಿಡುಗಡೆ ಸ್ವಾಗತಾರ್ಹವಾಗಿದೆ. ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮರಳುವ ಮೂಲಕ ಪುನಶ್ಚೇತನ ನೀಡಿದರು. ದೇಶದಲ್ಲಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದವುಗಳಲ್ಲಿನ ಅಸಮಾನತೆ, ಶೋಷಣೆ, ದೌರ್ಜನ್ಯದಿಂದ ಬೌದ್ಧ ಧರ್ಮ ಬಿಡುಗಡೆಗೊಳಿಸುತ್ತದೆ ಎಂಬುದು ಇದಕ್ಕೆ ಕಾರಣವಾಗಿತ್ತು. ಅವರು ಇದಕ್ಕೂ ಮೊದಲು ಜಗತ್ತಿನ ಧರ್ಮ ಅಧ್ಯಯನ ಮಾಡಿದ್ದರಲ್ಲದೆ, ಬೌದ್ಧ ಧರ್ಮ ಮಾನವ ತತ್ವ ಒಳಗೊಂಡಿದೆ ಎಂಬುದನ್ನು ಅರಿತಿದ್ದರು ಎಂದರು. ಕಾರ್ಯಕ್ರಮದಲ್ಲಿ ಲೇಖಕರಾದ ಡಾ.ಟಿ.ಎಂ. ಪವಿತಾ, ಡಾ. ಚಂದ್ರಗುಪ್ತ, ಡಾ. ಉಮೇಶ್, ಡಾ. ರಂಗಸ್ವಾಮಿ ಕಾಳಿಹುಂಡಿ, ಡಾ.ಟಿ. ಮಂಜು ಸತ್ತಿಗೆ, ಡಾ.ಎಂ. ಪುಷ್ಪ ಹಾಜರಿದ್ದರು.

ಉಪ್ಪಾರ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

ಮೈಸೂರು, ಅ.15–ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ವತಿಯಿಂದ 2023–24ನೇ ಸಾಲಿನ ಯೋಜನೆಗಳಾದ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಶೈಕ್ಷಣಿಕ ಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಗೆ ಅರ್ಜಿ ಸಲ್ಲಿಸುವವರು ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಂಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು ಹಾಗೂ ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು. ಅರ್ಜಿ ಸಲ್ಲಿಸಲು ನ.3 ಕೊನೇ ದಿನ. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಶೈಕ್ಷಣಿಕ ಸಾಲ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಯಾವುದೇ ಕೊನೆಯ ದಿನಾಂಕ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ www.uppara development. karnataka.gov.in ಅಥವಾ ದೂರವಾಣಿ ಸಂಖ್ಯೆ 080–22252555 ಅಥವಾ ಸಂಬಂಧಿತ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು.

ಗದೆ ಎತ್ತಿ ನಾಡಕುಸ್ತಿಗೆ ಚಾಲನೆ ನೀಡಿದ ಸಿದ್ದರಾಮಯ್ಯ

30 ಜೋಡಿ ಕುಸ್ತಿಪಟುಗಳ ರೋಚಕ ಸೆಣಸಾಟ, ಶಿಳ್ಳೆ-ಚಪ್ಪಾಳೆ ಮೂಲಕ ಪ್ರೋತ್ಸಾಹ





ಮೈಸೂರು, ಅ.15(ಎಂಕೆ)– ನಗರದ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜು ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ದಸರಾ ನಾಡಕುಸ್ತಿ ಪಂದ್ಯಾವಳಿಯನ್ನು ಕುಸ್ತಿ ಗದೆ ಎತ್ತುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ದಾವಣಗೆರೆ ಪೈಲ್ವಾನ್ ಕಾರ್ತಿಕ್ ಕಾಟೆ ಹಾಗೂ ದೆಹಲಿ ಪೈಲ್ವಾನ್ ವಿಕ್ಕಿ ನಡುವಿನ ಉದ್ಘಾಟನಾ ಪಂದ್ಯದಲ್ಲಿ ಪೈಲ್ವಾನರ ಭುಜ ತಟ್ಟಿ ಹುರಿದುಂಬಿಸುವ ಮೂಲಕ ಕುಸ್ತಿ ಪಂದ್ಯಗಳಿಗೆ ಚಾಲನೆ ನೀಡಿದರು. ಬಳಿಕ ಅರ್ಧ ಗಂಟೆಗೂ ಹೆಚ್ಚು ಕಾಲ ಕುಸ್ತಿ ಅಖಾಡದ ಎದುರು ಕುಳಿತು ಪಂದ್ಯ ವೀಕ್ಷಣೆ ಮಾಡಿದರು. ಅವರೊಂದಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೇಯರ್ ಶಿವಕುಮಾರ್, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಎ.ಆರ್. ಕೃಷ್ಣಮೂರ್ತಿ, ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಉಪ ಮೇಯರ್ ರೂಪ ಮತ್ತಿತರರು ಸಾಥ್ ನೀಡಿದರು.

ದೂಳೆಬ್ಬಿಸಿದ ಪೈಲ್ವಾನರು: ಪಂದ್ಯಾವಳಿಯ ಮೊದಲ ದಿನ ನಡೆದ 30 ಜೋಡಿ ಪಂದ್ಯಗಳಲ್ಲಿ ಗೆಲುವಿಗಾಗಿ ಸೆಣಸಾಡಿದ ಪೈಲ್ವಾನರು ಅಖಾಡದಲ್ಲಿ ದೂಳೆಬ್ಬಿಸಿದರು. ಪ್ರಮುಖ ಪಂದ್ಯಗಳಾದ ದಾವಣಗೆರೆ ಪೈಲ್ವಾನ್ ಕಾರ್ತಿಕ್ ಕಾಟೆ ಮತ್ತು ದೆಹಲಿ ಪೈಲ್ವಾನ್ ವಿಕ್ಕಿ, ಬೆಳಗಾಂ ಪೈಲ್ವಾನ್ ಸುನೀಲ್ ಪಡತಾರೆ ಮತ್ತು ಹರಿಯಾಣ ಪೈಲ್ವಾನ್ ರಾಹುಲ್ ರಾಟಿ ನಡುವೆ ನಡೆದ 30 ನಿಮಿಷಗಳ ಜಿದ್ದಾಜಿದ್ದಿನ ಪಂದ್ಯ ಸಮಬಲ ಕಂಡಿತು. ಹಾಗೆಯೇ ಬಾಲಕಿಯರ ವಿಭಾಗದಲ್ಲಿ ಮಂಡ್ಯದ ಪೈಲ್ವಾನ್ ಸ್ಫೂರ್ತಿ ವಿರುದ್ಧ ಬನ್ನೂರಿನ ಪೈಲ್ವಾನ್ ಜಾಹ್ನವಿ ಹಾಗೂ ಮಂಡ್ಯದ ಪೈಲ್ವಾನ್ ಅಮೂಲ್ಯ ವಿರುದ್ಧ ರಮ್ಮನಹಳ್ಳಿ ಪೈಲ್ವಾನ್ ಸಿಂಚನ ರೋಚಕ ಗೆಲುವು ಪಡೆದರು.

ಹಾಗೆಯೇ ಪೈಲ್ವಾನ್ ಅಶೋಕಪುರಂ ರವಿ ವಿರುದ್ಧ ಪೈಲ್ವಾನ್ ಸಕ್ಕಳಿ ಮನು, ಮೇಳಾಪುರ ಪೈಲ್ವಾನ್ ಬಾಲಚಂದ್ರ ವಿರುದ್ಧ ಕಾಳಸಿದ್ದನಹುಂಡಿ ಪೈಲ್ವಾನ್ ಸೋಮಶೇಖರ್, ಚನ್ನರಾಯಪಟ್ಟಣ ಪೈಲ್ವಾನ್ ಗಂಗರಾಜು ವಿರುದ್ಧ ವೀರನಗೆರೆ ಪೈಲ್ವಾನ್ ವಿಕಾಶ್ ಚಟ್‌ಪಟ್, ಮೆಲ್ಲಹಳ್ಳಿ ಪೈಲ್ವಾನ್ ಎ.ಎಸ್.ಪ್ರಮೋದ್ ವಿರುದ್ಧ ಹೊಂಗಳ್ಳಿ ಪೈಲ್ವಾನ್ ನಿಶ್ಚಿತ್, ಅಶೋಕಪುರಂ ಪೈಲ್ವಾನ್ ಎಲ್.ಜಯಂತ್ ವಿರುದ್ಧ ನಂಜನಗೂಡು ಪೈಲ್ವಾನ್ ಎನ್.ಕೆ.ಕುಮಾರ್, ಕೋಲಾರ ಪೈಲ್ವಾನ್ ಅಭಿಷೇಕ್ ವಿರುದ್ಧ ಮಾಯಣ್ಣ ಗರಡಿ ಪೈಲ್ವಾನ್ ಶಕ್ತಿ ರಮೇಶ್, ನಾಗನಹಳ್ಳಿ ಪೈಲ್ವಾನ್ ಸುಮಂತ್ ವಿರುದ್ಧ ಮೈಸೂರು ಪೈಲ್ವಾನ್ ಮೊಹಮ್ಮದ್ ರ್ಷ್ಯುದ್ ಕುರೇಶಿ ಜಯಗಳಿಸಿದರು.

ಕನಕಪುರ ಪೈಲ್ವಾನ್ ಆದರ್ಶ ವಿರುದ್ಧ ಅಶೋಕಪುರಂ ಪೈಲ್ವಾನ್ ಸಮರ್ಥ್, ಎಂ.ಜಿ.ಕೊಪ್ಪಲು ಪೈಲ್ವಾನ್ ಆಶೀಸ್ ವಿರುದ್ಧ ಮೆಲ್ಲಹಳ್ಳಿ ಪೈಲ್ವಾನ್ ಪ್ರವೀಣ್ ಕುಮಾರ್, ಪೈಲ್ವಾನ್ ಡಿ.ಗಗನ್ ವಿರುದ್ಧ ಕುಂಬಾರ ಕೊಪ್ಪಲು ಪೈಲ್ವಾನ್ ಮನೋಜ್ ಕುಮಾರ್, ಮಿಠಾಯಿ ಅಣ್ಣನವರ ಗರಡಿ ಪೈಲ್ವಾನ್ ಆರ್.ಧನುಷ್ ವಿರುದ್ಧ ಟಿ.ನರಸೀಪುರ ಪೈಲ್ವಾನ್ ಪಿ.ಟಿ.ದರ್ಶನ್, ಪೈಲ್ವಾನ್ ರಿಹಾನ್ ಖಾನ್ ವಿರುದ್ಧ ನಗುವಿನಹಳ್ಳಿ ಪೈಲ್ವಾನ್ ಸಿ.ನಂದನ್, ಪೈಲ್ವಾನ್ ಎನ್.ಎಸ್.ದರ್ಶನ್ ವಿರುದ್ಧ ಮಳವಳ್ಳಿ ಪೈಲ್ವಾನ್ ಹರೀಶ್ ನಾಯಕ, ಪಡುವಾರಹಳ್ಳಿ ಪೈಲ್ವಾನ್ ಟಿ.ವರುಣ್ ವಿರುದ್ಧ ನರಸೀಪುರ ಪೈಲ್ವಾನ್ ಮೋಹನ್‌ಕುಮಾರ್, ಅಶೋಕಪುರಂ ಪೈಲ್ವಾನ್ ಮಹದೇವಪ್ರಸಾದ್ ವಿರುದ್ಧ ನಗುವಿನಹಳ್ಳಿ ಪೈಲ್ವಾನ್ ಜಯಸೂರ್ಯ, ಕಾಳಸಿದ್ದನಹುಂಡಿ ಪೈಲ್ವಾನ್ ಎಸ್. ಜಯಂತ್ ವಿರುದ್ಧ ಕ್ಯಾತಮಾರನಹಳ್ಳಿ ಪೈಲ್ವಾನ್ ಉಲ್ಲಾಸ್, ಮಳವಳ್ಳಿ ಪೈಲ್ವಾನ್ ಸಿ.ನಾಗೇಂದ್ರ ವಿರುದ್ಧ ಉದ್ಬೂರು ಪೈಲ್ವಾನ್ ಎಂ.ಪ್ರದೀಪ್, ಬನ್ನೂರು ಪೈಲ್ವಾನ್ ಬಿ.ಎಸ್.ಪ್ರಮುಲ್‌ಗೌಡ ವಿರುದ್ಧ ಬೋಗಾದಿ ಪೈಲ್ವಾನ್ ಜೆ.ಮಹೇಶ್ ಹಾಗೂ ಹುಣಸೂರು ಪೈಲ್ವಾನ್ ಆನಂದ್ ವಿರುದ್ಧ ಗುಂಡ್ಲುಪೇಟೆ ಪೈಲ್ವಾನ್ ಅಭಿಷೇಕ್ ಜಯಭೇರಿ ಬಾರಿಸಿದರು.

ತುಂಬಿದ ಕ್ರೀಡಾಂಗಣ: ದಸರಾ ಕುಸ್ತಿ ಪಂದ್ಯಗಳನ್ನು ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ಆಗಮಿಸಿದ ಕ್ರೀಡಾಭಿಮಾನಿಗಳಿಂದ ಕುಸ್ತಿ ಕ್ರೀಡಾಂಗಣ ತುಂಬಿತ್ತು. ಗೆಲುವಿಗಾಗಿ ಪೈಲ್ವಾನರು ಸೆಣಸಾಡುತ್ತಿದ್ದರೆ, ಇತ್ತ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಕ್ರೀಡಾ ಪ್ರಿಯರು ಶಿಳ್ಳೆ–ಚಪ್ಪಾಳೆ ಮೂಲಕ ಪ್ರೋತ್ಸಾಹಿಸಿದರು.

ಮೈಸೂರು ಮಿತ್ರ

ಜಕ್ಕನಹಳ್ಳಿ ಸರ್ಕಲ್‌ನಲ್ಲಿ ಸಿಎಸ್‌ಪಿ ಹುಟ್ಟುಹಬ್ಬ ಆಚರಣೆ



ಪಾಂಡವಪುರ, ಅ.15– ತಾಲೂಕಿನ ಜಕ್ಕನಹಳ್ಳಿ ಸರ್ಕಲ್‌ನಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 60ನೇ ಹುಟ್ಟುಹಬ್ಬವನ್ನು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು.

ಜಕ್ಕನಹಳ್ಳಿ ವೃತ್ತದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 60 ಅಡಿ ಕಟೌಟ್ ನಿರ್ಮಿಸಿದ್ದ ಅಭಿಮಾನಿಗಳು ಕಟೌಟ್ ಎದುರು ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಅಲ್ಲದೇ ತಾಯಿ ಚಾಮುಂಡೇಶ್ವರಿ ಸಿ.ಎಸ್.ಪುಟ್ಟರಾಜು ಅವರಿಗೆ ಆಯುಸ್ಸು, ಆರೋಗ್ಯ ನೀಡಿ ಮತ್ತಷ್ಟು ಜನಸೇವೆ ಮಾಡುವ ಶಕ್ತಿ ನೀಡಲಿ ಎಂದು ಹಾರೈಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಮಲ್ಲೇಶ್, ಮುಖಂಡರಾದ ಆನಂದ್, ಅಶ್ವಥ್ ಕುಮಾರೇಗೌಡ, ಚಂದ್ರಶೇಖರ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಜೆ.ಪಿ. ಶಿವಶಂಕರ್, ವಿ.ಬೆಟ್ಟಸ್ವಾಮಿಗೌಡ, ಚಂದ್ರು, ಸಂಜು, ಹರಿ, ಅನಿಲ್, ಮಂಜುನಾಥ್, ಕೇಶವ, ಸತ್ಯ ಜಿ.ಗೌಡ, ಸುರೇಂದ್ರ, ತಮ್ಮೇಗೌಡ, ದೇವೇಂದ್ರಣ್ಣ, ನರಸಿಂಹೇಗೌಡ, ಗ್ರಾಪಂ ಸದಸ್ಯ ಲೋಕೇಶ್, ದಿವಾಕರ್, ದಾಸೇಗೌಡ, ಸ್ವಾಮೀಗೌಡ, ಶಂಕರ, ರವಿ, ಕೆಂಪೇಗೌಡ, ಕುಮಾರ್, ಯೋಗಣ್ಣ, ಈರಣ್ಣ ಚಂದ್ರು ಮಹೇಂದ್ರ ಶಿವು, ಅರುಣ್, ಶೇಖರ, ನಾಗರಾಜು, ಬೋರೇಗೌಡ, ವಿನಯ್, ರಾಜು, ಸ್ವಾಮಿ, ಜಯರಾಮಣ್ಣ, ಜಯಣ್ಣ, ಕುಮಾರಸ್ವಾಮಿ, ರವಿ, ಅರವಿಂದ್, ಮೋಹನ್ ಸೇರಿದಂತೆ ಹಲವರಿದ್ದರು.



ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಮೈಸೂರಿನಿಂದ ಆಗಮಿಸಿದ ಅಂಬಾರಿ ಆನೆ ಮಹೇಂದ್ರ, ವಿಜಯ ಹಾಗೂ ವರಲಕ್ಷ್ಮಿ ಆನೆಗಳಿಗೆ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಪೂಜೆ ಸಲ್ಲಿಸಿ ಸ್ವಾಗತಿಸಿದರು. ಈ ವೇಳೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಉಚಿತ ಅನಿಲ ಸಂಪರ್ಕ ಯೋಜನೆ

ಮಂಡ್ಯ, ಅ.15– ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ದೇಶಾದ್ಯಂತ 75 ಲಕ್ಷ ಅರ್ಹ ಕುಟುಂಬಗಳಿಗೆ ಉಚಿತ ಅನಿಲ ಸಂಪರ್ಕ ನೀಡುವ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಚಾಲ್ತಿಯಲ್ಲಿರುವ ಅಂತ್ಯೋದಯ ಹಾಗೂ ಆದ್ಯತಾ ಪಡಿತರ ಚೀಟಿಗಳನ್ನು ಹೊಂದಿರುವ ಹಾಗೂ ಈಗಾಗಲೇ ಯಾವುದೇ ಅನಿಲ ಏಜೆನ್ಸಿಗಳಿಂದ ಪಡಿತರ ಚೀಟಿಯಲ್ಲಿನ ಯಾವುದೇ ಸದಸ್ಯರ ಹೆಸರಿನಲ್ಲಿ ಅನಿಲ ಸಂಪರ್ಕ ಪಡೆಯದಿರುವ ಕುಟುಂಬದಲ್ಲಿನ ವಯಸ್ಕ ಮಹಿಳೆ ಸದರಿ ಯೋಜನೆಗೆ ಅರ್ಹರಿರುತ್ತಾರೆ. ಅರ್ಜಿಯನ್ನು ಆನ್‌ಲೈನ್, CSC, Helpdesk, ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್ ಮೂಲಕ ಸಲ್ಲಿಸಬಹುದಾಗಿರುತ್ತದೆ. ಮಾಹಿತಿಗೆ ಹತ್ತಿರದ ಗ್ಯಾಸ್ ಏಜೆನ್ಸಿಗಳಿಗೆ ಭೇಟಿ ನೀಡಿ.

ಜಿಲ್ಲೆಯ ವಿವಿಧೆಡೆ ಪಿತೃಪಕ್ಷ ಆಚರಣೆ



ಮಂಡ್ಯ, ಅ.15– ಪ್ರಮುಖ ಹಬ್ಬಗಳಲ್ಲಿ ಒಂದಾದ ಪಿತೃಪಕ್ಷ (ಮಹಾಲಯ ಅಮವಾಸ್ಯೆ) ಹಬ್ಬವನ್ನು ಜಿಲ್ಲಾದ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಪಿತೃಗಳಿಗೆ ವಿಶೇಷ ಕೃತಜ್ಞತೆ ಸಲ್ಲಿಸುವ ಪಿತೃಪಕ್ಷ ಅಥವಾ ಮಾರ್ಲಮಿ ಹಬ್ಬಕ್ಕೆ ಜಿಲ್ಲೆಯಲ್ಲಿ ವಿಶೇಷ ಮಹತ್ವವಿದ್ದು, ಬರದ ನಡುವೆಯೂ ಗ್ರಾಮೀಣ ಜನರು ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪಿತೃಪಕ್ಷದಲ್ಲಿ ಪೂರ್ವಜರಿಗೆ ಮಾಂಸ ದೂಟ, ಚಕ್ಕುಲಿ, ನಿಪ್ಪಟ್ಟು, ಕಜ್ಜಾಯ ಸೇರಿದಂತೆ ವಿವಿಧ ರೀತಿಯ ಭೋಜನ, ಹೊಸಬಟ್ಟೆ ಒಳಗೊಂಡ ಎಡೆ ಇಟ್ಟು, ತಾವು ಹೊಸಬಟ್ಟೆ ಧರಿಸಿ ಪೂಜೆ ಸಲ್ಲಿಸುವ ಸಂಪ್ರದಾಯ ನಡೆದುಕೊಂಡು ಬಂದಿದ್ದು, ಮಾರುಕಟ್ಟೆಯಲ್ಲಿ ಕಳೆದ 3 ದಿನಗಳಿಂದ ಎಡೆ ಸಾಮಗ್ರಿ, ಹೂ, ಹಣ್ಣು, ಸಿಹಿ ಖರೀದಿಯಲ್ಲಿ ಜನ ಮುಗಿ ಬಿದ್ದಿದ್ದರು.

ಮಂಡ್ಯ ಭಾಗದಲ್ಲಿ ಈ ಹಬ್ಬಕ್ಕೆ ಬಾಡೂಟವೇ ಪ್ರಧಾನವಾಗಿದ್ದು, ವಿವಿಧ ಬಗೆಯ ಮಾಂಸಾಹಾರ ತಯಾರಿಸಿ ಎಡೆ ಇಟ್ಟು ಪೂಜೆ ಸಲ್ಲಿಸಿ, ಸಂಬಂಧಿಗಳು ಹಾಗೂ ಸ್ನೇಹಿತರನ್ನು ಕರೆದು ಬಾಡೂಟ ಹಾಕುವುದೇ ಈ ಹಬ್ಬದ ವಿಶೇಷ. ಹೀಗಾಗಿ ಬೆಳಗ್ಗೆಯಿಂದಲೇ ಮಾಂಸ ಖರೀದಿಗೆ ಜನ ಮುಗಿ ಬಿದ್ದಿದ್ದರು. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಜನರು ಆಡು, ಟಗರು, ಕೋಳಿ ಮಾಂಸ ಖರೀದಿಯಲ್ಲಿ ಮಗ್ನರಾಗಿದ್ದರು.

ಮನೆಗಳಲ್ಲಿ ಸಾಂಪ್ರದಾಯಿಕವಾಗಿ ಎಡೆ ಇಡುವುದಕ್ಕೂ ಮುನ್ನ ಪೂರ್ವಜರ ಸಮಾಧಿಗೆ ತೆರಳಿ ಅಲ್ಲೂ ಸಹ ಅವರಿಗೆ ವಿಶೇಷ ಪೂಜೆ ಸಲ್ಲಿಸಿ, ಎಡೆ ಇಟ್ಟು ನಮಸ್ಕರಿಸುವ ಪದ್ಧತಿಯೂ ಸಹ ನಡೆದುಕೊಂಡು ಬಂದಿದೆ. ವಿಶೇಷವೆಂದರೆ ಮಂಡ್ಯ ತಾಲೂಕಿನ ಸಾತನೂರು ಗ್ರಾಮದ ಶ್ರೀಮಸಣಮ್ಮನ ದೇವಾಲಯದಲ್ಲಿ ದೇವರಿಗೆ ಮಾಂಸ ಪ್ರಸಾದವನ್ನು ನೈವೇದ್ಯಕ್ಕೆ ಇಡಲಾಗುತ್ತದೆ. ಇದು ಪಿತೃಪಕ್ಷ ಹಬ್ಬದಲ್ಲಿ ನಡೆಯುವ ವಿಶೇಷ ಆಚರಣೆಯಾಗಿದ್ದು, ಹಬ್ಬದಂದು ದೇವರಿಗೆ ಪೂಜೆ ಮಾಡಿ, ಸಾವಿರಾರು ಭಕ್ತರಿಗೆ ಪ್ರಸಾದ ರೂಪದಲ್ಲಿ ಬೇಯಿಸಿದ ಮಾಂಸ ಮತ್ತು ಅನ್ನವನ್ನು ನೀಡಲಾಗುತ್ತದೆ.

ಹಬ್ಬದ ಪ್ರಾಮುಖ್ಯತೆ: ಕುಟುಂಬದಲ್ಲಿ ವಿಧಿವಶರಾದ ಹಿರಿಯರನ್ನು ಸ್ಮರಿಸುವ ಹಾಗೂ ಅವರ ಆತ್ಮಕ್ಕೆ ಶಾಂತಿ ಕೋರುವ ನಿಟ್ಟಿನಲ್ಲಿ ಎಡೆ ಇಟ್ಟು ಆಚರಿಸುವ ಮಾರ್ಲಮಿ ಹಬ್ಬ ಜಿಲ್ಲೆಯಲ್ಲಿ ವಿಶೇಷ ಮನ್ನಣೆ ಪಡೆದಿದೆ. ಹಬ್ಬದ ಹಿನ್ನೆಲೆಯಲ್ಲಿ ಶನಿವಾರ ಜಿಲ್ಲಾದ್ಯಂತ ಸಡಗರದ ವಾತಾವರಣ ಇತ್ತು. ಎಡೆ ಇಡುವ ಸಲುವಾಗಿ ತಿಂಡಿ– ತಿನಿಸುಗಳ ತಯಾರಿ ನಡೆಯುತ್ತಿತ್ತು. ಜಿಲ್ಲೆಯಲ್ಲಿ ಯಾವುದೇ ಹಬ್ಬದ ವೇಳೆ ಕುರಿ, ಮೇಕೆ ಮಾಂಸಕ್ಕೆ ಸಾಮಾನ್ಯವಾಗಿ ಹೆಚ್ಚಿನ ಬೇಡಿಕೆ ಇರುತ್ತದೆ. ಆದರೆ ಮಹಾಲಯ ಅಮವಾಸ್ಯೆ ಹಬ್ಬದಲ್ಲಿ ಅದು ದುಪ್ಪಟ್ಟಾಗಿ ಅದರಲ್ಲೂ ಗುಡ್ಡೆ ಮಾಂಸಕ್ಕೆ ಎಲ್ಲಿಲ್ಲದ ಬೇಡಿಕೆ ಇರುತ್ತದೆ. ಅಲ್ಲದೇ ಮಹಾಲಯ ಅಮವಾಸ್ಯೆ ಅಂಗವಾಗಿ ಮಂಡ್ಯ ನಗರದ ಕಾಳಿಕಾಂಬ, ಪಾಂಡವಪುರದ ಉಕ್ಕಡ ಮಾರಮ್ಮನ ದೇಗುಲ ಸೇರಿದಂತೆ ಅನೇಕ ದೇವಾಲಯಗಳಲ್ಲಿ ಭಕ್ತರ ದಂಡೇ ಜಮಾಯಿಸಿತ್ತು.

ಅಮಾವಾಸ್ಯೆ ಹಿನ್ನೆಲೆ: ಪೂರ್ವಜರಿಗೆ ಪಿಂಡ ಪ್ರದಾನ



ಶ್ರೀರಂಗಪಟ್ಟಣ, ಅ.15– ಮಹಾಲಯ ಅಮಾವಾಸ್ಯೆ ಅಂಗವಾಗಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಸಾವಿರಾರು ಮಂದಿ ತಮ್ಮ ಪೂರ್ವಿಕರಿಗೆ ಪಿಂಡ ಪ್ರದಾನ ಮಾಡಿ ಇಲ್ಲಿನ ಕಾವೇರಿ ನದಿಯಲ್ಲಿ ವಿಸರ್ಜಿಸಿದರು.

ಪಟ್ಟಣದ ಸೋಪಾನಕಟ್ಟೆ ಮತ್ತು ಗೋಸಾಯ್‌ಘಾಟ್, ಪಶ್ಚಿಮವಾಹಿನಿ, ಸಂಗಮದ ಕಾವೇರಿ ನದಿ ತೀರದಲ್ಲಿ ತಮ್ಮ ಪೂರ್ವಜರ ಆತ್ಮಕ್ಕೆ ಶಾಂತಿ ಕೋರಿ ಪಿಂಡ ಪ್ರದಾನ ಮಾಡಿ ತರ್ಪಣ ಬಿಡುವ ಜೊತೆಗೆ ವಿವಿಧ ಧಾರ್ಮಿಕ ಕಾರ್ಯ ನೆರವೇರಿಸಿದರು. ಬಹಳ ಹಿಂದಿನಿಂದಲೂ ಪಶ್ಚಿಮವಾಹಿನಿಯಲ್ಲಿ ಅಸ್ಥಿ ವಿಸರ್ಜನೆ, ಪಿಂಡ ತರ್ಪಣ ಬಿಡುವುದು ಸಂಪ್ರದಾಯ. ಮಹಾಲಯ ಅಮಾವಾಸ್ಯೆಗೂ ಒಂದು ವಾರಕ್ಕೂ ಮುನ್ನಾ ಆರಂಭವಾಗುವ ಪಿತೃ ಪಿಂಡ ಪ್ರದಾನ ಆಯುಧ ಪೂಜೆವರೆಗೆ ನಡೆಯುತ್ತದೆ.

ಸಾಲುಗಟ್ಟಿ ನಿಂತ ಭಕ್ತರು: ಮಹಾಲಯ ಅಮಾವಾಸ್ಯೆ ಅಂಗವಾಗಿ ಶ್ರೀರಂಗಪಟ್ಟಣಕ್ಕೆ ಆಗಮಿಸಿದ ಸಾವಿರಾರು ಮಂದಿ ಪಿಂಡ ಪ್ರದಾನ ಬಳಿಕ ಕಾವೇರಿ ನದಿಯಲ್ಲಿ ಸ್ನಾನ ಮಾಡಿ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ತೆರಳಿ ಸರತಿ ಸಾಲಿನಲ್ಲಿ ನಿಂತು ರಂಗನಾಥಸ್ವಾಮಿ ದರ್ಶನ ಪಡೆದು ಪುನೀತರಾದರು. ಈ ವೇಳೆ ದೇವಾಲಯದ ಆವರಣದಲ್ಲಿ ಭಕ್ತರು ಸಾಲುಗಟ್ಟಿ ನಿಂತ ದೃಶ್ಯ ಕಂಡು ಬಂತು.

ಟ್ರಾಫಿಕ್ ಜಾಮ್: ಮಹಾಲಯ ಅಮಾವಾಸ್ಯೆ ಅಂಗವಾಗಿ ದ್ವೀಪ ನಗರಿ ಶ್ರೀರಂಗಪಟ್ಟಣದಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಟ್ರಾಫಿಕ್ ಜಾಮ್ ಉಂಟಾಯಿತು. ಇದರಿಂದ ಸಾರ್ವಜನಿಕರು ಹೈರಾಣಾದರು.

ಅಕ್ಕಿಹೆಬ್ಬಾಳಲ್ಲಿ ನೂತನ ಸೇವಾಕೇಂದ್ರ ಉದ್ಘಾಟನೆ



ಕೆ.ಆರ್.ಪೇಟೆ, ಅ.15– ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸತ್ಯ, ಧರ್ಮದ ಮಾರ್ಗ ಅನುಸರಿಸುತ್ತಾ ಉತ್ತಮ ಸಮಾಜ ನಿರ್ಮಾಣಕ್ಕೆ ಸೇವಾ ಭಾವದಿಂದ ಆಧ್ಯಾತ್ಮಿಕ ಸಂದೇಶ ನೀಡುತ್ತಿದೆ. ಇಂತಹ ಸಂಸ್ಥೆಗಳಿಂದ ಯುದ್ಧಗಳಿಂದ ದೂರವಿದ್ದು ಶಾಂತಿ ಸಾಧಿಸಲು ಸಾಧ್ಯ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ಸರ್ಕಾರಿ ಪ್ರೌಢಶಾಲೆ ರಂಗಮಂದಿರದ ಆವರಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ನೂತನ ಸೇವಾ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮನುಷ್ಯರಲ್ಲಿ ಮೌಲ್ಯಗಳು ಮರೆಯಾದಂತೆ ಅನಾಥಾಶ್ರಮ, ವೃದ್ಧಾಶ್ರಮಗಳು ಹೆಚ್ಚಾಗುತ್ತಿವೆ. ಮೌಲ್ಯಗಳ ಉಳಿವಿಗಾಗಿ ಶಾಂತಿ ಸ್ಥಾಪಿಸಲು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಆಧ್ಯಾತ್ಮಿಕ ಜಾಗೃತಿ ಮೂಡಿಸುತ್ತಿದೆ. ಇವರ ಸೇವಾ ಕಾರ್ಯ ಇತರರಿಗೆ ಅನುಕರಣೀಯ. ವರ್ತಮಾನದಲ್ಲಿ ಸುಖ, ಶಾಂತಿ, ನೆಮ್ಮದಿ ಜೀವನ ನಡೆಸಲು, ಸನ್ಮಾರ್ಗದಲ್ಲಿ ನಡೆಯಲು ರಾಜಯೋಗ ಅಭ್ಯಾಸ ಮಾಡುವಂತೆ ಸಲಹೆ ನೀಡಿದರು. ಮೈಸೂರು ಉಪವಲಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾ ಕುಮಾರಿ ಲಕ್ಷ್ಮಿ ಮಾತನಾಡಿ, ಪ್ರತಿಯೊಬ್ಬರೂ ಸಮಾಜದಲ್ಲಿ ಉಲ್ಲಾಸದಿಂದ ಬದುಕಿ ಬಾಳಬೇಕು. ನಮ್ಮ ಮಾತುಗಳು ಇನ್ನೊಬ್ಬರನ್ನು ಸಂತೋಷದ ಕಡೆಗೆ ಕೊಂಡೊಯ್ಯಬೇಕು ಎಂದು ಆಶೀರ್ವಚನ ನೀಡಿದರು. ಸಮಾಜ ಸೇವಕ ಅಕ್ಕಿಹೆಬ್ಬಾಳು ರಘು ಮಾತನಾಡಿದರು.

ಈ ವೇಳೆ ಪ್ರಾಂಶುಪಾಲ ಬಾಲಕೃಷ್ಣ, ಶಾರದ, ಸೇವಾಕೇಂದ್ರ ಪ್ರತಿನಿಧಿ ರಾಮಚಂದ್ರು, ಮೋಹನ್, ರಾಧಮ್ಮ, ಬಿ.ಕೆ.ಪ್ರಾಣೇಶ್, ಬಿ.ಕೆ.ಶಿವಲೀಲಾ, ಸವಿತಾ, ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ವಾಸು, ಎ.ಜೆ.ಶಂಕರ್, ಶಾರದಾ, ರಂಗನಾಥನ್, ಜಯಂತಿ, ರಾಮಚಂದ್ರ ರಾವ್ ಸೇರಿದಂತೆ ಇತರರಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರದ ಬೃಂದಾವನದಲ್ಲಿ 2 ಕೋಟಿ 70 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಂಡಿರುವ ದೀಪಾಲಂಕಾರ ಮತ್ತು ಸಂಗೀತ ಕಾರಂಜಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಸಚಿವರ ಪತ್ನಿ ಧನಲಕ್ಷ್ಮಿ, ಜಿಲ್ಲಾಧಿಕಾರಿ ಕುಮಾರ್, ಜಿಲ್ಲಾ ಪೊಲೀಸ್ ಅಧೀಕ್ಷಕ ಯತೀಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಮೈಸೂರು ದಸರಾಗೆ ಚಾಲನೆ



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಾನುವಾರ ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ಅವರು ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಾನುವಾರ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಿದ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ಅವರಿಗೆ ಮೈಸೂರು ಪೇಟ ತೊಡಿಸಿ, ಸರಸ್ವತಿ ಪ್ರತಿಮೆಯನ್ನು ನೆನಪಿನ ಕಾಣಿಕೆಯಾಗಿ ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಒಂದನೇ ಪುಟದಿಂದ

ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಹಂಸಲೇಖ ಅವರು ಪತ್ನಿ ಲತಾ ಸಮೇತ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಉದ್ಘಾಟಿಸಿದರು. ಇದೇ ವೇಳೆ ಜ್ಯೋತಿ ಬೆಳಗಿಸಿದ ಹಂಸಲೇಖ ದಸರಾ ಮಹೋತ್ಸವ ನಿರ್ವಿಘ್ನವಾಗಿ ನೆರವೇರಲಿ ಎಂದು ದೇವರನ್ನು ಪ್ರಾರ್ಥಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಹಲವು ಗಣ್ಯರು ಈ ಸಂದರ್ಭ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿದರು.

ಇದಕ್ಕೂ ಮುನ್ನ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಹಂಸಲೇಖ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಇತರೆ ಗಣ್ಯರನ್ನು ಜಾನಪದ ಕಲಾ ತಂಡಗಳು ಹಾಗೂ ಮಂಗಳ ವಾದ್ಯದೊಂದಿಗೆ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ತರುವಾಯ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಜೊತೆಗೂಡಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿದ ಹಂಸಲೇಖ ಅವರು ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಗೆ ಅಗ್ರ ಪೂಜೆ ಸಲ್ಲಿಸಿದರು. ಗೋಲ್ಡನ್ ಬಾರ್ಡರ್ ಇರುವ ಶ್ವೇತ ವರ್ಣದ ಸೀರೆಯಲ್ಲಿ ವಜ್ರಾಭರಣಗಳಿಂದ ಕಂಗೊಳಿಸುತ್ತಿದ್ದ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದ ಗಣ್ಯರು ಧನ್ಯತಾ ಭಾವ ಮೆರೆದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ದಸರಾ ಉದ್ಘಾಟಕರಾದ ಹಂಸಲೇಖ ಅವರಿಗೆ ಝರಿ ಮೈಸೂರು ಪೇಟ ತೊಡಿಸಿ, ಸರಸ್ವತಿಯ ವಿಗ್ರಹ ನೀಡಿ ಸಿದ್ದರಾಮಯ್ಯ ಆತ್ಮೀಯವಾಗಿ ಸನ್ಮಾನಿಸಿದರು. ಪೂಜ್ಯ ಕನ್ನಡಿಗರಿಗೆ, ಪೂಜ್ಯ ಕನ್ನಡಕ್ಕೆ, ದೇವಾಲಯಕ್ಕೆ, ಪ್ರೇಮಾಲಯಕ್ಕೆ ನನ್ನ ಸಾವಿರ ಶರಣು ಎಂದು ಸಿನಿಮಾ ಹಾಗೂ ಸಾಹಿತ್ಯ ಶೈಲಿಯಲ್ಲಿ ಭಾಷಣ ಆರಂಭಿಸಿದ ಹಂಸಲೇಖ ಮೈಸೂರಿನ ಸಾಂಸ್ಕೃತಿಕ ಪರಂಪರೆಯನ್ನು ವಿವರಿಸುತ್ತಾ ಕನ್ನಡ ಅಸ್ಮಿತೆಯ ಉಳಿವಿಗಾಗಿ ಕೆಲವೊಂದು ಮಹತ್ವಪೂರ್ಣ ಸಲಹೆಗಳನ್ನು ನೀಡಿದರು.

ಕನ್ನಡದ ಭಾಷೆಗೆ ಮಿತಿ ಇದೆ. ಆದರೆ ಕನ್ನಡದ ಭಾವಕ್ಕೆ ಮಿತಿ ಇಲ್ಲ. ನಮಗೆ ದೆಹಲಿ ಬೇಕು, ಆದರೆ ದೆಹಲಿಯವರಿಗೆ ನಾವು ಬೇಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಹಂಸಲೇಖ, ಪ್ರಪಂಚದ ವೇದಿಕೆಯಲ್ಲಿ ಕನ್ನಡ ಪ್ರತಿಷ್ಠಾಪಿಸಿದಾಗ ಮಾತ್ರ ಕನ್ನಡ ಭಾಷೆಯನ್ನು ಜಗತ್ತಿನಲ್ಲಿ ಯಾರೂ ಮರೆಯಲು ಸಾಧ್ಯವಾಗುವುದಿಲ್ಲ. ಈ ಮೂಲಕ ಕನ್ನಡದ ಶಾಂತಿ ಸಮೃದ್ಧಿಯನ್ನು ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕದಲ್ಲಿ ವಾಸ ಮಾಡುವ ಪ್ರತಿಯೊಬ್ಬರಿಗೂ ಭಾಷೆ ಗೊತ್ತಿರಬೇಕು. ಆದರೆ ಬಹಳಷ್ಟು ಜನರಿಗೆ ಕನ್ನಡ ಗೊತ್ತಿಲ್ಲ. ಈ ಹಿನ್ನೆಲೆ ಕನ್ನಡ ಭಾಷೆ ತಿಳಿಯದವರ ಬಗ್ಗೆ ವೈಜ್ಞಾನಿಕ ಸಮೀಕ್ಷೆಯಾಗಬೇಕು. ಹೀಗೆ ಸಂಪೂರ್ಣ ಡೇಟಾ ಸಂಗ್ರಹಿಸಿ ಅದನ್ನು ದಾಖಲೆಯಾಗಿಡಬೇಕು ಎಂದ ಹೇಳಿದರು.

ತರುವಾಯ ಸಮೀಕ್ಷೆಯ ವರದಿ ಆಧರಿಸಿ ಕನ್ನಡ ಭಾಷೆ ಬಗ್ಗೆ ಅರಿವಿಲ್ಲದವರಿಗೆ 30 ದಿನದೊಳಗೆ ಕನ್ನಡ ಕಲಿಸಬೇಕು. ಹೀಗೆ ಕನ್ನಡ ಕಲಿತವರಿಗೆ ಜಮೀನು ಆರ್‌ಟಿಸಿ, ಬಿಪಿಎಲ್ ಕಾರ್ಡ್ ಮಾದರಿಯಲ್ಲಿ ಕನ್ನಡದ ಪಟ್ಟ ಕಾರ್ಡ್ ನೀಡಬೇಕು. ಸರ್ಕಾರದ ಸವಲತ್ತು ಪಡೆಯಲು ಈ ಕಾರ್ಡ್ ಕಡ್ಡಾಯವಾಗಿರಬೇಕು ಎಂದು ಹಂಸಲೇಖ ಅವರು ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಈ ಸಲಹೆ ನೀಡಿದರು.

ಕಾರ್ಪೋರೇಟ್ ಕಂಪನಿಗಳ ಕನ್ನಡಿಗರ ತಂಡವೊಂದು ನನಗೆ ಈ ಸಲಹೆ ನೀಡಿ ಇದನ್ನು ಅನುಷ್ಠಾನ ಮಾಡಲು ಸರ್ಕಾರದ ಮೇಲೆ ಒತ್ತಡ ಹೇರುವಂತೆ ಸಲಹೆ ನೀಡಿದೆ. ಈ ಕಾರ್ಯ ಕೈಗೆತ್ತಿಕೊಂಡರೆ ಕಾರ್ಪೋರೇಟ್ ಕಂಪನಿಯ ಕನ್ನಡಿಗರ ತಂಡ ಕೂಡ ನಮಗೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ಹಂಸಲೇಖ ತಿಳಿಸಿದರು.

ಈ ಮೂಲಕ ಕನ್ನಡ ಸಂಘಟನೆಗಳು ಕನ್ನಡ ಉಳಿಸಿ ಬೆಳೆಸುವ ಕಾರ್ಯ ಮಾಡಬೇಕು. ಕುವೆಂಪು ಅವರು ಕನ್ನಡವನ್ನು ಉತ್ತುಂಗದ ಶಿಖರಕ್ಕೆ ಏರಿಸಿದಂತೆ ಈ ಕಾರ್ಯಕ್ಕೆ ನಾನು ಕೈಜೋಡಿಸುತ್ತೇನೆ ಎಂಬ ಹಂಸಲೇಖ ಭರವಸೆ ನೀಡಿದರು.

ಪ್ರತಿಯೊಬ್ಬ ತಾಯಿ ಮಗುವಿಗೆ ಕನ್ನಡ ಹೇಳಿಕೊಡಬೇಕು. ಜನಪದ ಬೆಳೆಸಿ, ಕಲಿಸಬೇಕು. ಈ ಮೂಲಕ ಪ್ರತಿಯೊಬ್ಬ ಕನ್ನಡಿಗ ತಲೆ ಎತ್ತಿ ಬದುಕುವ ನೈತಿಕ ಶಕ್ತಿ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು. ದಸರಾ ಉದ್ಘಾಟನೆ ಮಾಡಲು ಅವಕಾಶ ದೊರೆತ ಈ ಸಂದರ್ಭದಲ್ಲಿ ಯಾರನ್ನು ನಾನು ನೆನೆಯಲಿ ಎಂದು ಮನತುಂಬಿದ ಮಾತುಗಳನ್ನಾಡಿದ ಹಂಸಲೇಖ, ಕನ್ನಡದ ದೀಪ, ಕನ್ನಡದ ಸಮೃದ್ಧಿ, ಕನ್ನಡದ ಅಭಿವೃದ್ಧಿ, ಶಾಂತಿ, ಸಮೃದ್ಧಿಯ ಈ ನನ್ನ ಮಾತಿನ ಪರಿವಿಧಿ ಎಂದು ಹಂಸಲೇಖ ಹೇಳಿದರು.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಾನುವಾರ ನಡೆದ ದಸರಾ ಉದ್ಘಾಟನಾ ಸಮಾರಂಭದಲ್ಲಿ ದಸರಾ ಉದ್ಘಾಟಕರಾದ ನಾದಬ್ರಹ್ಮ ಹಂಸಲೇಖಾ ಅವರ ಕುಟುಂಬಸ್ಥರು ಭಾಗಿಯಾಗಿದ್ದರು.

ಕರ್ನಾಟಕದ ಏಕೀಕರಣಕ್ಕೆ ಐದಶವಾಗಿದೆ. ಐದಶವೆಂದರೆ ಐವತ್ತು ವರ್ಷ ತುಂಬಿದೆ ಎಂದರ್ಥ ಎಂದು ವಿವರಿಸಿದ ಹಂಸಲೇಖ, ಕರ್ನಾಟಕಕ್ಕೆ ಐವತ್ತು ವರ್ಷ ತುಂಬಿರುವ ಕಾರಣ ಕರ್ನಾಟಕ ಐದಶ ಅಂತ ಕರೆಯೋಣ ಸಲಹೆ ನೀಡಿದರು. ನನ್ನ ಕಲಾ ಕಾಯಕಕ್ಕೂ 50 ವರ್ಷ ತುಂಬಿದೆ. ಐದಶದಲ್ಲಿ ದೊರೆತಿರುವ ಈ ಅವಕಾಶ ನನಗೆ ಬಹಳ ಬೆಲೆ ಬಾಳುವಂತದ್ದಾಗಿದೆ. ಚಾಮುಂಡಿಬೆಟ್ಟಕ್ಕೆ ಸಾವಿರ ಮೆಟ್ಟಿಲು ಇರುವಂತೆ ಈ ಅವಕಾಶಕ್ಕಾಗಿ ಸಾವಿರ ಮೆಟ್ಟಿಲು ಇದೆ. ನಿರಾಯಾಸವಾಗಿ ಈ ಅವಕಾಶ ನನಗೆ ಸಿಕ್ಕಿಲ್ಲ. ಕಷ್ಟಪಟ್ಟು ಸಾವಿರ ಮೆಟ್ಟಿಲು ಹತ್ತಿ ಈ ಸ್ಥಾನದಲ್ಲಿ ಬಂದು ನಿಂತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಈ ಅವಕಾಶಕ್ಕಾಗಿ ನಾನು ಯಾರನ್ನು ನೆನೆಯಲಿ ಎಂದು ಮತ್ತೆ ಪುನರುಚ್ಚರಿಸಿದ ಹಂಸಲೇಖ, ಅಪ್ಪ ಗೋವಿಂದರಾಜ ಮಾನ್, ಅಮ್ಮ ರಾಜಮ್ಮ, ಗುರು ನೀಲಕಂಠ, ನಾದ ನಾಟಕರಂಗ, ಸರ್ಕಾರ, ಸಂವಿಧಾನ, ಸಂವಿಧಾನದ ಗುಡ್ ಶಪರ್ಡ್ ಸಿದ್ದರಾಮಯ್ಯ, ಪ್ರಬಲ ಶಕ್ತಿ ಸಂಘಟಕ ಡಿಸಿಎಂ ಡಿ.ಕೆ.ಶಿವಕುಮಾರ್, ನನ್ನ ಹೆಸರು ಸೂಚಿಸಿದ ಡಾ.ಮಹದೇವಪ್ಪ, ನನ್ನ ಹೆಂಡತಿ,ಮಕ್ಕಳು, ಅಭಿಮಾನಿಗಳು, ಭೀಮ ಪರಿವಾರ, ಭೂಮಿ ತಾಯಿ ಸೇರಿದಂತೆ ಯಾರು ಯಾರನ್ನು ನಾನು ನೆನೆಯಲಿ. ಭೂಮಿ ತಾಯಿಯನ್ನು ನೆನೆದರೆ ಎಲ್ಲರನ್ನು ನೆನೆದಂತೆ ಎಂಬ ದೃಷ್ಟಿಯಿಂದ ಈ ಪೂಜ್ಯ ಸನ್ನಿಧಿಯಲ್ಲಿ ನಿಂತು ಭೂಮಿ ತಾಯಿಯನ್ನು ಒಂದು ಘಳಿಗೆ ನೆನೆಯುತ್ತೇನೆ. ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ ಈ ರೀತಿ ಧನ್ಯವಾದ ಹೇಳುವುದು ನಮ್ಮ ಸಿನಿಮಾದವರ ಆಕರ್ಷಣೀಯ ಮಾತು ಎಂದು ಹಂಸಲೇಖ ಸಾಹಿತ್ಯ ಶೈಲಿಯಲ್ಲಿ ವಿವರಿಸಿದರು.

ನಾನು ಈ ಕನ್ನಡದ ದೀಪ ಬೆಳಗಿಸಿದ್ದೇನಾದರೂ ವಾಸ್ತವವಾಗಿ ಬೆಳಗಿಸಿರುವುದು ನಾಡಿನ ಜನರ ಚೈತನ್ಯದ ಕೈ. ಈ ಹಿನ್ನೆಲೆ ಸಾಮಾನ್ಯರ ಕೈಯಿಂದ ದಸರಾ ಉದ್ಘಾಟನೆ ಮಾಡಲು ಸಿದ್ದರಾಮಯ್ಯ ತೀರ್ಮಾನ ಮಾಡಿದ್ದರು ಎಂದು ಡಿ.ಕೆ.ಶಿವಕುಮಾರ್ ನನಗೆ ತಿಳಿಸಿದ್ದರು ಎಂದರು.

ದಸರಾ ಎಂಬುವುದು ಜೀವಂತ ಮಹಾಕಾವ್ಯ. ಈ ಕಥೆ ವೀರರ ಕಥೆ. ಇದನ್ನು ದಕ್ಷಿಣ ಭಾರತದಲ್ಲಿ ಜೀವಂತವಾಗಿಸಬೇಕು. ವಿಜಯನಗರ ಸಾಮ್ರಾಜ್ಯದಲ್ಲಿ ರಾಜರು 350 ವರ್ಷ ಚಿನ್ನದ ಮಳೆಗೈಯ್ದರು. ಈ ಮೂಲಕ ವಿಜಯನಗರ ಸಾಮ್ರಾಜ್ಯ ಈ ದಸರಾ ಆಚರಣೆಗೆ ಕಥಾ ವಸ್ತು. ಈ ಜೀವಂತ ದಸರಾ ಮುಂದೆಯೂ ಮಹಾ ಕಾವ್ಯವಾಗಿ ರೂಪುಗೊಳ್ಳಲಿದೆ ಎಂದು ನಾದಬ್ರಹ್ಮ ಹಂಸಲೇಖ ಹಾರೈಸಿದರು.

ಈ ವೇಳೆ ವಿಶೇಷ ಚೇತನ ವಿದ್ಯಾರ್ಥಿನಿ ಬಬಿತಾ ಎಂಬಾಕೆ ತಾನು ಸಿದ್ಧಪಡಿಸಿರುವ ಕನ್ನಡ ನಿಘಂಟು ಪುಸ್ತಕವನ್ನು ದಸರಾ ಉದ್ಘಾಟನೆ ಮಾಡಿದ ಹಂಸಲೇಖ ಹಾಗೂ ಸಿದ್ದರಾಮಯ್ಯ ಅವರಿಗೆ ನೀಡಿದರು.

ಹಂಸಲೇಖ ಅವರೇ ರಚಿಸಿ, ಸಂಗೀತ ಸಂಯೋಜಿಸಿರುವ ಸಂವಿಧಾನ ಪೀಠಿಕೆಯ ಹಾಡನ್ನು ಈ ವೇಳೆ ಪ್ರಸ್ತುತಪಡಿಸಲಾಯಿತು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಇಂಧನ ಸಚಿವ ಕೆ.ಜೆ.ಜಾರ್ಜ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ಎ.ಆರ್.ಕೃಷ್ಣಮೂರ್ತಿ, ಜಿ.ಡಿ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ದಸರಾ ಉದ್ಘಾಟಕರಾದ ಹಂಸಲೇಖ ಅವರ ಕುಟುಂಬಸ್ಥರು ಕೂಡ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟಕ್ಕೆ ಶಾಶ್ವತ ದೀಪಾಲಂಕಾರ ಮಾಡಿ



ಚಾಮುಂಡಿಬೆಟ್ಟದ ಪಕ್ಕದಲ್ಲೇ ಮಂಡಕಳ್ಳಿ ವಿಮಾನ ನಿಲ್ದಾಣವಿದೆ. ವಿಮಾನ ನಿಲ್ದಾಣಕ್ಕೆ ಬರುವ ಪ್ರವಾಸಿಗರನ್ನು ಚಾಮುಂಡಿಬೆಟ್ಟ ಆಕರ್ಷಿಸುತ್ತದೆ. ಚಾಮುಂಡಿಬೆಟ್ಟಕ್ಕೆ ವರ್ಣರಂಜಿತ ದೀಪಾಲಂಕಾರ ಮಾಡಿದರೆ ಮತ್ತಷ್ಟು ಆಕರ್ಷಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಆಕರ್ಷಣೀಯ ದೀಪಾಲಂಕಾರದಿಂದ ಚಾಮುಂಡಿಬೆಟ್ಟ ಪ್ರವಾಸಿಗರ ಗಮನ ಸೆಳೆಯುತ್ತದೆ. ಈ ನಿಟ್ಟಿನಲ್ಲಿ ಚಾಮುಂಡಿಬೆಟ್ಟಕ್ಕೆ ಶಾಶ್ವತ ದೀಪಾಲಂಕಾರ ಮಾಡಬೇಕು ಎಂದು ಆಗ್ರಹಿಸಿದರು. ಜೊತೆಗೆ ಚಾಮುಂಡಿಬೆಟ್ಟದಲ್ಲಿ ಪ್ರಖರ ಬೆಳಕು ಇದ್ದರೆ ವಿಮಾನಗಳ ಅವಘಡಗಳು ಕೂಡ ಸಂಭವಿಸುವುದಿಲ್ಲ ಎಂದರು. ನಮ್ಮ ಈ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಹಂಸಲೇಖ ಅವರು ವೇದಿಕೆಯಲ್ಲಿದ್ದ ಸಿದ್ದರಾಮಯ್ಯಗೆ ಮನವಿ ಮಾಡಿದರು.

ಒಂದನೇ ಪುಟದಿಂದ

ಸಮಾನವಾಗಿ ಹಂಚಿಕೆಯಾಗಬೇಕು



ಜಾರಿಗೊಳಿಸಿದ್ದೇವೆ. ಉಳಿದ ವಿದ್ಯಾನಿಧಿ ಗ್ಯಾರಂಟಿಯನ್ನು 2024ರ ಜನವರಿ ಮಾಹೆಯಲ್ಲಿ ಅನುಷ್ಠಾನಗೊಳಿಸುತ್ತೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ದುರಾದೃಷ್ಟವಶಾತ್ ಈ ಬಾರಿ ಮುಂಗಾರು ಮಳೆ ಕೈಕೊಟ್ಟಿದೆ. ಆದರೂ ದಸರಾ ಮಹೋತ್ಸವಕ್ಕೆ ಯಾವುದೇ ಕೊರತೆಯಾಗದಂತೆ ನೋಡಿಕೊಂಡಿದ್ದೇವೆ. ಹಿಂಗಾರು ಮಳೆಯಾದರೂ ಆಗಿ ರೈತರ ಬೆಳೆಗೆ ಅನುಕೂಲವಾಗಲಿ, ಈ ನಾಡಿನ ಜನರು ಸುಭಿಕ್ಷವಾಗಲಿ ಎಂದು ನಾವೆಲ್ಲರೂ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯನ್ನು ಪ್ರಾರ್ಥಿಸಿಕೊಂಡಿದ್ದೇವೆ ಎಂದು ಸಿದ್ದರಾಮಯ್ಯ ಇದೇ ಸಂದರ್ಭ ನುಡಿದರು.

ಮಳೆಯಾಗದ ಕಾರಣ 42 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ. ಅದರಿಂದ 30 ಕೋಟಿ ರೂ. ನಷ್ಟವಾಗಿದೆ. ಅದಕ್ಕಾಗಿ ನಾವು 4,860 ಕೋಟಿ ರೂ. ಅನುದಾನವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಿದ್ದೇವೆ. ರಾಜ್ಯದಲ್ಲಿ 216 ತಾಲೂಕುಗಳು ಬರ ಪೀಡಿತವಾಗಿವೆ. ಜನ-ಜಾನುವಾರುಗಳಿಗೆ ಕುಡಿಯುವ ನೀರು, ಮೇವು, ಬೆಳೆ ನಷ್ಟ ಪರಿಹಾರಕ್ಕಾಗಿ ಕೇಂದ್ರಕ್ಕೆ ಇನ್‌ಪುಟ್ ಸಬ್ಸಿಡಿ ಅನುದಾನಕ್ಕೆ ಮನವಿ ಮಾಡಿದ್ದೇವೆ. ಹೊರಗೆ ನೋಡಲು ಭೂಮಿ ಹಸಿರಾಗೇ ಕಾಣುತ್ತಿದೆ. ಆದರೆ ನೀರಿಲ್ಲದೇ ಬೆಳೆ ಒಣಗುತ್ತಿವೆಯಾದ್ದರಿಂದ ಬರ ಬಂದಿದೆ ಎಂದ ಮುಖ್ಯಮಂತ್ರಿಗಳು ಹಿಂಗಾರು ಮಳೆಯಾದರೂ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡಿದ್ದೇವೆ ಎಂದರು.

ಮೈಸೂರು ದಸರಾ ಮಹೋತ್ಸವಕ್ಕೆ ದೊಡ್ಡ ಇತಿಹಾಸವಿದೆ. ಉನ್ನತ ಮಟ್ಟದ ಸಮಿತಿ ತೀರ್ಮಾನದಂತೆ ನಾದಬ್ರಹ್ಮ ಹಂಸಲೇಖ ಅವರು ನಮ್ಮ ಮನವಿಗೆ ಒಪ್ಪಿ ಕುಟುಂಬ ಸಮೇತ ಬಂದು ದಸರಾ ಉತ್ಸವವನ್ನು ಉದ್ಘಾಟಿಸಿದ್ದಾರೆ. ನವರಾತ್ರಿ ಉತ್ಸವ ಮುಗಿದು ಹತ್ತನೇ ದಿನ ವಿಜಯದಶಮಿ ಜಂಬೂ ಸವಾರಿಯೊಂದಿಗೆ ಅಂತ್ಯವಾಗಲಿದೆ. ವಿಜಯನಗರ ಅರಸರ ಕಾಲದಲ್ಲಿ ದಸರಾ ಆರಂಭವಾಯಿತು. ಈಗಲೂ ಅ ಸಮೃದ್ಧ ಸಾಮ್ರಾಜ್ಯದ ಅವಶೇಷಗಳು ಹಂಪಿಯಲ್ಲಿ ಕಾಣಸುತ್ತವೆ ಎಂದರು.

ಅಲ್ಲಿನ ವಿರೂಪಾಕ್ಷ ದೇವಾಲಯದ ಮುಂದಿನ ರಸ್ತೆಗಳಲ್ಲಿ ವಜ್ರ-ವೈಢೂರ್ಯ, ಮುತ್ತು-ರತ್ನಗಳನ್ನು ಬಳ್ಳಗಳಲ್ಲಿ ಅಳೆದು ಮಾರಾಟ ಮಾಡಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಮೈಸೂರು ಅರಸರು ಶ್ರೀರಂಗಪಟ್ಟಣದಲ್ಲಿ ಮೈಸೂರು ಅರಸರು ದಸರಾ ಆರಂಭಿಸಿ ನಂತರ ಮೈಸೂರಿಗೆ ಸ್ಥಳಾಂತರವಾಯಿತು ಎಂದರು.

ಅಂದಿನ ಕಾಲದಲ್ಲಿ ರಾಜರು ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗುತ್ತಿದ್ದರು. ನಾನು ಐದಾರು ವರ್ಷದವನಿದ್ದಾಗ ನನ್ನ ತಂದೆ ಹೆಗಲ ಮೇಲೆ ಕೂರಿಸಿಕೊಂಡು ಮೊದಲ ಬಾರಿ ದಸರಾ ನೋಡಿದ್ದೆ. ಮಹಾರಾಜರಿಗೆ ಕೈ ಮುಗಿಯುವಂತೆ ಹೇಳುತ್ತಿದ್ದರಿಂದ ಅವರು ಕಾಣಿಸದಿದ್ದರೂ ಕೈ ಮುಗಿಯುತ್ತಿದ್ದೆ ಎಂದು ಸಿದ್ದರಾಮಯ್ಯ ಹಿಂದಿನ ದಸರಾ ವೈಭವವನ್ನು ಸ್ಮರಿಸಿದರು. ಜನರಿಂದ ಆಯ್ಕೆಯಾದ ಸರ್ಕಾರ ಆಡಳಿತ ನಡೆಸಲಾರಂಭವಾದ ಬಳಿಕ ಕೃಷಿ, ವಿದ್ಯುತ್, ಕೈಗಾರಿಕೆ, ಸಾಮಾಜಿಕ ಕ್ಷೇತ್ರಗಳ ಸಾಧನೆಯನ್ನು ಬಿಂಬಿಸುವಂತೆ ದಸರಾ ಹಬ್ಬವನ್ನು ವೈಭವದಿಂದ ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಕರ್ನಾಟಕದ ಜನರು ಸುಸಂಸ್ಕೃತರು. ನಮ್ಮಲ್ಲಿ ಪ್ರೀತಿ-ವಿಶ್ವಾಸ, ಮಾನವೀಯತೆಯನ್ನು ಮೈಗೂಡಿಸಿಕೊಂಡಿದ್ದೇವೆ. ಕನ್ನಡ ನಾಡಿನ ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಜಗತ್ತಿಗೆ ತಿಳಿಸುವ ದಸರಾ ಮಹೋತ್ಸವ ವಿಶ್ವ ಪ್ರಸಿದ್ಧಿಯಾಗಿದೆ ಎಂದ ಸಿದ್ದರಾಮಯ್ಯ, ನಾಡಿನ ಸಮಸ್ತ ಜನರಿಗೆ ಒಳಿತಾಗಲಿ ಎಂದು ದಸರಾ ಶುಭಾಶಯ ಕೋರಿದರು.

ಖಾಸಗಿ ದರ್ಬಾರ್ ಆರಂಭ



ದರ್ಬಾರ್ ಹಾಲ್‌ಗೆ ದೀವಟಿಗೆ ದಾರರು, ಹೊಗಳು ಭಟರು ಬಿರುದು ಬಾವಲಿ ಯೊಂದಿಗೆ ಯದುವೀರ ಒಡೆಯರ್ ಅವರನ್ನು ಕರೆತರುತ್ತಿರುವುದು.

ನಂತರ ಅರಮನೆಯ ಚಾಮುಂಡಿತೊಟ್ಟಿಯಲ್ಲಿ ಬೆಳಗ್ಗೆ 7.05ರಿಂದ 7.45ರೊಳಗೆ ಸಲ್ಲುವ ತುಲಾ ಲಗ್ನದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕಂಕಣ ಧಾರಣೆ ಮಾಡಲಾಯಿತು. ನಂತರ ವಾಣಿ ವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ಚಾಮುಂಡಿ ತೊಟ್ಟಿಯಿಂದ ಕಂಕಣ ತಂದು ಧಾರಣೆ ಮಾಡಲಾಯಿತು. ಕೆಲ ಪೂಜಾ ಕಾರ್ಯಗಳು ಜರುಗಿದ ನಂತರ ಮಂಗಳವಾದ್ಯದೊಂದಿಗೆ ಅರಮನೆಯ ಕೆಲ ಸಿಬ್ಬಂದಿ ಪಟ್ಟದ ಆನೆ ಧನಂಜಯ, ಸಾಲಾನೆ ಭೀಮ, ಅರಮನೆ ಆನೆ ಪ್ರೀತಿ, ಚಂಚಲ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆಯೊಂದಿಗೆ ಅರಮನೆಯ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ಹಾಗೂ ಶ್ರೀ ಕೋಡಿ ಕಾಲಭೈರವ ಸ್ವಾಮಿ ದೇವಾಲಯದ ಮುಂದೆ ಇರುವ ಬಾವಿ ಬಳಿ ತೆರಳಿ, ಪಟ್ಟದ ಆನೆ, ಹಸು, ಕುದುರೆ, ಒಂಟೆಗೆ ಪೂಜೆ ಸಲ್ಲಿಸಿ ಕಳಸದೊಂದಿಗೆ ಅರಮನೆ ಆನೆ ಬಾಗಿಲಿನ ಮೂಲಕ ಸವಾರಿ ತೊಟ್ಟಿಗೆ ಕರೆತರಲಾಯಿತು. ನಂತರ ಕಳಸ ಸೇರಿದಂತೆ ದೇವರನ್ನು ಅರಮನೆಯ ಒಳಗೆ ಕೊಂಡೊಯ್ದರು. ದರ್ಬಾರ್ ಹಾಲ್‌ನಲ್ಲಿ ನವಗ್ರಹ ಪೂಜೆ ನೆರವೇರಿದ ಬಳಿಕ ಸವಾರಿ ತೊಟ್ಟಿಯಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದರ್ಬಾರ್ ಹಾಲ್‌ಗೆ ಕಟ್ಟಿಗೆಯವರು, ಜೋಪಾದರು, ದೀವಟಿಗೆಯವರು ಸಕಲ ಬಿರುದು ಬಾವಲಿಯೊಂದಿಗೆ ಬಹುಪರಾಕ್ ಹಾಕಿ ದರ್ಬಾರ್ ಹಾಲ್‌ಗೆ ಕರೆತಂದರು. ನಂತರ ಕಳಸ ಪೂಜೆ ಸೇರಿದಂತೆ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಂಡರು. ಬೆಳಗ್ಗೆ 11.30ರಿಂದ 11.50ರೊಳಗೆ ಧನುರ್ ಲಗ್ನದಲ್ಲಿ ಸಿಂಹಾಸನಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿದರು. ಸಿಂಹಾಸನದ ಸಿಂಹಕ್ಕೆ ಹೂವಿನ ಹಾರ ಹಾಕಿ ಪೂಜೆ ಸಲ್ಲಿಸಿ, ರತ್ನಖಚಿತ ಸಿಂಹಾಸನವೇರಿ ವಿರಾಜಮಾನರಾಗಿ ದರ್ಬಾರ್ ನಡೆಸಿದರು.



ತ್ರಿಷಿಕಾ ಕುಮಾರಿ ಅವರು ಯದುವೀರ ಅವರಿಗೆ ಪಾದಪೂಜೆ ಮಾಡುತ್ತಿರುವುದು.

ಸಿಂಹಾಸನವೇರಿದ ನಂತರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಮೇಲುಕೋಟೆಯ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯ, ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯ, ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳು ಸೇರಿದಂತೆ 23 ದೇವಾಲಯಗಳಿಂದ ತಂದಿದ್ದ ಪ್ರಸಾದವನ್ನು ನೀಡಿ, ತೀರ್ಥ ಪ್ರೋಕ್ಷಣೆ ಮಾಡಿ ಶುಭ ಕೋರಲಾಯಿತು. ಈ ವೇಳೆ ಎಲ್ಲಾ ದೇವಾಲಯಗಳ ಅರ್ಚಕರಿಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭಕ್ಷೀಸ್ ನೀಡಿದರು.

ಎಲ್ಲಾ ದೇವಾಲಯಗಳಿಂದ ಆಗಮಿಸಿದ್ದ ಅರ್ಚಕರಿಂದ ಪ್ರಸಾದ ವಿನಿಯೋಗವಾದ ಬಳಿಕ ಸಿಂಹಾಸನದ ಮುಂದೆ ಪರದೆಯನ್ನು ಬಿಟ್ಟು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ದೃಷ್ಟಿ ತೆಗೆಯಲಾಯಿತು. ನಂತರ ಪೊಲೀಸ್ ಬ್ಯಾಂಡ್ ತಂಡದ ಸದಸ್ಯರು ನುಡಿಸಿದ ಚಾಮರಾಜ ಒಡೆಯರ್ ವಿರಚಿತ ಯದುವಂಶದ ರಾಷ್ಟ್ರಗೀತೆಯಾದ 'ಕಾಯೋ ಶ್ರೀ ಗೌರಿ' ಗೀತೆಯನ್ನು ನುಡಿಸಿದ ವೇಳೆ ಸಿಂಹಾಸನದಲ್ಲಿ ಆಸೀನರಾಗಿದ್ದ ಯದುವೀರ ಒಡೆಯರ್ ಎದ್ದು ನಿಂತು ಸೆಲ್ಯೂಟ್ ಹೊಡೆದು ಗಮನ ಸೆಳೆದರು.

ದರ್ಬಾರ್ ಪೂರ್ಣಗೊಳ್ಳುತ್ತಿದ್ದಂತೆ ಹೊಗಳು ಭಟ್ಟರು ಹಾಗೂ ದೀವಟಿಗೆಕಾರರಿಂದ ಗೌರವ ಹಾಗೂ ಬಹುಪರಾಕ್ ಪಡೆದು ಸವಾರಿ ತೊಟ್ಟಿಯತ್ತ ತೆರಳಿದರು. ಅಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರಿಗೆ ತಲೆಬಾಗಿ ನಮಿಸಿದರು. ಬಳಿಕ ಆಸೀನರಾದ ಯದುವೀರ್ ಅವರಿಗೆ ತ್ರಿಷಿಕಾ ಕುಮಾರಿ ಒಡೆಯರ್ ಅವರು ಪಾದ ಪೂಜೆ ಮಾಡಿದರು. ಈ ವೇಳೆ ಆದ್ಯವೀರ ನರಸಿಂಹರಾಜ ಒಡೆಯರ್ ಕೂಡ ತಂದೆಯ ಪಾದಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಬಿಗಿ ಬಂದೋಬಸ್ತ್: ಖಾಸಗಿ ದರ್ಬಾರ್ ವೀಕ್ಷಣೆಗೆ ರಾಜವಂಶಸ್ಥರನ್ನು ಹೊರತುಪಡಿಸಿ ಬೇರೆ ಯಾರಿಗೂ ಅವಕಾಶ ನೀಡಿರಲಿಲ್ಲ. ಅರಮನೆಯ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ದರ್ಬಾರ್ ಹಿನ್ನೆಲೆಯಲ್ಲಿ ಬೆಳಗ್ಗಿನಿಂದ ಸಂಜೆವರೆಗೂ ಅರಮನೆ ವೀಕ್ಷಣೆಗೆ ನಿರ್ಬಂಧ ಹೇರಲಾಗಿತ್ತು. ನವರಾತ್ರಿಯ ಮೊದಲ ದಿನವಾದ ಇಂದು ಬೆಳಗ್ಗೆ ಮತ್ತು ಸಂಜೆ ಎರಡು ಬಾರಿ ಖಾಸಗಿ ದರ್ಬಾರ್ ನಡೆಯಲಿದೆ. ಉಳಿದಂತೆ ಇತರೆ ದಿನ ಸಂಜೆ ವೇಳೆ ಮಾತ್ರ ದರ್ಬಾರ್ ನಡೆಯಲಿದೆ.

ದಸರಾ ಆಹಾರ ಮೇಳಕ್ಕೆ ಚಾಲನೆ

ಆಹಾರ ವ್ಯರ್ಥವಾಗುವುದನ್ನು ತಡೆಯಲು ನಿಯಮಾವಳಿ

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ





ಮೈಸೂರು, ಅ.15(ಜಿಎ)-ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಆಹಾರ ಪ್ರಿಯರ ಪ್ರಮುಖ ಆಕರ್ಷಣೆಯಾದ ಆಹಾರ ಮೇಳಕ್ಕೆ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಚಾಲನೆ ನೀಡಿದರು.

ನಾಡಹಬ್ಬ ಮೈಸೂರು ದಸರಾ ಅಂಗವಾಗಿ ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಯೋಜಿಸಲಾಗಿದ್ದ ದಸರಾ ಆಹಾರ ಮೇಳ ಕಾರ್ಯಕ್ರಮವನ್ನು ಹಾಲು ಉಕ್ಕಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಮೂರನೇ ಒಂದು ಭಾಗದಷ್ಟು ಆಹಾರ ವ್ಯರ್ಥವಾಗುತ್ತಿದೆ. ತಿನ್ನುವ ಹಕ್ಕು ನಮಗಿದೆ ಆದರೆ ಬಿಸಾಡುವ ಹಕ್ಕು ನಮಗಿಲ್ಲ. ಆಹಾರವನ್ನು ವ್ಯರ್ಥ ಮಾಡಬೇಡಿ ಎಂದು ತಿಳಿಸಿದರು.

ಆಹಾರ ಮೇಳದಲ್ಲಿ 150 ಮಳಿಗೆಗಳನ್ನು ತೆರೆಯಲಾಗಿದೆ. ಆಹಾರವನ್ನು ಯಾರೂ ಕೂಡ ವ್ಯರ್ಥ ಮಾಡಬಾರದು. ಉಪಯುಕ್ತರು ಆಹಾರವನ್ನು ಬಳಸಿಕೊಳ್ಳಿ, ಹೆಚ್ಚಿನ ರೀತಿ ಆಹಾರ ಪೋಲಾಗುವುದನ್ನು ತಪ್ಪಿಸಿ ಎಂದರು.

ದೇಶದಲ್ಲಿ ಮೂರನೇ ಒಂದು ಭಾಗದಷ್ಟು ಆಹಾರ ವ್ಯರ್ಥವಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ಸರ್ಕಾರದ ವತಿಯಿಂದ ಈ ವಿಚಾರದ ಕುರಿತು ಕ್ರಮವನ್ನು ಕೈಗೊಳ್ಳಲಾಗುವುದು. ಮದುವೆ ಮನೆಗಳು ಮತ್ತು ಶುಭ ಸಮಾರಂಭ ಹಾಗೂ ಕೆಲವು ಹೋಟೆಲ್‌ಗಳಲ್ಲಿ ಆಹಾರ ವ್ಯರ್ಥವಾಗುತ್ತಿದೆ. ಈ ರೀತಿ ಆಹಾರವನ್ನು ವ್ಯರ್ಥ ಮಾಡಬಾರದು. ಮುಂದಿನ ದಿನಗಳಲ್ಲಿ ಸರ್ಕಾರದಿಂದ ನಿಯಮಾವಳಿಗಳನ್ನು ರೂಪಿಸಿ ಆಹಾರ ವ್ಯಕ್ತವಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪ್ರತಿಬಾರಿಯಂತೆ ಭೋಜನ ಪ್ರಿಯರನ್ನು ಆಕರ್ಷಿಸಲು ಬುಡಕಟ್ಟು ಆಹಾರ ಪದ್ಧತಿ, ಜಾನಪದ ಪದ್ಧತಿ, ಮೈಸೂರು, ಕೊಡಗು, ಕರಾವಳಿ, ಮಲೆನಾಡು, ಉತ್ತರ ಕರ್ನಾಟಕ, ಉತ್ತರ ಭಾರತ, ಕೇರಳ, ಆಂಧ್ರ ಶೈಲಿ, ಕರಾವಳಿ ಶೈಲಿ, ತೆಲಂಗಾಣ, ಮಹಾರಾಷ್ಟ್ರ, ಚೈನೀಸ್, ಐಸ್ ಕ್ರೀಮ್, ಬಂಗಾರಪೇಟೆ, ಬಾಂಬೆ ಚಾಟ್ಸ್, ಬೇಕರಿ, ಬಿಸ್ಕತ್ತುಗಳು, ಹಣ್ಣು ಮತ್ತು ಹಣ್ಣಿನ ರಸಗಳು, ಸಾಂಪ್ರದಾಯಿಕ ಸಿಹಿ ತಿನಿಸು, ತಂಪು ಪಾನೀಯಗಳು, ಚಾಟ್ಸ್, ಔಷಧಿ ಆಹಾರ ಶೈಲಿಯ ತಿಂಡಿ ತಿನಿಸುಗಳು, ಸಿರಿಧಾನ್ಯ, ಸಾವಯವ ಆಹಾರಗಳು ಆಹಾರ ಮೇಳದಲ್ಲಿ ದೊರೆಯಲಿವೆ.

ಭೋಜನ ಪ್ರಿಯರ ಬೇಸರ : ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಆಯೋಜಿಸಿರುವ ಆಹಾರ ಮೇಳವು ಮೊದಲ ದಿನವೇ ಆಹಾರ ಪ್ರಿಯರಿಗೆ ಬೇಸರ ಉಂಟು ಮಾಡಿದೆ. ಹೌದು ಪ್ರತಿ ವರ್ಷ ಆಹಾರ ಮೇಳದಲ್ಲಿ ಬಹುತೇಕ ಮಳಿಗೆಗಳು ಆಹಾರ ಪ್ರಿಯರಿಗೆ ಅವರ ನೆಚ್ಚಿನ ಖಾದ್ಯಗಳನ್ನು ಬಡಿಸಲು ಸಿದ್ಧವಾಗುತ್ತಿದ್ದವು. ಆದರೆ, ಈ ಬಾರಿ ಉದ್ಘಾಟನೆ ಕೆಲವು ನಿಮಿಷಗಳು ಇರುವಾಗ ಸಿಬ್ಬಂದಿಗಳು ಆಹಾರ ಮೇಳದ ಆವರಣದ ಸಿದ್ಧತೆ ಮಾಡಿಕೊಳ್ಳುತ್ತಿದ್ದರು.

ಮತ್ತೊಂದೆಡೆ ಮಳಿಗೆದಾರರು ತಮ್ಮ ಮಳಿಗೆಗಳಿಗೆ ಅಡುಗೆ ಪರಿಕರಗಳನ್ನು ಆಟೋ, ಕಾರುಗಳ ಮೂಲಕ ತೆಗೆದುಕೊಂಡು ಮೇಳಕ್ಕೆ ಆಗಮಿಸುತ್ತಿದ್ದರು. ಕೆಲವು ಬಾಡಿಗೆದಾರರು ತಿಳಿಸಿದಂತೆ ಮಳಿಗೆಗಳಿಗೆ ವಿದ್ಯುತ್ ಸಂಪರ್ಕ ನೀಡಿದ್ದು, ತಡವಾದ ಹಿನ್ನೆಲೆಯಲ್ಲಿ ಈ ಬಾರಿ ಖಾದ್ಯಗಳನ್ನು ಸಿದ್ಧಪಡಿಸುವುದು ತಡವಾಗಿದೆ ಎಂದರು.

ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯದವರು ಸಿದ್ಧಪಡಿಸುವ ಬೊಂಬು ಬಿರಿಯಾನಿ ಮಳಿಗೆಗೆ ಬಹಳಷ್ಟು ಭೋಜನ ಪ್ರಿಯರು ಮೊದಲು ಬೊಂಬು ಬಿರಿಯಾನಿ ಸಿದ್ಧಪಡಿಸುವ ಸ್ಥಳಕ್ಕೆ ಭೇಟಿ ನೀಡಿದರು. ಆದರೆ, ಅಲ್ಲಿ ಯಾವುದೇ ವ್ಯವಸ್ಥೆಗಳು ಆಗಿರಲಿಲ್ಲ. ಮಳಿಗೆದಾರರು ಹೇಳುವ ಪ್ರಕಾರ 'ಕೆಲವೊಂದು ಸಮಸ್ಯೆಗಳಿಂದ ತಡವಾಗಿ ಎಲ್ಲವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದೇವೆ. ಕೆಲವೇ ಹೊತ್ತಿನಲ್ಲಿ ಬೊಂಬು ಬಿರಿಯಾನಿ ಸಿದ್ಧವಾಗಲಿದೆ' ಎಂದರು.

ಸಾಂಸ್ಕೃತಿಕ ವೇದಿಕೆ ಇಲ್ಲ : ಪ್ರತಿ ಬಾರಿ ಆಹಾರ ಮೇಳದಲ್ಲಿ ಸಾಂಸ್ಕೃತಿಕ ವೇದಿಕೆ ನಿರ್ಮಿಸಿ, ಸ್ಥಳೀಯ ಮತ್ತು ರಾಜ್ಯದ ವಿವಿಧ ಭಾಗದ ಕಲಾವಿದರಿಗೆ ಅವಕಾಶ ಕಲ್ಪಿಸಲಾಗುತ್ತಿತ್ತು. ಆದರೆ, ಈ ಬಾರಿ ಒಂದೇ ಕಡೆ ಆಹಾರ ಮೇಳ ಆಯೋಜನೆ ಮಾಡಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುವ ನಿರೀಕ್ಷೆಗಳಿವೆ. ಆದ್ದರಿಂದ ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಾಣ ಮಾಡಿಲ್ಲ. ಬದಲಾಗಿ ಎಲ್‌ಇಡಿ ಪರದೆಗಳನ್ನು ಅಳವಡಿಸಿದ್ದು, ಅದರಲ್ಲಿ ನಗರದ ವಿವಿಧ ವೇದಿಕೆಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನು ನೇರಪ್ರಸಾರ ಮಾಡಲಾಗುವುದು ಎಂದು ಆಹಾರ ಮೇಳ ಉಪ ವಿಶೇಷಾಧಿಕಾರಿ ಮತ್ತು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ದಿನೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರೈತರನ್ನು ಸ್ಮರಿಸೋಣ : ಆಹಾರ ಮೇಳ ಆಯೋಜಿಸಿರುವ ಮೈದಾನಕ್ಕೆ ಆಗಮಿಸುತ್ತಿದ್ದಂತೆ ಮೈದಾನದ ಮಧ್ಯಭಾಗದಲ್ಲಿ ರೈತನ ಮನೆ ಮತ್ತು ಪಕ್ಕದ ಹೊಲದಲ್ಲಿ ಎರಡು ಎತ್ತುಗಳನ್ನು ಹಿಡಿದು ರೈತ ಉಳುಮೆ ಮಾಡುತ್ತಿರುವ ಪ್ರತಿಕೃತಿಗಳು ಆಕರ್ಷಕವಾಗಿದೆ. 150 ಮಳಿಗೆಗಳಲ್ಲಿಯೂ ರೈತ ಹೊಲ ಉಳುತ್ತಿರುವ ಚಿತ್ರ ಹಾಗೂ ಅದರ ಕೆಳಭಾಗದಲ್ಲಿ 'ಪ್ರತಿ ತುತ್ತಿಗೂ ರೈತರನ್ನು ಸ್ಮರಿಸೋಣ' ಎಂಬ ವಾಕ್ಯ ಎಲ್ಲರನ್ನು ಆಕರ್ಷಿಸುತ್ತಿದೆ.

ಈ ವೇಳೆ ವಿಧಾನಪರಿಷತ್ ಸದಸ್ಯರಾದ ಡಿ. ತಿಮ್ಮಯ್ಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರಾದ ಕುಮುದಾ, ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತಾರಾದ ದಿನೇಶ್ ಮತ್ತು ಆಹಾರ ಮೇಳ ಉಪ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸದ್ಯದಲ್ಲಿಯೇ 10 ಕೆ.ಜಿ. ಅಕ್ಕಿ

ಆಹಾರ ಮೇಳಕ್ಕೆ ಚಾಲನೆ ನೀಡಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 10 ಕೆ.ಜಿ. ಅಕ್ಕಿ ನೀಡುವ ವಿಚಾರವಾಗಿ ಪ್ರತಿಕ್ರಿಯಿಸಿ, ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳ ಬಳಿ ಚರ್ಚಿಸಲಾಗಿದೆ. ಆಂಧ್ರ ಛತ್ತೀಸ್‌ಘಡ್ ಮತ್ತು ತೆಲಂಗಾಣದವರು ಅಕ್ಕಿ ನೀಡಲು ಮುಂದಾಗಿದ್ದಾರೆ. ಆದರೆ, ಬೆಲೆ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಸದ್ಯದಲ್ಲಿಯೇ ನೀಡುತ್ತೇವೆ ಎಂದರು. ಈ ವೇಳೆ ಐಟಿ ರೇಡ್ ವೇಳೆ ಸಿಕ್ಕ ಹಣ ಲೋಕಸಭೆ ಚುನಾವಣೆಗೆ ಸಂಗ್ರಹ ಆರೋಪ ವಿಚಾರವಾಗಿ ಮಾತನಾಡಿದ ಅವರು, ಗುತ್ತಿಗೆದಾರರೇ ಹೇಳಿದ್ದಾರೆ. ದಾಖಲೆಗಳಿವೆ ಕೊಡುತ್ತೇನೆಂದು, ಕೊಡಲಿ. ಅಲ್ಲಿಯವರೆಗೂ ಕಾಯಿರಿ, ಗೊತ್ತಾಗುತ್ತೆ ಎಂದರು.

ಮಹಿಷ ದಸರಾ ಯಶಸ್ವಿಗೊಳಿಸಿದವರಿಗೆ ಪುರುಷೋತ್ತಮ್ ಧನ್ಯವಾದ

ಪ್ರೊ.ಕೆ.ಎಸ್.ಭಗವಾನ್ ಹೇಳಿಕೆಗೆ ವಿಷಾದ



ಮೈಸೂರು, ಅ.15(ಜಿಎ)-ಹಲವರ ವಿರೋಧದ ನಡುವೆಯೂ ಮಹಿಷ ದಸರಾ ಯಶಸ್ವಿಯಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಪ್ರಗತಿಪರರು, ಚಿಂತಕರು, ಇನ್ನಿತರರಿಗೆ ಮಹಿಷ ದಸರಾ ಆಚರಣಾ ಸಮಿತಿಯ ಅಧ್ಯಕ್ಷ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ಧನ್ಯವಾದ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಷ ದಸರಾ ಯಶಸ್ಸಿನ ಬಳಿಕ ಕೆಲವರು, ಸೊಕ್ಕನ್ನು ಅಡಗಿಸುತ್ತೇವೆ ಎಂದಿದ್ದಾರೆ. ಅವರ ಭ್ರಮೆ ಇನ್ನೂ ಹೋಗಿಲ್ಲ. ನಮ್ಮ ಸೊಕ್ಕನ್ನು ಮಹಿಷ ದಸರಾ ಯಶಸ್ಸಿನ ಮೂಲಕ ತೋರಿಸಿದ್ದೇವೆ. ಹೀಗಾಗಿ ಈ ರೀತಿ ಮಾತನಾಡುವುದನ್ನು ನಿಲ್ಲಿಸಬೇಕು. ಎಲ್ಲೋ ನಿಂತು ಮಾತನಾಡುವವರಿಗೆ ತಲೆ ಬಾಗುವುದಿಲ್ಲ ಎಂದರು.

ಉಡುಪಿ ಜಿಲ್ಲೆಯಲ್ಲಿಯೂ ಮಹಿಷ ದಸರಾ ಆಚರಣೆ ಮಾಡದಂತೆ 144 ನಿಷೇಧಾಜ್ಞೆ ಜಾರಿಗೊಳಿಸಿರುವುದು ಸರಿಯಲ್ಲ. ಅಲ್ಲಿಯೂ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಆಚರಣೆಗೆ ಅವಕಾಶ ಮಾಡಿಕೊಡಬೇಕೆಂದು ಕೋರಿದರು. ಮಹಿಷ ದಸರಾ ಮುಂದಿನ ಲೋಕಸಭಾ ಚುನಾವಣೆ ವೇಳೆ ಖಂಡಿತವಾಗಿಯೂ ಪರಿಣಾಮ ಬೀರಲಿದೆ ಎಂದು ತಿಳಿಸಿದರು.

ಮಹಿಷ ದಸರಾ ವೇಳೆ ಪ್ರೊ.ಕೆ.ಎಸ್. ಭಗವಾನ್ ಒಕ್ಕಲಿಗ ಸಮುದಾಯದ ಕುರಿತು ಆಡಿದ ಹೇಳಿಕೆಗೆ ಪ್ರತಿಕ್ರಿಯಿಸಿ, ಪ್ರಗತಿಪರ ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಅವರು ನೀಡಿರುವ ವಿವಾದಿತ ಹೇಳಿಕೆಗೂ ಮಹಿಷ ದಸರಾಕ್ಕೂ ಸಂಬಂಧವಿಲ್ಲ.

ಮಹಿಷ ದಸರಾ ಹೊರತುಪಡಿಸಿದಂತೆ ಯಾವುದೇ ಕಾರಣಕ್ಕೂ ವೈಯಕ್ತಿಕ ಅಥವಾ ಪ್ರಚೋದನಕಾರಿ ರೀತಿ ಮಾತನಾಡಬಾರದೆಂದು ಮೊದಲೇ ತಿಳಿಸಲಾಗಿತ್ತು. ಹೀಗಿದ್ದರೂ ಭಗವಾನ್ ಅವರು ಕುವೆಂಪು ಅವರ ಮಾತನ್ನು ಉಲ್ಲೇಖಿಸಿ ಆಡಿದ ಮಾತಿನಿಂದ ಒಕ್ಕಲಿಗ ಸಮುದಾಯಕ್ಕೆ ನೋವಾಗಿದೆ. ಇದಕ್ಕಾಗಿ ತಾವು ವಿಷಾದಿಸುತ್ತಿದ್ದು, ಕುವೆಂಪು, ಡಾ.ಬಿ.ಆರ್. ಅಂಬೇಡ್ಕರ್ ಅವರ ಕಾಲಘಟ್ಟಕ್ಕೂ ಈಗಿನ ಕಾಲಘಟ್ಟಕ್ಕೂ ವ್ಯತ್ಯಾಸವಿದೆ. ಇದನ್ನು ಅರಿತು ಮಾತನಾಡಬೇಕಾಗಿತ್ತು. ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆ ಮರುಕಳಿಸದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು.

ಭಗವಾನ್ ಅವರ ಮಾತಿನಿಂದ ನೋವಾಗಿದ್ದರೆ ಕ್ಷಮೆ ಇರಲಿ. ಆದರೆ ಪ್ರತಿಭಟನೆ ವೇಳೆ ಅಶ್ಲೀಲ ಪದ ಬಳಸುವುದು, ಅವರ ಮನೆಗೆ ನುಗ್ಗುವುದು ಸರಿಯಲ್ಲ. ವಿವಾದಿತ ಹೇಳಿಕೆ ಎಂಬುದನ್ನು ಮನವರಿಕೆ ಮಾಡಿಕೊಡುವ ಕೆಲಸ ಸೌಮ್ಯವಾಗಿ ಮಾಡಬೇಕಾಗಿದೆ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅ.20, ಸರಸ್ವತಿ ಯಾಗದ ಮಂಡಲ ಪೂಜೆ

ಮೈಸೂರು, ಅ.15(ಜಿಎ)-ಮರಟಿಕ್ಯಾತನಹಳ್ಳಿಯ ಸಾಯಿ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್ ಹಾಗೂ ಸಮಷ್ಠಿ ಗ್ಲೋಬಲ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಇದೇ ಅ. 20ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 12 ರವರೆಗೆ ಸರಸ್ವತಿ ಮಹಾಯಾಗದ ಮಂಡಲ ಪೂಜಾ ಮಹೋತ್ಸವ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಪದಾಧಿಕಾರಿ ವಾಣಿ ಬಹದ್ದೂರ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಇಂಟೆಲಿಜೆಂಟ್ ಪಬ್ಲಿಕ್ ಶಾಲೆ ಆವರಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ವಿದ್ಯಾರ್ಥಿಗಳು, ಉದ್ದಿಮೆದಾರರು, ಕುಶಲ ಕರ್ಮಿಗಳು, ವ್ಯಾಪಾರಿಗಳು, ಕಾರ್ಮಿಕರ ಏಳಿಗೆಗಾಗಿ ಮನೆ ಮನೆ ಗುರುಕುಲ ಎಂಬ ಕಾರ್ಯಕ್ರಮ ಅಡಿಯಲ್ಲಿ ಇದನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಮಕೃಷ್ಣ, ಪಿ.ವಿ. ಆನಂದ ಪದ್ಮನಾಭನ್ ಉಪಸ್ಥಿತರಿದ್ದರು.



ಮಾವುತ, ಕಾವಾಡಿಗ ಕುಟುಂಬದ ಮಹಿಳೆಯರಿಗೆ ಸೀರೆ ವಿತರಣೆ



ಮೈಸೂರು, ಅ. 15-ಮೈಸೂರಿನ ಶ್ರೀ ದುರ್ಗಾ ಫೌಂಡೇಷನ್ ವತಿಯಿಂದ ದಸರಾ ಗಜಪಡೆಗಳೊಂದಿಗೆ ಆಗಮಿಸಿರುವ ಮಾವುತ ಮತ್ತು ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಅರಿಶಿನ, ಕುಂಕುಮ, ವೀಳ್ಯದೆಲೆ, ಬಾಳೆಹಣ್ಣು ಹಾಗೂ ಸೀರೆ ವಿತರಿಸಲಾಯಿತು.

ಈ ವೇಳೆ ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್ ಮಾತನಾಡಿ, ದೇವಿ ಪ್ರಜ್ಞೆ, ತಾಯಿ ಪ್ರಜ್ಞೆ ಮತ್ತು ಪ್ರಕೃತಿಯ ಅರಿವಿನ ಹಬ್ಬವೇ ನವರಾತ್ರಿ. ನವರಾತ್ರಿಯ ಮೂಲಕ ಪ್ರಕೃತಿಗೆ ನಮಿಸಿ ಪ್ರಕೃತಿಯ ಶಕ್ತಿ ತಾಯಿ ದುರ್ಗಾ ಮಾತೆಯನ್ನು ಸರ್ವ ಸ್ತ್ರೀಯರಲ್ಲೂ ಕಾಣುವುದೇ ನವರಾತ್ರಿ. ಭಾರತೀಯ ಸನಾತನ ಧರ್ಮದಲ್ಲಿ ನವರಾತ್ರಿಗೆ ಅಪಾರ ಶಕ್ತಿ ಇದ್ದು 9 ದಿನಗಳ ಕಾಲ ಅಂತರಿಕ ದ್ವೇಷ, ಅಸೂಯೆ ತೊಲಗಿಸಿ ದೈವೀಪ್ರಜ್ಞೆಯನ್ನು ಜಾಗೃತಗೊಳಿಸುವುದೇ ನವರಾತ್ರಿಯ ವಿಶೇಷತೆ.

ನವದುರ್ಗಾ ಸ್ವರೂಪದಲ್ಲಿರುವ ಎಲ್ಲಾ ಗೌರವದ ಮಾತೆಯರಿಗೆ ವಂದಿಸಿ ನಮ್ಮ ವಾತಾವರಣದಲ್ಲಿ ಸಕಾರಾತ್ಮಕವಾದಂತಹ ಯೋಚನಾಲಹರಿಯನ್ನು ಜಾಗೃತಗೊಳಿಸುವುದೇ ಅಲ್ಲದೆ ನವ ಚೈತನ್ಯವನ್ನು ಹೆಚ್ಚಿಸುತ್ತದೆ. ದುರ್ಗಾ ಮಾತೆಯನ್ನು ಪೂಜಿಸುವುದು, ನವ ಕನ್ನಿಕೆಯರ ಪೂಜೆ, ಆಯುಧ ಪೂಜೆ ವಿಶೇಷವಾಗಿದೆ ಎಂದರು.

9 ಮಾತೆಯರಲ್ಲೂ ವಿಶೇಷ ಶಕ್ತಿಗಳಿದ್ದು ದುಷ್ಟ ಶಕ್ತಿಯನ್ನು ರಾಕ್ಷಸ ಪ್ರವೃತ್ತಿಯನ್ನು ನಾಶಗೊಳಿಸಿ, ಮಾನವ ಜನ್ಮವನ್ನು ಶಕ್ತಿಗೊಳಿಸುವ ವಾತಾವರಣವನ್ನು ಸೃಷ್ಟಿಸಿರುವ ಜಗನ್ಮಾತೆಗೆ ನಾವೆಲ್ಲರೂ ಸದಾ ಋಣಿಯಾಗಿರಬೇಕು. ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ಅಧ್ಯಕ್ಷರಾದ ರಂಜಿತಾ ಸುಬ್ರಹ್ಮಣ್ಯ, ಸಮತ್ವ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರಾದ ವನಮಾಲ, ಪದ್ಮ, ಜೀವಧಾರ ರಕ್ತಾ ನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್ ಹಾಗೂ ಮುತ್ತಣ್ಣ, ಉದ್ಯಮಿ ಬಸವರಾಜ ಪೂಜಾರಿ, ವೀಣಾ, ಹಾಗೂ ಇನ್ನಿತರರು ಹಾಜರಿದ್ದರು.

ಚಿತ್ರ ಬಿಡಿಸುವ ಸ್ಪರ್ಧೆಯೊಂದಿಗೆ ಅಬ್ದುಲ್ ಕಲಾಂ ಹುಟ್ಟುಹಬ್ಬ ಆಚರಣೆ





ಮೈಸೂರು, ಅ.15-ಟೀಂ ಮೈಸೂರು ಪ್ರತಿಷ್ಠಾನದ ವತಿಯಿಂದ ಭಾನುವಾರ ಇಟ್ಟಿಗೆಗೂಡಿನ ಗಾಂಧಿ ಉದ್ಯಾನವನದಲ್ಲಿ ಮಾಜಿ ರಾಷ್ಟ್ರಪತಿ ದಿವಂಗತ ಎಪಿಜೆ ಅಬ್ದುಲ್ ಕಲಾಂ ರವರ 93ನೇ ಹುಟ್ಟುಹಬ್ಬವನ್ನು ಕಲಾಂರವರ ಜೀವನ ಕುರಿತಂತೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಮೂಲಕ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ತಂಡದ ಕಿರಣ್ ಜೈರಾಮ್ ಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸ್ಥಳದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ 70 ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಹಿರಿಯರು ಭಾಗವಹಿಸಿದ್ದರು.

1 ರಿಂದ 6ನೇ ತರಗತಿ, ವಿಭಾಗದಲ್ಲಿ ಕಿಸ್ತಿ ಎಸ್, ಎಸ್ ಜೆ ಎಸ್ ಶಾಲೆ, ವೇದಶ್ರೀ, ಸೇಂಟ್ ಜೋಸೆಫ್ ಶಾಲೆ, ಚಾರಿ ಮಿತ್ರ ಹಾಗೂ 7 ರಿಂದ 10 ತರಗತಿ ವಿಭಾಗದಲ್ಲಿ ಮೋಸಿನ್ ಕ್ಯೂರಿಂನ್ ಬುಸ್ಸಾದ್, ಬೇಡನ್ ಪವನ್ ಶಾಲೆ, ತಿಲಕ್ ಗೌಡ ಟಿ. ಎನ್, ಜಕ್ಕನಹಳ್ಳಿ ಸರ್ಕಾರಿ ಶಾಲೆ, ನಿಹಾರಿಕಾ ರತ್ನಂ, ಸೇಂಟ್ ಜೋಸೆಫ್ ಶಾಲೆ ಹಾಗೂ 10ನೇ ತರಗತಿಯಿಂದ ಮೇಲ್ಪಟ್ಟ ವಿಭಾಗದಲ್ಲಿ ಕುಮಾರ್ ನಾಯಕ್ ಕುಮಾರ್, ಮರಿ ಮಲ್ಲಪ್ಪ ಕಾಲೇಜ್, ಜಾವಿದ ಬಾನು, ಮರಿಮಲ್ಲಪ್ಪ ಕಾಲೇಜ್, ಸಂಜನಾ ಜಿ ಬೆಸ್ ಕಾಲೇಜ್, ಕ್ರಮವಾಗಿ 1 ರಿಂದ 3 ಬಹುಮಾನಗಳನ್ನು ಪಡೆದಿದ್ದಾರೆ, ಪ್ರತಿ ವಿಭಾಗದಲ್ಲಿ ಮೂರರಂತೆ ಬಹುಮಾನದೊಂದಿಗೆ ಪ್ರಶಂಸನಾ ಪತ್ರವನ್ನು ನೀಡಲಾಯಿತು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಶಂಸನಾ ಪತ್ರ ದೊಂದಿಗೆ ಒಂದು ಪುಸ್ತಕವನ್ನು ನೀಡಲಾಯಿತು.

ಮೂರು ವಿಭಾಗಗಳಲ್ಲಿ ಅತ್ಯುತ್ತಮವಾಗಿ ಚಿತ್ರ ಬಿಡಿಸಿದ 9 ವಿದ್ಯಾರ್ಥಿಗಳಿಗೆ ಬಹುಮಾನದೊಂದಿಗೆ ಪ್ರಶಂಸನಾ ಪತ್ರವನ್ನು ನೀಡಲಾಯಿತು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಶಂಸನಾ ಪತ್ರದೊಂದಿಗೆ ಒಂದು ಪುಸ್ತಕವನ್ನು ನೀಡಲಾಯಿತು. ತೀರ್ಪುಗಾರರಾಗಿ ಶ್ರೀ ಹಿರೇಶ್ ಕಾವ, ಶ್ರೀ ರಾಘವೇಂದ್ರ ಹಾಗೂ ಸಿಜೆ ಮನೋಹರ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಛಾಯಾದೇವಿ ನವೀನ್, ನಗರಪಾಲಿಕೆ ನಾಮ ನಿರ್ದೇಶಿತ ಸದಸ್ಯರಾದ ಆರ್.ಹೆಚ್. ಕುಮಾರ್, ಶ್ರೀ ದುರ್ಗಾದೇವಿ ದೇವಸ್ಥಾನದ ಸಮಿತಿಯ ಅಧ್ಯಕ್ಷರಾದ ವನರಾಜಣ್ಣನವರು, ಜೆಡಿಎಸ್ ಹಿರಿಯ ಮುಖಂಡರು ಹಾಗೂ ಮರ್ಚೆಂಟ್ಸ್ ಬ್ಯಾಂಕಿನ ನಿರ್ದೇಶಕರಾದ ಬಿ ಕೋದಂಡರಾಮ ರವರು ಮತ್ತೊಬ್ಬ ನಿರ್ದೇಶಕರಾದ ಶ್ರೀ ಟೈಲ್ಸ್ ಮಹೇಶಣ್ಣನವರು ತಂಡದ ಸಂಚಾಲಕರು ಹಾಗೂ ಮೈಸೂರು ವಿ ವಿ ಯ ಸಿಂಡಿಕೇಟ್ ಸದಸ್ಯರಾದ ಗೋಕುಲ್ ಗೋವರ್ಧನ್, ಸಹ ಸಂಚಾಲಕರಾದ ಯಶವಂತ್, ಹರೀಶ್ ಬಾಬು, ಅನಿಲ್ ಜೈನ್ ಹಿರಿಯಣ್ಣ, ಮುರಳಿ, ಸುನಿಲ್, ಯತೀಶ್, ಹೇಮಂತ್, ಅಮರ್, ದಾಮೋದರ್ ಹರೀಶ್ ಎಲೆಕ್ಟ್ರಿಕಲ್, ನವೀನ್, ಕೃಷ್ಣ, ಮಂಜು ಫಾರ್ಮ, ಬಾಲಕೃಷ್ಣ, ಸುರೇಶ್, ಮನೋಜ್, ಶ್ರೀಮತಿ ಸಹನ, ಕುಮಾರಿ ಸುಕೃತ ಇತರರು ಉಪಸ್ಥಿತರಿದ್ದರು.

'ಕರಗ ಉತ್ಸವ'ದ ಮೂಲಕ ದಸರಾಗೆ ಚಾಲನೆ






ಮಡಿಕೇರಿ, ಅ.15– ಶತಮಾನಕ್ಕೂ ಮೀರಿದ ಇತಿಹಾಸ ಹೊಂದಿರುವ ಮಡಿಕೇರಿ ದಸರಾ ಮಹೋತ್ಸವದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ನೀಡಲಾಗಿರುವ ನಾಲ್ಕು ಶಕ್ತಿ ದೇವತೆಗಳ 'ಕರಗ ಉತ್ಸವ'ಕ್ಕೆ ನಗರದ ಪಂಪಿನ ಕೆರೆಯ ಕರಗ ಕಟ್ಟೆಯಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸುವ ಮೂಲಕ ಭಾನುವಾರ ಸಂಜೆ ವಿದ್ಯುಕ್ತ ಚಾಲನೆ ನೀಡಲಾಯಿತು.

ಮಡಿಕೇರಿ ನಗರ ದಸರಾ ಸಮಿತಿ, ದಶಮಂಟಪ ಸಮಿತಿಯ ಪದಾಧಿಕಾರಿಗಳು, ಸಾರ್ವಜನಿಕ ಪ್ರಮುಖರು, ಜನಪ್ರತಿನಿಧಿಗಳು ಅಧಿಕಾರಿಗಳು ನಾಲ್ಕು ಶಕ್ತಿ ದೇವತೆಗಳ ಕರಗಗಳಿಗೆ ಸಂಜೆ ಪೂಜೆ ಸಲ್ಲಿಸಿ, ನಾಡಿನ ಒಳಿತಿಗೆ ಪ್ರಾರ್ಥಿಸುವ ಮೂಲಕ ಕರಗ ಮೆರವಣಿಗೆ ಆರಂಭಗೊಂಡಿತು.


ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡ ನಗರದ ರಾಜಾ ಸೀಟು ಬಳಿಯ ಶ್ರೀಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ಕರಗವನ್ನು ವ್ರತಧಾರಿ ಎಂ. ಹರೀಶ್(ಉಮಿ), ಗೌಳೀಬೀದಿಯ ಶ್ರೀಕಂಚಿಕಾಮಾಕ್ಷಿ ಕರಗವನ್ನು ಕಾರ್ತಿಕ್, ನಗರಸಭೆ ಬಳಿಯ ಶ್ರೀದಂಡಿನ ಮಾರಿಯಮ್ಮ ಕರಗವನ್ನು ಜಿ.ಎ.ಉಮೇಶ್ ಮತ್ತು ಪೆನ್ಷನ್ ಲೇನ್‌ನ ಶ್ರೀಕೋಟೆ ಮಾರಿಯಮ್ಮ ಕರಗವನ್ನು ಪಿ.ಪಿ.ಅನೀಶ್ ಕುಮಾರ್ ಹೊರುವ ಮೂಲಕ ನಗರ ಮೆರವಣಿಗೆಯನ್ನು ಆರಂಭಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಅವರು 4 ಶಕ್ತಿ ದೇವತೆಗಳ ಕರಗ ವ್ರತಧಾರಿಗಳನ್ನು ಸನ್ಮಾನಿಸಿ ಗೌರವಿಸಿದರು.

ನವರಾತ್ರಿ ಉತ್ಸವದ ಆರಂಭದ ಹಿನ್ನೆಲೆಯಲ್ಲಿ ಭಾನುವಾರ ಮಧ್ಯಾಹ್ನ ನಾಲ್ಕು ಶಕ್ತಿದೇವತೆಗಳ ದೇವಸ್ಥಾನಗಳಿಂದ ವ್ರತಧಾರಿಗಳೊಂದಿಗೆ ದೇವಾಲಯ ಸಮಿತಿಯವರು ಕರಗ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಹೊತ್ತು ಬನ್ನಿ ಮಂಟಪಕ್ಕೆ ತೆರಳಿ ಅಗತ್ಯ ಪೂಜಾ ವಿಧಿ-ವಿಧಾನಗಳೊಂದಿಗೆ ಆಕರ್ಷಕವಾಗಿ ಕರಗಗಳನ್ನು ಕಟ್ಟಿ ಹೂವುಗಳಿಂದ ಅಲಂಕರಿಸಿ ಸಂಜೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದರು.

ಈ ಸಂದರ್ಭ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಶಾಸಕರುಗಳಾದ ಡಾ.ಮಂಥರ್‌ಗೌಡ, ಎ.ಎಸ್.ಪೊನ್ನಣ್ಣ, ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಮಡಿಕೇರಿ ನಗರ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ, ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ, ಖಜಾಂಚಿ ಅರುಣ್ ಶೆಟ್ಟಿ, ದಶಮಂಟಪ ಸಮಿತಿ ಅಧ್ಯಕ್ಷ ಮಂಜುನಾಥ್, ಜಿಲ್ಲಾಧಿಕಾರಿ ವೆಂಕಟ್ ರಾಜು, ಎಸ್.ಪಿ. ಕೆ.ರಾಮರಾಜನ್, ಅಡಿಷನಲ್ ಎಸ್‌ಪಿ. ಸುಂದರ್ ರಾಜ್, ಜಿ.ಪಂ. ಸಿಇಓ ವರ್ಣಿತ್ ನೇಗಿ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕೆಪಿಸಿಸಿ ಮುಖಂಡ ಹೆಚ್.ಎಸ್. ಚಂದ್ರಮೌಳಿ, ದಸರಾ ಸಮಿತಿಯ ವಿವಿಧ ಉಪಸಮಿತಿಗಳ ಪದಾಧಿಕಾರಿಗಳು, ನಗರಸಭಾ ಸದಸ್ಯರು ಹಾಗೂ ಗಣ್ಯರು ಹಾಜರಿದ್ದರು.

ನಗರ ಪ್ರದಕ್ಷಿಣೆ: ಪಂಪಿನಕೆರೆ ಬಳಿಯಿಂದ ಹೊರಟ ನಾಲ್ಕು ಕರಗಗಳು ಮಹದೇವ ಪೇಟೆಯ ಚೌಡೇಶ್ವರಿ ದೇವಾಲಯ, ಕನ್ನಿಕಾ ಪರಮೇಶ್ವರಿ ದೇಗುಲದಲ್ಲಿ ಪೂಜೆ ಸ್ವೀಕರಿಸಿದ ಬಳಿಕ ಸಂಪ್ರದಾಯದಂತೆ ಪೇಟೆ ಶ್ರೀರಾಮಮಂದಿರ ತಲುಪಿ, ಅಲ್ಲಿಯೂ ಕರಗಗಳಿಗೆ ಪೂಜೆ ಸಲ್ಲಿಸಿದ ಬಳಿಕ ತಮ್ಮ ತಮ್ಮ ದೇವಾಲಯಗಳಿಗೆ ತೆರಳಿದವು.

ಗೋಣಿಕೊಪ್ಪ ದಸರಾ ಜನೋತ್ಸವ ಉದ್ಘಾಟನೆ



ಗೋಣಿಕೊಪ್ಪ, ಅ.15– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶ್ರೀ ಕಾವೇರಿ ದಸರಾ ಸಮಿತಿ ಸಹಯೋಗದಿಂದ 45 ನೇ ವರ್ಷದ ಗೋಣಿಕೊಪ್ಪ ದಸರಾ ಜನೋತ್ಸವಕ್ಕೆ ಗೋಣಿಕೊಪ್ಪ ಸ್ವಾತಂತ್ರ್ಯ ಹೋರಾಟಗಾರರ ಭವನದಲ್ಲಿ ದೇವಿ ಚಾಮುಂಡೇಶ್ವರಿ ಪ್ರತಿಮೆ ಪ್ರತಿಷ್ಠಾಪನೆ ಮೂಲಕ ಚಾಲನೆ ನೀಡಲಾಯಿತು.

ಗಣಪತಿ ಹೋಮ, ಧಾರ್ಮಿಕ ವಿಧಿ-ವಿಧಾನಗಳ ಮೂಲಕ ದೇವಿಯನ್ನು ಪೂಜಿಸಲಾಯಿತು. ಬೆಳಗ್ಗೆ 7 ಗಂಟೆಯಿಂದ 8 ಗಂಟೆಯವರೆಗೆ ಪೂಜಾ ಕಾರ್ಯಗಳು ನಡೆದವು. ಶಾಸಕ ಎ.ಎಸ್. ಪೊನ್ನಣ್ಣ ಕಾವೇರಿ ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಪ್ರಧಾನ ಕಾರ್ಯದರ್ಶಿ ಕಂದಾ ದೇವಯ್ಯ ಉಪಾಧ್ಯಕ್ಷ ಶಿವಾಜಿ, ನಿಕಟಪೂರ್ವ ಅಧ್ಯಕ್ಷರುಗಳಾದ ಕೆ. ಜಿ. ರಾಮಕೃಷ್ಣ, ಎಂ. ಸಲ್ಮಾ, ಬಿ. ಎನ್. ಪ್ರಕಾಶ್, ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಟ್ಟಂಡ ಚೇಟ್ಟಿರ ತಿಮ್ಮಯ್ಯ ಇದ್ದರು. ಶಾಸಕ ಎ. ಎಸ್. ಪೊನ್ನಣ್ಣ ಮಾತನಾಡಿ, ದಸರಾ ಹಬ್ಬ ಯಾವುದೇ ವಿಘ್ನವಿಲ್ಲದೆ ನಡೆಯುವಂತೆ ದೇವಿ ಆಶೀರ್ವದಿಸಲಿ ಅಚ್ಚುಕಟ್ಟಾಗಿ ವೇದಿಕೆ ನಿರ್ಮಿಸಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಕಲಾಭಿಮಾನಿಗಳು ಆಗಮಿಸಬೇಕಿದೆ ಎಂದರು.

ಇಂದಿನ ಕಾರ್ಯಕ್ರಮ

ಅ.16 ರಂದು ಸಂಜೆ 6 ಗಂಟೆಗೆ ನಾಗರಹೊಳೆ ರಮೇಶ್ ತಂಡದಿಂದ ಸಂಗೀತ, ನೃತ್ಯ, 7 ಕ್ಕೆ ಜಗನ್ಮೋಹನ ನಾಟ್ಯಾಲಯದ ಭರತನಾಟ್ಯ, ಖ್ಯಾತ ಗಾಯಕ ಚಂದನ್ ಶೆಟ್ಟಿ ತಂಡದಿಂದ ಸಂಗೀತ ಸಂಜೆ ಮೂಡಿ ಬರಲಿದೆ.

ದಶಮಂಟಪಗಳಿಗೆ ವೈಯಕ್ತಿಕ ನೆರವು ನೀಡಿದ ಶಾಸಕ ಮಂಥರ್‌ಗೌಡ



ಮಡಿಕೇರಿ, ಅ.15– ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು ನಗರದ ದಶ ಮಂಟಪಗಳಿಗೆ ವೈಯಕ್ತಿಕ ಅನುದಾನ ನೀಡಿದ್ದಾರೆ. ಸರ್ಕಾರಿ ನೆರವಿನ ಆತಂಕದಿಂದಲೇ ದಸರಾ ಮಂಟಪ ಸಿದ್ಧತೆ ನಡೆಸುತ್ತಿದ್ದ ದಶ ಮಂಟಪ ಸಮಿತಿಗಳಿಗೆ ಅಲ್ಪ ಮಟ್ಟಿಗೆ ನಿರಾಳವಾಗಿದೆ.

ಕಳೆದ ವರ್ಷದಿಂದ ವೈಯಕ್ತಿಕವಾಗಿ ಮಂಟಪ ಸಮಿತಿಯ ಹತ್ತು ದೇವಾಲಯಗಳು ಹಾಗೂ ನಾಲ್ಕು ಕರಗ ಮಂಟಪಗಳಿಗೆ ವೈಯಕ್ತಿಕ ನೆರವು ನೀಡುವ ಸಂಪ್ರದಾಯ ಆರಂಭಿಸಿರುವ ಡಾ. ಮಂಥರ್ ಗೌಡ ಅವರು ಈ ವರ್ಷ ಕೂಡ ನೆರವಿನ ಹಸ್ತ ಚಾಚಿದ್ದಾರೆ. ಇಂದು ಪೂರ್ವಾಹ್ನದಿಂದಲೇ ದಶ ಮಂಟಪ ವ್ಯಾಪ್ತಿಯ ದೇವಾಲಯಗಳಿಗೆ ಭೇಟಿ ನೀಡಿದ ಶಾಸಕರು ವೈಯಕ್ತಿಕವಾಗಿ ಕರಗ ದೇವಾಲಯಗಳಿಗೆ ತಲಾ 50 ಸಾವಿರ ರೂ. ಹಾಗೂ ಇತರ ದೇವಾಲಯಗಳಿಗೆ 30 ಸಾವಿರ ರೂಗಳನ್ನು ದೇಣಿಗೆಯಾಗಿ ನೀಡಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದರು.

ಕಳೆದ ವರ್ಷ ದಸರಾ ಸಮಯದಲ್ಲಿ ಖುದ್ದಾಗಿ ಮಂಟಪ ರಚನೆಯ ಕಾರ್ಯಗಳನ್ನು ತಾವು ವೀಕ್ಷಿಸಿದ್ದು ಮಂಟಪ ಸಿದ್ಧತೆಯಲ್ಲಿ ನೂರಾರು ಪದಾಧಿಕಾರಿಗಳು ಪಡುವ ಶ್ರಮವನ್ನು ಕಣ್ಣಾರೆ ಕಂಡಿದ್ದೇನೆ. ಈ ನಿಟ್ಟಿನಲ್ಲಿ ಮಂಟಪ ಸಮಿತಿಗಳಿಗೆ ಅದ್ಯತೆ ನೀಡಿ ಇದೀಗ 20 ಲಕ್ಷ ರೂಗಳ ಹೆಚ್ಚುವರಿ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಿಸಿದ್ದೇನೆ ಎಂದ ತಿಳಿಸಿದರು. ದಶ ಮಂಟಪ ಸಮಿತಿಗೆ ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಇದೇ ಸಂದರ್ಭ ಭರವಸೆ ನೀಡಿದರು.

ಈ ಸಂದರ್ಭ ಮಡಿಕೇರಿ ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಹಾಗೂ ನಗರ ಸಭಾ ಸದಸ್ಯ ರಾಜೇಶ್ ಯಲ್ಲಪ್ಪ, ದಸರಾ ಬೈಲಾ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಪರಿಸರ ನಿಯಂತ್ರಣ ಮಂಡಳಿ ಮಾಜಿ ನಿರ್ದೇಶಕ ಜಿ.ಜಿ. ಕಾವೇರಪ್ಪ, ಪ್ರಮುಖರಾದ ಹಾನಗಲ್ ಮಿಥುನ್, ಜೆ.ಸಿ. ಜಗದೀಶ್ ಮಂಟಪ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಿಟ್ಟಂಗಾಲದಲ್ಲಿ ಕಾಡಾನೆಗಳ ದಾಳಿ: ಭತ್ತದ ಫಸಲು ನಾಶ




ಗೋಣಿಕೊಪ್ಪ, ಅ.15– ಬಿಟ್ಟಂಗಾಲದಲ್ಲಿ ಕಾಡಾನೆಗಳ ದಾಳಿಗೆ ಸುಮಾರು ಒಂದು ಎಕರೆ ಭತ್ತದ ಬೆಳೆ ನಾಶವಾಗಿದೆ.

ಗ್ರಾಮದ ರಾಮಚಂದ್ರ, ಅರುಣ, ರವೀಂದ್ರ ಎಂಬುವರಿಗೆ ಸೇರಿದ ಭತ್ತದ ಗದ್ದೆಗಳಿಗೆ ಸುಮಾರು 15 ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ದಾಳಿ ನಡೆಸಿವೆ. ಒಂದು ಏಕರೆಯಷ್ಟು ಜಾಗದಲ್ಲಿ ಬೆಳೆದಿದ್ದ ಭತ್ತದ ಪೈರುಗಳನ್ನು ತುಳಿದು ಧ್ವಂಸಗೊಳಿಸಿವೆ. ಬೆಳಗ್ಗೆ ಸಮಯದಲ್ಲಿ ಅರಣ್ಯ ಇಲಾಖೆ ಕಾಡಾನೆಗಳನ್ನು ಕಾಡಿಗಟ್ಟಿದರೂ ರಾತ್ರಿ ಹಿಂತುರಿಗಿ ಬಂದು ದಾಳಿ ಮಾಡಿವೆ ಬೆಳೆ ಉಳಿಸಿಕೊಳ್ಳಲು ರೈತರು ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಂಡು ಹಗಲು ರಾತ್ರಿ ಎನ್ನದೆ ಕಾಯುತ್ತಿದ್ದರೂ ದಾಳಿಯಿಂದ ಬೆಳೆಯನ್ನು ಉಳಿಸಿಕೊಳ್ಳಲು ಹರಸಾಹಸ ಪಡುವಂತಾಗಿದೆ. ಭತ್ತದ ಬೆಳೆ ಹಾನಿಗೊಂಡ ಸ್ಥಳಕ್ಕೆ ರೈತ ಸಂಘದ ಪದಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ರೈತ ಸಂಘದ ಒಂದನೇ ರುದ್ರುಪ್ಪೆಯ ಅಧ್ಯಕ್ಷ ಕೊಕ್ಕೆರ ಅಯ್ಯಣ್ಣ ಮಾತನಾಡಿ, ಅರಣ್ಯ ಸಿಬ್ಬಂದಿ ಹಗಲಿನಲ್ಲಿ ಕಾಡಾನೆಗಳನ್ನು ಕಾಡಿಗಟ್ಟಿದರೇ, ಮತ್ತೆ ರಾತ್ರಿ ಮರಳಿ ಬೆಳೆ ನಾಶಪಡಿಸುತ್ತಿವೆ. ಈ ವ್ಯಾಪ್ತಿಯಲ್ಲಿ ಸೋಲಾರ್ ಬೇಲಿ ನಿರ್ವಹಣೆ ಇಲ್ಲದ ಕಾರಣ ಕಾಡಾನೆಗಳು ಕೃಷಿ ಪ್ರದೇಶಗಳಿಗೆ ದಾಳಿ ನಡೆಸುತ್ತಿದ್ದು, ಸೋಲಾರ್ ಬೇಲಿ ನಿರ್ವಹಣೆ ಬಗ್ಗೆ ಕ್ಷೇತ್ರದ ಶಾಸಕರು ಅರಣ್ಯ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಗ್ರಾಮಸ್ಥರಾದ ರಾಮಚಂದ್ರ, ಅರುಣ, ರವೀಂದ್ರ, ಸೀತಾರಾಮ ಇದ್ದರು.

ಹುಲಿ ಸೆರೆಗೆ ಮುಂದುವರೆದ ಕೂಂಬಿಂಗ್ ಕಾರ್ಯಾಚರಣೆ

- ಕೆಲಸ ಬಿಟ್ಟು ಮನೆಗೆ ಹಿಂತಿರುಗಿದ ಕೂಲಿ ಕಾರ್ಮಿಕರು
- ಸಿಗದ ಹುಲಿ, ಆತಂಕದಲ್ಲಿ ಸಾರ್ವಜನಿಕರು



ಸಿದ್ದಾಪುರ, ಅ.15(ಮುಬಾರಕ್)– ಕರಡಿಗೋಡು ಭಾಗದ ಕಾಫಿ ತೋಟಗಳಲ್ಲಿ ಮತ್ತೆ ಹುಲಿಯ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು, ಕಾರ್ಮಿಕರು ಮತ್ತು ಸಾರ್ವಜನಿಕರು ಆತಂಕಗೊಂಡಿದ್ದಾರೆ.

ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿಗಳು ಕರಡಿಗೋಡು, ಶಿಲ್ಪಿ, ಹೇರೂರು, ಚಿಕ್ಕನಹಳ್ಳಿ ಭಾಗದ ಕಾಫಿ ತೋಟಗಳಲ್ಲಿ ಹುಲಿಯ ಹೆಜ್ಜೆ ಗುರುತು ಜಾಡು ಹಿಡಿದು ಎರಡನೇ ದಿನವೂ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರು. ಹುಲಿ ಪತ್ತೆಯಾಗಲಿಲ್ಲ. ದುಬಾರೆ ಅರಣ್ಯದಿಂದ ರಾತ್ರಿ ವೇಳೆಯಲ್ಲಿ ಕರಡಿಗೋಡು ಗ್ರಾಮ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಸಂಚರಿಸಿ ಮತ್ತೆ ಮರಳಿ ಹಿಂತಿರುಗುತ್ತಿದೆ ಎಂದು ಹೇಳಲಾಗುತ್ತಿದೆ.

ಶನಿವಾರ ಕಾಫಿ ತೋಟಕ್ಕೆ ತೆರಳಿದ ಕಾರ್ಮಿಕರಿಗೇ ಕೆರೆಯೊಂದರ ಬಳಿ ಹುಲಿಯ ಹೆಜ್ಜೆ ಗುರುತು ಪತ್ತೆಯಾದ ಹಿನ್ನೆಲೆಯಲ್ಲಿ ಕೆಲಸ ಬಿಟ್ಟು ಮನೆಗೆ ಹಿಂತಿರುಗಿದ್ದಾರೆ. ಇತರ ಕೆಲವು ಕಾಫಿ ತೋಟಗಳಲ್ಲಿ ತೋಟದ ಮಾಲೀಕರೇ ಕಾರ್ಮಿಕರಿಗೆ ರಕ್ಷಣೆ ನೀಡುವ ಮೂಲಕ ಕೆಲಸ ನಿರ್ವಹಿಸಿದ್ದಾರೆ.

ಅರಣ್ಯ ಇಲಾಖೆಯಿಂದ ಕರಡಿಗೋಡು ಶಾಲೆ ಬಳಿಯ ಮುಖ್ಯ ರಸ್ತೆ ಬದಿಯಲ್ಲಿ ಎಲ್‌ಇಡಿ ಸೂಚನಾ ನಾಮಫಲಕವನ್ನು ಅಳವಡಿಸಲಾಗಿದ್ದು, ಕಾಡು ಪ್ರಾಣಿಗಳಿವೆ ಎಚ್ಚರದಿಂದಿರಿ ಎಂಬ ಸಂದೇಶ ರವಾನಿಸಿದ್ದಾರೆ. ಇದರಿಂದ ಬೆಳೆಗಾರರು, ಕಾರ್ಮಿಕರು, ಸಾರ್ವಜನಿಕರು ರಸ್ತೆಯಲ್ಲಿ ಸಂಚರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಸಿದ್ದಾಪುರ ಸುತ್ತಮುತ್ತಲ ಭಾಗಗಳಿಂದ ಕರಡಿಗೋಡು ಗ್ರಾಮಕ್ಕೆ ಬಾಡಿಗೆ ವಾಹನಗಳು ಬರುತ್ತಿಲ್ಲ. ಆಸ್ಪತ್ರೆ ಸೇರಿದಂತೆ ತುರ್ತು ಸಂದರ್ಭದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಕಾಡಾನೆ ಹುಲಿ ಹಾವಳಿಯ ಸಮಸ್ಯೆ ಎದುರಿಸುತ್ತಿರುವ ಜನರಿಗೆ ಅರಣ್ಯ ಇಲಾಖೆಯಿಂದ ವಾಹನ ವ್ಯವಸ್ಥೆ ಕಲ್ಪಿಸಬೇಕೆಂದು ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಕರ್ಪಯ್ಯ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಕಾಫಿ ಬೆಳೆಗಾರ ಕುಕ್ಕನೂರು ಚಂದ್ರಶೇಖರ್ ಮಾತನಾಡಿ, ನಿರಂತರ ಕಾಡಾನೆ ಹಾವಳಿಯಿಂದ ಕೃಷಿ ಪಸಲು ನಾಶವಾಗುವ ಮೂಲಕ ಅಪಾರ ನಷ್ಟ ಉಂಟಾಗುತ್ತಿದೆ. ವರ್ಷವಿಡಿ ಕಷ್ಟಪಟ್ಟು ಬೆಳೆದ ಫಸಲುಗಳು ಪ್ರಾಣಿಗಳ ಪಾಲಾಗುತ್ತಿವೆ. ಕಾರ್ಮಿಕರು ಕೆಲಸಕ್ಕೆ ತೆರಳಲು ಭಯಪಡುತ್ತಿದ್ದಾರೆ. ನೆಮ್ಮದಿಯಾಗಿ ರಸ್ತೆಯಲ್ಲಿ ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದಷ್ಟು ಬೇಗ ಅರಣ್ಯ ಇಲಾಖೆ ಹುಲಿ ಆನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದರು. ಈ ಸಂದರ್ಭ ಕೊಡಗು ಜಿಲ್ಲಾ ರೈತ ಸಂಘದ ಅಧ್ಯಕ್ಷ ಮನು ಸೋಮಯ್ಯ, ಸ್ಥಳೀಯರಾದ ಸುರೇಶ್, ಅನೀಲ್, ಮುತ್ತು ರಾಜ್, ಕಾರ್ತಿಕ್, ರಾಜೇಶ್, ಮುಸ್ತಫ, ಸನ್ನು ಕುಕುನೂರು, ಸುಲೈಮಾನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕೋಟಿ ಬಂದರೂ ಹೆಸರಾಂತ ಕಲಾವಿದರಿಗೆ ಇಲ್ಲ ಆಹ್ವಾನ

ಚಾಮರಾಜನಗರ, ಅ.15– ಈ ಬಾರಿ ಜಿಲ್ಲಾ ಕೇಂದ್ರದಲ್ಲಿ ನಾಲ್ಕು ದಿನಗಳ ಕಾಲ ಆಯೋಜಿಸಿರುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಾಜ್ಯದ ಹೆಸರಾಂತ ಕಲಾವಿದರನ್ನು ಆಹ್ವಾನಿಸಿಲ್ಲ.

ಕಳೆದ 10 ವರ್ಷಗಳಿಂದ ಜಿಲ್ಲೆಯಲ್ಲಿ ದಸರಾ ಆಚರಿಸಿಕೊಂಡು ಬರಲಾಗುತ್ತಿದ್ದು, ಆ ವೇಳೆ ಜಿಲ್ಲೆಗೆ ಬರುತ್ತಿದ್ದ ಕಡಿಮೆ ಅನುದಾನದಲ್ಲಿಯೇ ಸ್ಥಳೀಯ ಕಲಾವಿದರೊಂದಿಗೆ ರಾಜ್ಯದ ಹೆಸರಾಂತ ಕಲಾವಿದರನ್ನು ಆಹ್ವಾನಿಸಲಾಗುತ್ತಿತ್ತು. ಆದರೆ, ಈ ಬಾರಿ ಸರ್ಕಾರದಿಂದ ಒಂದು ಕೋಟಿ ಅನುದಾನ ನೀಡಿದ್ದರೂ ಕೂಡ ಕಾರ್ಯಕ್ರಮವನ್ನು ಸ್ಥಳೀಯ ಕಲಾವಿದರಿಗಷ್ಟೇ ಸೀಮಿತಗೊಳಿಸಲಾಗಿದೆ.

ಈ ಹಿಂದೆ ನಗರದಲ್ಲಿ ನಡೆದಿದ್ದ ದಸರಾ ಮಹೋತ್ಸವದಲ್ಲಿ ರಾಜ್ಯದ ಹೆಸರಾಂತ ಗಾಯಕರಾದ ವಿಜಯಪ್ರಕಾಶ್, ಅರ್ಜುನ್ ಜನ್ಯ, ರಾಜೇಶ್ ಕೃಷ್ಣನ್, ಮಂಗ್ಲಿ, ಎಂ.ಡಿ. ಪಲ್ಲವಿ ಸೇರಿದಂತೆ ಹೊರ ಜಿಲ್ಲೆ ಹಾಗೂ ರಾಜ್ಯದಿಂದ ಖ್ಯಾತ ಗಾಯಕರು, ಕಲಾವಿದರ ಕಾರ್ಯಕ್ರಮಗಳು ನಡೆಯುತ್ತಿತ್ತು. ಹೀಗಾಗಿ ಸಾವಿರಾರು ಪ್ರೇಕ್ಷಕರು ಕಾರ್ಯಕ್ರಮ ನೋಡಲು ಕಿಕ್ಕಿರಿದು ಸೇರುತ್ತಿದ್ದರು. ಆದರೆ, ಈ ಬಾರಿ ಹೊರ ಜಿಲ್ಲೆಯ ಕಲಾವಿದರಿಗೆ ಆಹ್ವಾನ ನೀಡದಿರುವುದು ಪ್ರೇಕ್ಷಕರಿಗೆ ನಿರಾಸೆ ಮೂಡಿಸಿದೆ.

316 ಅರ್ಜಿ ಸಲ್ಲಿಕೆ: ಈ ಬಾರಿಯ ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಜಿಲ್ಲೆಯ 316 ಕಲಾವಿದರ ತಂಡದಿಂದ ಅರ್ಜಿ ಸಲ್ಲಿಕೆಯಾಗಿದ್ದು, ಎಲ್ಲಾ ತಂಡಗಳಿಗೂ ಅವಕಾಶ ನೀಡಲಾಗಿದೆ. ಅಲ್ಲದೇ ಅವರ ಸಂಭಾವನೆಯನ್ನು ಹೆಚ್ಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಮಾಹಿತಿ ನೀಡಿದರು.

ದಸರಾ ಕಾರ್ಯಕ್ರಮ ಆಯೋಜನೆ ಸಂಬಂಧ ಈಗಾಗಲೇ ಹಲವು ಸಭೆಗಳನ್ನು ನಡೆಸಲಾಗಿದ್ದು, ಈ ವೇಳೆ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಬೇಕೆನ್ನುವ ಸಲಹೆಗಳನ್ನು ಪರಿಗಣಿಸಿ, ಜಿಲ್ಲೆಯ ಎಲ್ಲಾ ಕಲಾತಂಡಗಳಿಗೂ ಅವಕಾಶ ನೀಡಲಾಗಿದೆ. ಹೀಗಾಗಿ, ಹೊರ ಜಿಲ್ಲೆಯ ಕಲಾವಿದರನ್ನು ಆಹ್ವಾನಿಸಿಲ್ಲ. ಈ ಸಂಬಂಧ ಮತ್ತೊಮ್ಮೆ ಶಾಸಕರು, ಸಚಿವರೊಂದಿಗೆ ಚರ್ಚಿಸಿ, ಅಂತಿಮ ದಿನ ಹೊರ ಜಿಲ್ಲೆಯ ಕಲಾವಿದರನ್ನು ಆಹ್ವಾನಿಸಲಾಗುವುದು ಎಂದರು.

ನಾಳೆ ಚಾ.ನಗರ ದಸರಾಗೆ ಚಾಲನೆ

ಚಾಮರಾಜನಗರ, ಅ.15– ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಸಮಿತಿ ವತಿಯಿಂದ ಜಿಲ್ಲೆಯಲ್ಲಿ 4 ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಅ.17ರಂದು ಚಾಲನೆಗೊಳ್ಳಲಿದೆ.

ಮಂಗಳವಾರ ಬೆಳಗ್ಗೆ 10.15 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಸಾಂಪ್ರದಾಯಿಕ ಪೂಜಾ ಕೈಂಕರ್ಯದೊಂದಿಗೆ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. 11 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ದಸರಾ ಕವಿಗೋಷ್ಠಿ ನಡೆಯಲಿದೆ.

11.15 ಗಂಟೆಗೆ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಜಿಲ್ಲೆಯ ವಿವಿಧ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳ ಉದ್ಘಾಟನೆ ಹಮ್ಮಿಕೊಳ್ಳಲಾಗಿದೆ. 11.30 ಗಂಟೆಗೆ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಮಧ್ಯಾಹ್ನ 2.30 ಗಂಟೆಗೆ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಶ್ರೀ ಚಾಮುಂಡೇಶ್ವರಿ ವಿಗ್ರಹದೊಂದಿಗೆ ದಸರಾ ಮೆರವಣಿಗೆಗೆ ಜಿಲ್ಲೆಯ ವಿವಿಧ ಕಲಾತಂಡಗಳು, ವಿವಿಧ ಇಲಾಖೆಗಳ ಸ್ತಬ್ಧಚಿತ್ರಗಳ (ಟ್ಯಾಬ್ಲೋ) ಮೆರವಣಿಗೆಗೆ ಚಾಲನೆ ನೀಡಲಾಗುವುದು. ಸಂಜೆ 5.30 ಗಂಟೆಗೆ ಚಾಮರಾಜೇಶ್ವಸ್ವಾಮಿ ದೇವಾಲಯ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್, ಶಾಸಕ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ. ತಿಮ್ಮಯ್ಯ, ಮರಿತಿಬ್ಬೇಗೌಡ, ಮಧು. ಜಿ. ಮಾದೇಗೌಡ, ಸಿ.ಎನ್. ಮಂಜೇಗೌಡ, ನಗರಸಭಾ ಸದಸ್ಯ ಅಬ್ರಾರ್ ಅಹಮದ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಅ.18ರಂದು ಬೆಳಿಗ್ಗೆ 6.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಾಲಯ ಅವರಣದಲ್ಲಿ ದಸರಾ ಮ್ಯಾರಥಾನ್ ಕಾರ್ಯಕ್ರಮ ಆಯೋಜಿಸಲಾಗಿದೆ. 10.30 ಗಂಟೆಗೆ ಮಹಿಳಾ ದಸರಾ ಕಾರ್ಯಕ್ರಮ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ವೇದಿಕೆಯಲ್ಲಿ ನಡೆಯಲಿದೆ. 11 ರಿಂದ 6 ಗಂಟೆಯವರೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಾಟಕೋತ್ಸವ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9.45ರವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಅ. 19ರಂದು ಬೆಳಿಗ್ಗೆ 10 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ರೈತ ದಸರಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. 11 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರೈತ ದಸರಾ ವೇದಿಕೆ ಕಾರ್ಯಕ್ರಮ ನಡೆಯಲಿದೆ. 11ರಿಂದ 6 ಗಂಟೆಯವರೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9.45ರವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ವೇದಿಕೆಯಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

ಅ. 20ರಂದು ಬೆಳಿಗ್ಗೆ 11ರಿಂದ 6 ಗಂಟೆಯವರೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9.45ರವರೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಜಗಮಗಿಸಲಿದೆ ಚಾಮರಾಜನಗರ



ಚಾಮರಾಜನಗರ, ಅ.15– ಚಾಮರಾಜನಗರ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳ ಪ್ರಮುಖ ವೃತ್ತಗಳು, ರಸ್ತೆಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ರಾಮಸಮುದ್ರದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯಿಂದ ಭುವನೇಶ್ವರಿ ವೃತ್ತದವರೆಗೂ, ಗುಂಡ್ಲುಪೇಟೆ ವೃತ್ತದಿಂದ ಸಂತೇಮರಹಳ್ಳಿ ವೃತ್ತದವರೆವಿಗೂ, ಡಿವಿಯೇಷನ್ ರಸ್ತೆ ಸೇರಿದಂತೆ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು ಎಂದರು.

ಅಲ್ಲದೇ ಚಾಮರಾಜೇಶ್ವರಸ್ವಾಮಿ ದೇವಾಲಯ, ಜಿಲ್ಲಾಡಳಿತ ಭವನ, ಸೆಸ್ಕಾಂ ಇಲಾಖೆ, ನಗರಸಭೆ ಸೇರಿದಂತೆ ಸರ್ಕಾರಿ ಕಚೇರಿಗಳು, ಪ್ರಮುಖ ಸ್ಥಳಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ. ಜೊತೆಗೆ, ಸ್ಥಳೀಯ ಸಂಘ– ಸಂಸ್ಥೆಗಳು, ಖಾಸಗಿ ಅಂಗಡಿ ಮಾಲೀಕರು ಕೂಡ ದೀಪಾಲಂಕಾರ ಮಾಡುವುದಾಗಿ ತಿಳಿಸಿದ್ದಾರೆ ಎಂದರು. ಚಾಮರಾಜನಗರ ಮಾತ್ರವಲ್ಲದೇ ಗುಂಡ್ಲುಪೇಟೆಯಲ್ಲಿ ಊಟಿ ಮುಖ್ಯ ರಸ್ತೆ ಮತ್ತು ಪ್ರಮುಖ ವೃತ್ತ, ಯಳಂದೂರಿನಲ್ಲಿ ತಾಲೂಕು ಪಂಚಾಯಿ ಕಚೇರಿವರೆವಿಗೆ, ಕೊಳ್ಳೇಗಾಲದಲ್ಲಿ ಬೆಂಗಳೂರು ಮುಖ್ಯ ರಸ್ತೆ, ಹನೂರಿನಲ್ಲಿ ಮಹದೇಶ್ವರಬೆಟ್ಟದ ಮುಖ್ಯ ರಸ್ತೆ ಹಾಗೂ ಪ್ರಮುಖ ವೃತ್ತದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಮುಂದುವರೆದ ರೈತರ ಅಹೋರಾತ್ರಿ ಧರಣಿ

7 ಗಂಟೆಗಳ ಕಾಲ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡುವಂತೆ ಪಟ್ಟು



ಚಾಮರಾಜನಗರ, ಅ.15– 7 ಗಂಟೆಗಳ ಕಾಲ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಬೇಕೆಂದು ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ನಡೆಸುತ್ತಿರುವ ಅಹೋರಾತ್ರಿ ಧರಣಿಯು 6ನೇ ದಿನವಾದ ಭಾನುವಾರವೂ ಮುಂದುವರಿಯಿತು.

ಪ್ರತಿಭಟನಾ ಸ್ಥಳಕ್ಕೆ ಶನಿವಾರ ಬೆಳಗ್ಗೆ ಮೈಸೂರು ವಿಭಾಗದ ಸೆಸ್ಕ್ ಹೆಚ್.ಡಿ ಶ್ರೀಧರ್ ಭೇಟಿ ನೀಡಿ, ಸರ್ಕಾರ 5 ಗಂಟೆಗಳ ಕಾಲ ವಿದ್ಯುತ್ ನೀಡಲು ಆದೇಶಿಸಿದ್ದು, ಇದರಂತೆ 5 ಗಂಟೆ ವಿದ್ಯುತ್ ನೀಡಲಾಗುವುದು ಪ್ರತಿಭಟನೆಯನ್ನು ಕೈ ಬಿಡುವಂತೆ ಮನವೊಲಿಸಲೆತ್ನಿಸಿದರು. ಆದರೆ, ರೈತರು 7 ಗಂಟೆಗಳ ಕಾಲ ವಿದ್ಯುತ್ ನೀಡಬೇಕು. ಅಲ್ಲಿಯವರೆಗೂ ನಮ್ಮ ಪ್ರತಿಭಟನೆಯನ್ನು ಹಿಂಪಡೆಯುವುದಿಲ್ಲ. ರೈತರ ಬೇಡಿಕೆಯನ್ನು ಸರ್ಕಾರಕ್ಕೆ ತಿಳಿಸುವಂತೆ ಒತ್ತಾಯಿಸಿದರು. ನಂತರ ಅಹೋರಾತ್ರಿ ಪ್ರತಿಭಟನೆಯನ್ನು ಮುಂದುವರಿಸಿದ್ದಾರೆ.

ಹನೂರು ಶಾಸಕ ಮಂಜುನಾಥ್ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಶುಕ್ರವಾರ ರಾತ್ರಿ ಹನೂರು ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಭೇಟಿ ನೀಡಿ, ರೈತರ ಅಹವಾಲು ಆಲಿಸಿದರು. ನಂತರ ರೈತರ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು. ಸ್ಥಳದಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿಯ ಮೂಲಕ ಕರೆ ಮಾಡಿ ಆದಷ್ಟು ಬೇಗ ಸಮಸ್ಯೆ ಬಗೆಹರಿಸುವಂತೆ ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್, ಜಿಲ್ಲಾಧ್ಯಕ್ಷ ಹೆಬ್ಬಸೂರು ಬಸವಣ್ಣ, ಗೌಡೆಗೌಡ, ಸಿದ್ದರಾಜು, ರಮೇಶ್, ಸೋಮಶೇಖರ್ ಆಲೂರು ಸಂತೋಷ್, ಮಹದೇವಸ್ವಾಮಿ, ಚಿನ್ನಸ್ವಾಮಿ, ರಾಜೇಂದ್ರ ಇದ್ದರು.

ಮಾಜಿ ಶಾಸಕ ಎನ್. ಮಹೇಶ್ ಭೇಟಿ: ಕೊಳ್ಳೇಗಾಲದ ಮಾಜಿ ಶಾಸಕ ಎನ್. ಮಹೇಶ್ ಸ್ಥಳಕ್ಕೆ ಭೇಟಿ ನೀಡಿ ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ನಂತರ ಮಾತನಾಡಿ, ರಾಜ್ಯ ಸರ್ಕಾರ ಕೃಷಿಗೆ 10 ಗಂಟೆ ವಿದ್ಯುತ್ ನೀಡಬೇಕು. ಅಲ್ಲದೆ ಸರ್ಕಾರವೇ ಪ್ರತಿದಿನ ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ವಿದ್ಯುತ್ ಕೊಡುವುದಾಗಿ ಆದೇಶ ಮಾಡಿತ್ತು. ಅದು ಈಗ ಉಲ್ಲಂಘನೆಯಾಗಿದೆ. ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಆಹಾರ ಉತ್ಪಾದನೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಆಹಾರ ಉತ್ಪಾದನೆ ಕೊರತೆಯಾಗುತ್ತದೆ. ಇವೆಲ್ಲವೂ ಗೊತ್ತಿದ್ದರೂ ಸರ್ಕಾರ ಎಚ್ಚರಗೊಂಡಿಲ್ಲ ಎಂದು ದೂರಿದರು.

ಕಾವೇರಿ ನೀರು ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಎಷ್ಟು ಸೋತಿದೆಯೋ ಅಷ್ಟೇ ಸೋಲು ವಿದ್ಯುತ್ ವಿಚಾರದಲ್ಲೂ ಆಗಿದೆ. ಬರಗಾಲ ಬರುತ್ತದೆ ಎಂದು ತಜ್ಞರು ಮೇ, ಜೂನ್‌ನಲ್ಲಿ ಹೇಳಿದ್ದರು. ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಮುನ್ನೆಚ್ಚರಿಕೆ ವಹಿಸಲಿಲ್ಲ. ಈಗ ಸಿದ್ಧತೆ ಮಾಡಿಕೊಳ್ಳಲು ಹೊರಟಿದ್ದಾರೆ. ಆದುದರಿಂದ ಇಂದಿನ ಎಲ್ಲಾ ಸಮಸ್ಯೆಗಳಿಗೂ ಸರ್ಕಾರವೇ ಕಾರಣವಾಗಿದೆ ಎಂದು ವಾಗ್ದಾಳಿ ನಡೆಸಿದರು.

ಈ ವೇಳೆ ವಕೀಲ ರಾಜೇಂದ್ರ, ಸೋಮಣ್ಣ ಉಪ್ಪಾರ್, ಪರ್ವತ್‌ರಾಜು, ಹೊನ್ನೂರು ಪ್ರಕಾಶ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ನಾಗರಾಜು, ಮಹದೇವಪ್ಪ, ಮಹೇಶ್ ಕುಮಾರ್, ನಾಗೇಂದ್ರ, ಮಹೇಶ್ ಸೇರಿದಂತೆ ಇನ್ನಿತರರಿದ್ದರು.

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಅವ್ಯವಹಾರ

ಇಬ್ಬರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು

ಕೊಳ್ಳೇಗಾಲ, ಅ.15– ಕೊಳ್ಳೇಗಾಲ ಪಟ್ಟಣದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಹಣ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ಕಾರ್ಯದರ್ಶಿ ಮತ್ತು ನೌಕರನೊಬ್ಬನ ವಿರುದ್ದ ಐದು ವರ್ಷದ ಬಳಿಕ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ಹಾಲಿ ಪ್ರಭಾರಿ ಕಾರ್ಯದರ್ಶಿ ಲಿಂಗರಾಜು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಹಿಂದಿನ ಪ್ರಭಾರಿ ಕಾರ್ಯದರ್ಶಿ ಲೂಸಿ ಫ್ಲೋರಿನಾ, ನೌಕರ ಕೃಷ್ಣ ಅಲಿಯಾಸ್ ಕೃಷ್ಣಶೆಟ್ಟಿ ಎಂಬುವರ ಮೇಲೆ ಕ್ರಿಮಿನಲ್ ಮೊಕದ್ದಮೆ ಕಲಂ ಸಂಖ್ಯೆ 420, 406,ರೆ.34.ಐಪಿಸಿ ಕಲಂರಡಿ ಪ್ರಕರಣ ದಾಖಲಾಗಿದೆ.

ಅವ್ಯವಹಾರ ತಡೆಯದೆ ಲೋಪ ಎಸಗಿದ ಹಿನ್ನೆಲೆ ಹಾಗೂ ಮಾರಾಟದ ಬಾಬ್ತು ಹಣ ಪಾವತಿಸದೆ. ಕರ್ತವ್ಯ ಲೋಪವೆಸಗಿದ್ದರಿಂದ ಇಬ್ಬರ ಮೇಲೂ ಕ್ರಮಕ್ಕೆ ಹಾಲಿ ಪ್ರಭಾರಿ ಕಾರ್ಯದರ್ಶಿಗಳು ಮನವಿ ಮಾಡಿದ್ದಾರೆ.

2018, 19ನೇ ಸಾಲಿನಲ್ಲಿ ತೊಗರಿ ಬೇಳೆ ಮಾರಾಟದ ಬಾಬ್ತು 2.31.835ಲಕ್ಷ ರೂಗಳು, ಸೀಮೆಎಣ್ಣೆ ಮಾರಾಟದ ಬಾಬ್ತು 63,685 ರೂ., ಖಾಲಿ ಗೋಣಿ ಚೀಲ ಮಾರಾಟದ ಬಾಬ್ತು 36.696 ರೂ. ಸೇರಿದಂತೆ ಒಟ್ಟು 3.32.206 ಲಕ್ಷ ರೂಗಳು ಹಾಗೂ 2019 ಮತ್ತು 2020ನೇ ಸಾಲಿನಲ್ಲಿ ಬೆಳೆ ಮಾರಾಟದ ಬಾಬ್ತು 36 ಸಾವಿರ, ಗೋಣಿ ಚೀಲದ ಬಾಬ್ತು 32ಸಾವಿರ ಸೇರಿ 68 ಸಾವಿರ ಒಳಗೊಂಡಂತೆ ನಾಲ್ಕು ಲಕ್ಷ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಕಲಂ 64ರಡಿ ಈ ಸಂಬಂಧ ವಿಚಾರಣಾ ವರದಿ ಪಡೆಯಲಾಗಿದ್ದು, 2018–2019ನೇ ಸಾಲು, 2019–2020ನೇ ಸಾಲು, 2020–2021ನೇ ಸಾಲಿನಲ್ಲಿ ವರದಿ ಅನ್ವಯ ಕೃಷ್ಣ ಹಣ ದುರುಪಯೋಗ ಪಡಿಸಿಕೊಂಡಿರುವುದು ಸಾಬೀತಾಗಿದೆ. 25–1–2023ರಲ್ಲಿ ವರದಿ ಅನ್ವಯ ಕೃಷ್ಣಶೆಟ್ಟಿ 4 ಲಕ್ಷದ ಹಣ ಸಂಸ್ಥೆಗೆ ಪಾವತಿಸಿದ್ದಾರೆ. ಈ ಮೊತ್ತದ ಮೇಲೆ 2018 ರಿಂದ 2023ನೇ ಸಾಲಿನ ತನಕ ಶೇಕಡ 18ರ ಬಡ್ಡಿಯಂತೆ ಇನ್ನು ಸಹಾ 2.76 ಲಕ್ಷ ರೂಗಳನ್ನು ಪಾವತಿಸಬೇಕಿದ್ದು ಬಡ್ಡಿ ಪಾವತಿಸಲು ವಿಫಲರಾಗಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಅಲ್ಲದೆ ಹಿಂದಿನ ಪ್ರಭಾರಿ ಕಾರ್ಯದರ್ಶಿ ಲೂಸಿ ಅವರು, ನೌಕರರ ಮೇಲೆ ನಿಯಂತ್ರಣವಿಡದೆ ಪ್ರತಿ ಮಾಹೆ ವ್ಯವಹಾರದ ವಿವರ ಪಡೆಯದೆ ಪರೋಕ್ಷವಾಗಿ ಸಂಘದ ಹಣ ದುರ್ಬಳಕೆಗೆ ಕಾರಣಕರ್ತರಾಗಿದ್ದು ಈ ಸಂಬಂಧ ಲೂಸಿ ಫ್ಲೋರಿನಾ, ನೌಕರ ಕೃಷ್ಣಶೆಟ್ಟಿ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಲಿಂಗರಾಜು ದೂರು ಸಲ್ಲಿಸಿದ್ದಾರೆ

ಅ.18, ದಸರಾ ಅಂಗವಾಗಿ ಮ್ಯಾರಥಾನ್

ಚಾಮರಾಜನಗರ, ಅ.15– ಚಾಮರಾಜನಗರ ದಸರಾ ಆಚರಣೆ ಅಂಗವಾಗಿ ಪಾರಂಪರಿಕ ನಡಿಗೆ ಮ್ಯಾರಥಾನ್ ಅನ್ನು ಅ.18ರಂದು ಬೆಳಿಗ್ಗೆ 7 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಹಮ್ಮಿಕೊಳ್ಳಲಾಗಿದೆ.

ಮ್ಯಾರಥಾನ್ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಬಿ. ರಾಚಯ್ಯ ಜೋಡಿ ರಸ್ತೆ, ನ್ಯಾಯಾಲಯ ರಸ್ತೆ, ಕರಿನಂಜನಪುರ ರಸ್ತೆ ಮೂಲಕ ಹಾದು ಪ್ರವಾಸಿ ಮಂದಿರದಲ್ಲಿ ಕೊನೆಗೊಳ್ಳಲಿದೆ. ಮ್ಯಾರಥಾನ್ ಕಾರ್ಯಕ್ರಮದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಮ್ಯಾರಥಾನ್ ಮತ್ತು ಯುವ ದಸರಾ ಕಾರ್ಯಕ್ರಮಗಳ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವಡಿ ಆಡಳಿತ ಸ್ಮರಿಸುವ ಮಹತ್ವದ ಆಚರಣೆಯೇ ದಸರಾ ಮಹೋತ್ಸವ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ



ಮೈಸೂರು,ಅ.15(ಆರ್‌ಕೆ)– ವಿಜಯ ನಗರ ಸಾಮ್ರಾಜ್ಯದ ವೈಭವ ನೆನೆಯುತ್ತಾ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತವನ್ನು ಸ್ಮರಿಸುವ ಮಹತ್ವದ ಆಚರಣೆಯೇ ಮೈಸೂರು ದಸರಾ ಮಹೋತ್ಸವ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಡೆದ ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಅವರು, ಇಂತಹ ಐತಿಹಾಸಿಕ ದಸರಾ ಉತ್ಸವಕ್ಕೆ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರು ಚಾಲನೆ ನೀಡಿರುವುದು ಸಂತಸದ ವಿಚಾರ ಎಂದರು.

ಹಿಂದೆ ರಾಜರ ಆಳ್ವಿಕೆಯಲ್ಲಿ ಸಾಮ್ರಾಜ್ಯ ವಿಸ್ತರಣೆ, ಜನಪರ ನಿಲುವು ಸಾಕಾರಗೊಳಿಸಿದ್ದನ್ನು ವಿಜಯದಶಮಿ ಸಂದರ್ಭದಲ್ಲಿ ಜನರಿಗೆ ತಮ್ಮ ಸಾಧನೆಗಳನ್ನು ಹೇಳುವುದರೊಂದಿಗೆ ನಾಡಿನ ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ ಹಾಗೂ ಆಡಳಿತ ವೈಖರಿಗಳನ್ನು ಜನರ ಮನಸ್ಸಿಗೆ ಮುಟ್ಟಿಸುವಂತಹ ಮಹತ್ತರವಾದ ಆಚರಣೆಯಾಗಿದೆ ಎಂದು ಅವರು ತಿಳಿಸಿದರು.

ರಾಜರ್ಷಿ ನಾಲ್ವಡಿಯವರಿಗಿದ್ದ ಬದ್ಧತೆ, ಸಾಮಾಜಿಕ ಕಾಳಜಿ, ಜನಪರ ನಿಲುವು, ಜನರ ಮೇಲಿನ ಅನುಕಂಪವು ಮೆಚ್ಚುಗೆಗೆ ಪಾತ್ರವಾಗಿದೆ. ಅದರಂತೆ ಮೈಸೂರಿನ ಜನರು ಶಾಂತಿಪ್ರಿಯರು. ಕಾನೂನನ್ನು ಗೌರವಿಸುವ ಉತ್ತಮ ನಾಗರಿಕರು ಎಂದ ಡಾ.ಮಹದೇವಪ್ಪ, ನಮ್ಮ ಸರ್ಕಾರ ಸಂವಿಧಾನದ ಮಹತ್ವವನ್ನು ಶಾಲಾ–ಕಾಲೇಜುಗಳಲ್ಲಿ ಬೋಧಿಸಿ ಅರ್ಥೈಸುವಂತಹ ಐತಿಹಾಸಿಕ ನಿರ್ಧಾರ ಮಾಡಿ, ಅದರಂತೆ ಸೆ.15ರಂದು ಮುಖ್ಯಮಂತ್ರಿಗಳೇ ಸಂವಿಧಾನ ಬೋಧಿಸಿದರು ಎಂದರು.

ಮೈಸೂರು ಒಡೆಯರ್ ದೂರದೃಷ್ಟಿಯಂತೆ ರಾಜ್ಯವನ್ನು ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಜನರ ಅಭಿಪ್ರಾಯಗಳನ್ನು ಅಭಿವ್ಯಕ್ತಿಗೊಳಿಸುವ ಮೂಲಕ ರಾಷ್ಟ್ರವನ್ನು ಬಲಿಷ್ಠಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದ ಅವರು, ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಮೂಲಕ ಧಾರ್ಮಿಕ, ವೈಚಾರಿಕ, ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಎಲ್ಲರನ್ನೂ ಒಗ್ಗೂಡಿಸಿ ಸೌಹಾರ್ದ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ದಸರಾ ಮಹೋತ್ಸವ ಸಹಕಾರಿಯಾಗಲಿದೆ. ಆ ಮೂಲಕ ಸಂಸ್ಕೃತಿ ಹಾಗೂ ಬದುಕಿನ ಸಂದೇಶವನ್ನು ಎಲ್ಲರಿಗೂ ತಲುಪಿಸುವುದೇ ಈ ಉತ್ಸವದ ಉದ್ದೇಶವಾಗಿದೆ ಎಂದು ಡಾ.ಮಹದೇವಪ್ಪ ನುಡಿದರು.

ಇಂದು ಯುವರಾಜ ಕಾಲೇಜಿಗೆ ಸಿಎಂ ಭೇಟಿ

2028ಕ್ಕೆ ಕಾಲೇಜಿನ ಶತಮಾನೋತ್ಸವ ಹಿನ್ನೆಲೆಯಲ್ಲಿ ಹಳೇ ವಿದ್ಯಾರ್ಥಿಗಳೊಂದಿಗೆ ಪೂರ್ವಭಾವಿ ಸಭೆ

ಮೈಸೂರು, ಅ. 15(ಆರ್‌ಕೆ)– ಮೈಸೂರಿನ ಯುವರಾಜ ಕಾಲೇಜಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಅ. 16) ಬೆಳಗ್ಗೆ 11 ಗಂಟೆಗೆ ಭೇಟಿ ನೀಡುವರು.



2028ಕ್ಕೆ ಕಾಲೇಜು ಶತಮಾನೋತ್ಸವ ಆಚರಿಸಿಕೊಳ್ಳಲಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳು, ಯೋಜನೆಗಳ ಸಂಬಂಧ ಕಾಲೇಜಿನ ಹಳೇ ವಿದ್ಯಾರ್ಥಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರ್ವಭಾವಿ ಸಭೆ ನಡೆಸುವರು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಕಾಲೇಜಿನಲ್ಲಿ ಓದಿದ ಹಳೇ ವಿದ್ಯಾರ್ಥಿಗಳು, ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ವಿಭಾಗಗಳ ಮುಖ್ಯಸ್ಥರು ಸಭೆಯಲ್ಲಿ ಪಾಲ್ಗೊಂಡು ಶತಮಾನೋತ್ಸವದ ಸಿದ್ಧತೆ ಕುರಿತಂತೆ ಸಲಹೆ, ಅಭಿಪ್ರಾಯಗಳನ್ನು ತಿಳಿಸಲಿದ್ದಾರೆ ಎಂದು ಅವರು ಹೇಳಿದರು.

ಒಕ್ಕಲಿಗರ ಬಗ್ಗೆ ವಿವಾದಾತ್ಮಕ ಹೇಳಿಕೆ ಹಿನ್ನೆಲೆ

ದಸರಾ ಯುವ ಕವಿಗೋಷ್ಠಿ ಉದ್ಘಾಟನೆಗೆ ಭಗವಾನ್‌ಗೆ ಕೊಕ್

ಮೈಸೂರು, ಅ.15–ಮಹಿಷ ದಸರಾ ಕಾರ್ಯಕ್ರಮದಲ್ಲಿ ಒಕ್ಕಲಿಗರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದ ಪ್ರೊ. ಕೆ.ಎಸ್. ಭಗವಾನ್ ಅವರಿಗೆ ದಸರಾ ಯುವ ಕವಿಗೋಷ್ಠಿ ಉದ್ಘಾಟನಾ ಕಾರ್ಯಕ್ರಮಕ್ಕೆ ಕೊಕ್ ನೀಡಲಾಗಿದೆ.

ಜಿಲ್ಲಾ ಕಸಾಪ ಸ್ಪಂದನಾ ಸಾಂಸ್ಕೃತಿಕ ಪರಿಷತ್ ಸಂಯುಕ್ತಾಶ್ರಯದಲ್ಲಿ ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ನಾಳೆ (ಅ.16) ಬೆಳಗ್ಗೆ 10 ಗಂಟೆಗೆ ನಡೆಯಲಿರುವ 'ದಸರಾ ಯುವ ಕವಿಗೋಷ್ಠಿ'ಯನ್ನು ಪ್ರೊ. ಕೆ.ಎಸ್.ಭಗವಾನ್ ಉದ್ಘಾಟಿಸಬೇಕಾಗಿತ್ತು. ಆದರೆ ಒಕ್ಕಲಿಗರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಅವರ ಬದಲಿಗೆ ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ.ಡಿ.ಕೆ.ರಾಜೇಂದ್ರ ಕವಿಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸ್ಪಂದನಾ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಪ್ರೊ.ಕೆ.ಎಸ್.ಭಗವಾನ್ ಇತ್ತೀಚೆಗೆ ನಡೆದ ಮಹಿಷ ದಸರಾ ಸಮಾರಂಭದಲ್ಲಿ ಒಕ್ಕಲಿಗ ಸಮುದಾಯದ ಕುರಿತು ಅವಹೇಳನ ಮಾಡಿದ್ದರಿಂದ ಅವರ ವಿರುದ್ಧ ಒಕ್ಕಲಿಗ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ನಾಳೆ ನಡೆಯಲಿರುವ ದಸರಾ ಯುವ ಕವಿಗೋಷ್ಠಿಯ ಉದ್ಘಾಟನೆಗೆ ಆಗಮಿಸುವ ಪ್ರೊ.ಭಗವಾನ್ ವಿರುದ್ಧ ಜಿಲ್ಲಾ ಕನ್ನಡ ಸಾಹಿತ್ಯ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸುವ ನಿರ್ಧಾರವನ್ನು ಒಕ್ಕಲಿಗ ಸಂಘಟನೆಗಳು ಕೈಗೊಂಡಿದ್ದವು ಎಂದು ತಿಳಿಸಿದ್ದಾರೆ.

ದಸರಾ ಯುವ ಕವಿಗೋಷ್ಠಿಗೆ ಯಾವುದೇ ಚ್ಯುತಿ ಬರದಂತೆ ನಡೆಸುವ ಆಶಯದಿಂದ ಹಾಗೂ ಪ್ರೊ. ಕೆ.ಎಸ್.ಭಗವಾನ್ ಅವರ ಸುರಕ್ಷತೆ ದೃಷ್ಟಿಯಿಂದ ಭಗವಾನ್ ಅವರ ನಿವಾಸಕ್ಕೆ ತೆರಳಿ ಅವರಿಗೆ ಬಿಗುವಿನ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿಕೊಟ್ಟು ದಸರಾ ಯುವ ಕವಿಗೋಷ್ಠಿಯ ಉದ್ಘಾಟಕರನ್ನು ಬದಲಾಯಿಸಲಾಗಿದೆ. ನಾಳೆ ನಡೆಯಲಿರುವ ಕವಿಗೋಷ್ಠಿಯನ್ನು ಪ್ರೊ. ಡಿ.ಕೆ.ರಾಜೇಂದ್ರ ಉದ್ಘಾಟಿಸಲಿದ್ದಾರೆ ಎಂದು ಟಿ.ಸತೀಶ್ ಜವರೇಗೌಡ ತಿಳಿಸಿದ್ದಾರೆ.



ರಾಷ್ಟ್ರೀಯ ಅಂಚೆ ಸಪ್ತಾಹದ ಅಂಗವಾಗಿ ಆಯುಷ್ (ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಇಯರಿಂಗ್)ನಲ್ಲಿ ಅಂಚೆ ಇಲಾಖೆಯಿಂದ ಆಯೋಜಿಸಿದ್ದ ಅಂಚೆ ಚೀಟಿ ಪ್ರದರ್ಶನವನ್ನು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕಿ ಡಾ.ಏಂಜಲ್ ರಾಜ್ ಇತ್ತೀಚೆಗೆ ಉದ್ಘಾಟಿಸಿದರು. ಈ ವೇಳೆ ಆಯುಷ್‌ನ ಸಂಶೋಧನಾ ವಿಭಾಗದ ಡೀನ್ ಮಂಜುಳಾ, ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕ ಡಾ.ಅಮ್ಮಸಂದ್ರ ಸುರೇಶ್, ಅಂಚೆ ಚೀಟಿ ಸಂಗ್ರಾಹಕರಾದ ಎಸ್.ಸತೀಶ್ ಕುಮಾರ್, ನವ್ಯಶ್ರೀ, ತೊಳಸಿ, ಶ್ರೀಲಕ್ಷ್ಮಿ, ನಿವೇದಿತ, ಆಯುಷ್ ಜಿಮ್‌ಕಾನದ ಮೆಂಬರ್ ಸೆಕ್ರೆಟರಿ ಪ್ರಜೀಶ್ ಥಾಮಸ್, ಪೇಟೆಂಟ್ ವಿಭಾಗದ ಮುಖ್ಯಸ್ಥ ಶರತ್‌ಕುಮಾರ್ ಇದ್ದರು.

ಚಿನ್ನದ ಅಂಬಾರಿ ಹೊರುವ ಅಭಿಮನ್ಯುವಿನ ಸಾಮಾನ್ಯ ಜ್ಞಾನ ವಿವರಿಸಿದ ಹಂಸಲೇಖ

ಮೈಸೂರು, ಅ.15(ಬಿಎಲ್‌ಯು)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊರುವ ಅಭಿಮನ್ಯು ಬಗ್ಗೆ ದಸರಾ ಉದ್ಘಾಟಕರಾದ ಹಂಸಲೇಖ ಸ್ವಾರಸ್ಯಕರ ಸಂಗತಿಯೊಂದನ್ನು ವಿವರಿಸಿದರು. ಕಾಡಿನಲ್ಲಿ ಅಭಿಮನ್ಯು ಮರದ ದಿಮ್ಮಿಗಳನ್ನು ಲಾರಿಗೆ ಹಾಕುತ್ತಿತ್ತು. ಆದರೆ ಕೊನೆಯಲ್ಲಿ ಉಳಿದಿದ್ದ ಎರಡು ದಿಮ್ಮಿಗಳನ್ನು ಲಾರಿಗೆ ಹಾಕಲು ಅಭಿಮನ್ಯು ನಿರಾಕರಿಸಿದನು. ಉಳಿದಿರುವ ಎರಡು ದಿಮ್ಮಿ ಹಾಕಲಿಲ್ಲವೆಂದರೆ ಬೇರೊಂದು ವಾಹನ ತರಬೇಕು. ಅದಕ್ಕಾಗಿ ನಾಳೆ ಬೆಳಿಗ್ಗೆ ತನಕ ಕಾಯಬೇಕು. ಆದ ಕಾರಣ ಈಗಲೇ ಎರಡು ದಿಮ್ಮಿಗಳನ್ನು ಲಾರಿಗೆ ಹಾಕಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಮಾವುತನಿಗೆ ಸೂಚಿಸಿದರು.



ಯಾಕೊ ಅಭಿಮನ್ಯು ದಿಮ್ಮಿ ಹಾಕಲು ನಿರಾಕರಿಸುತ್ತಿದ್ದಾನೆ. ದಯವಿಟ್ಟು ಬಲವಂತ ಮಾಡಬೇಡಿ ಎಂದು ಮಾವುತ ಅಧಿಕಾರಿಗಳಿಗೆ ಮನವಿ ಮಾಡಿದನು. ಮರದ ದಿಮ್ಮಿ ಹಾಕಿಸಲೇಬೇಕು ಎಂದು ಅಧಿಕಾರಿಗಳು ಆದೇಶ ನೀಡಿದ್ದರಿಂದ ಅನಿವಾರ್ಯವಾಗಿ ಮಾವುತ ಅಭಿಮನ್ಯುನಿಂದ ಮರದ ದಿಮ್ಮಿಯನ್ನು ಲಾರಿಗೆ ಹಾಕಿಸಿದನು. ಒಂದು ಮರದ ದಿಮ್ಮಿ ಹಾಕುತ್ತಲೆ ಲಾರಿಯಲ್ಲಿದ್ದ ಎಲ್ಲಾ ಮರದ ದಿಮ್ಮಿಗಳು ಒಂದೊಂದಾಗಿ ಜಾರಿ ಕೆಳಗೆ ಬಿದ್ದವು.

ಎಷ್ಟು ಬೇಕೊ ಅಷ್ಟು ಮರದ ದಿಮ್ಮಿ ಹಾಕಬೇಕು. ಇಲ್ಲದಿದ್ದರೆ ಎಲ್ಲಾ ಮರದ ದಿಮ್ಮಿಗಳು ಕೆಳಗೆ ಬೀಳುತ್ತವೆ ಎಂದು ಅಭಿಮನ್ಯು ಊಹೆ ಮಾಡಿದ್ದ.

ಮೈಸೂರು ದಸರಾ ಚಲನಚಿತ್ರೋತ್ಸವ ಆರಂಭ

7 ದಿನಗಳ ಕಾಲ 112 ಸಿನಿಮಾಗಳ ಪ್ರದರ್ಶನ

● ಹಾಸ್ಯನಟ ನರಸಿಂಹರಾಜು ಭಾವಚಿತ್ರಕ್ಕೆ ಪುಷ್ಪಾರ್ಚನೆ ● ಸುಧಾ ನರಸಿಂಹರಾಜುಗೆ ಸನ್ಮಾನ ● ವಾರಕ್ಕೆ 6 ಸಿನಿಮಾ ನೋಡುತ್ತಿದ್ದೆ ಎಂದ ಸಿದ್ದರಾಮಯ್ಯ ● ಸಿನಿಮಾ ಅಂದರೆ ಜೀವನ ಕೂಡ

ಮೈಸೂರು, ಅ.15(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಸಿನಿ ತಾರೆಯರ ದಸರಾ ಚಲನಚಿತ್ರೋತ್ಸವ ಇಂದಿನಿಂದ ಆರಂಭಗೊಂಡಿತು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 7 ದಿನಗಳ ದಸರಾ ಚಲನಚಿತ್ರೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಕನ್ನಡ ಚಲನಚಿತ್ರ ರಂಗದ ಖ್ಯಾತ ಹಾಸ್ಯನಟ ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರ 100ನೇ ಜನ್ಮ ಜಯಂತಿ ಹಿನ್ನೆಲೆ ನರಸಿಂಹರಾಜು ಅವರ ಭಾವಚಿತ್ರಕ್ಕೆ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು.

ತರುವಾಯ ನರಸಿಂಹರಾಜು ಅವರ ಪುತ್ರಿ ಸುಧಾ ನರಸಿಂಹರಾಜು ಅವರನ್ನು ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ, ಚಲನಚಿತ್ರ ಬಹಳ ಪ್ರಭಾವಯುತ ಮಾಧ್ಯಮವಾಗಿದ್ದು, ಗುಣಮಟ್ಟದ ಚಲನಚಿತ್ರಗಳು ತೆರೆ ಮೇಲೆ ಬಂದರೆ ಸಮಾಜಕ್ಕೆ ಉಪಯುಕ್ತವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜೀವನದ ಮೌಲ್ಯಗಳನ್ನು ಚಲನಚಿತ್ರಗಳು ತಿಳಿಸಲಿದೆ. ಬಹಳಷ್ಟು ಜನರು ಓದಿಗಿಂತ ಸಿನಿಮಾ ನೋಡಿಯೇ ಹೆಚ್ಚು ಪ್ರಭಾವಿತರಾಗಿ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ವಿಶ್ವ ದರ್ಜೆಯ ಗುಣಮಟ್ಟದ ಚಲನಚಿತ್ರಗಳನ್ನು ಕನ್ನಡ ಚಿತ್ರರಂಗ ನೀಡಿದೆ. ಈಗಲೂ ಅಂತಹ ಸಿನಿಮಾಗಳು ತೆರೆ ಮೇಲೆ ಬರಬೇಕು. ದಸರಾ ಚಲನಚಿತ್ರೋತ್ಸವದಲ್ಲಿ ಕನ್ನಡ ಸೇರಿದಂತೆ ಬಹುಭಾಷೆಯ ಹಲವು ಸಿನಿಮಾಗಳು ಪ್ರದರ್ಶನವಾಗುತ್ತಿವೆ. ಅದನ್ನು ನೋಡಬೇಕು ಎಂದರು.

ನಾನು ಕೂಡ ವಿದ್ಯಾರ್ಥಿ ಆಗಿದ್ದಾಗ ತುಂಬಾ ಸಿನಿಮಾ ನೋಡುತ್ತಿದ್ದೆ. ವಾರದಲ್ಲಿ 6 ಸಿನಿಮಾವಾದರೂ ವೀಕ್ಷಿಸುತ್ತಿದ್ದೆ ಆದರೆ ಈಗ ಸಮಯ ಸಿಗುತ್ತಿಲ್ಲವಾದ ಕಾರಣ ಸಿನಿಮಾ ನೋಡಲು ಆಗುತ್ತಿಲ್ಲ ಎಂದು ಸಿದ್ದರಾಮಯ್ಯ ಅವರು ಬಾಲ್ಯದ ನೆನಪನ್ನು ಮೆಲುಕು ಹಾಕಿದರು.



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ನಡೆದ ದಸರಾ ಚಲನಚಿತ್ರೋತ್ಸವ ಸಮಾರಂಭದಲ್ಲಿ ಹಾಸ್ಯನಟ ನರಸಿಂಹರಾಜು ಅವರ 100ನೇ ಜಯಂತಿ ಹಿನ್ನೆಲೆ ಅವರ ಪುತ್ರಿ ಸುಧಾ ನರಸಿಂಹರಾಜು ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಸಿ.ಎನ್.ಮಂಜೇಗೌಡ, ರವಿಶಂಕರ್, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಈ ವೇಳೆ ಮಾತನಾಡಿದ ಸುಧಾ ನರಸಿಂಹರಾಜು, ನಮ್ಮ ತಂದೆಯವರು 256 ಸಿನಿಮಾಗಳಲ್ಲಿ ನಟಿಸಿದ್ದಾರೆ. ಮೈಸೂರು ಬಗ್ಗೆ ಅವರಿಗೆ ಹೆಚ್ಚು ಒಡನಾಟವಿತ್ತು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ನಟ ಡಾರ್ಲಿಂಗ್ ಕೃಷ್ಣ, ನನ್ನ ಊರು ಮೈಸೂರು ಆದ ಕಾರಣ ನನ್ನ ಕಲೆಗೆ ಮೈಸೂರು ಅತ್ಯುತ್ತಮ ವೇದಿಕೆ ಮಾಡಿಕೊಟ್ಟಿತ್ತು. ನನಗೆ ಅಷ್ಟೆ ಅಲ್ಲದೆ ಬಹಳಷ್ಟು ಕಲೆಗಾರರಿಗೆ ಮೈಸೂರು ದಸರಾ ಉಪಯುಕ್ತವಾಗಿದೆ. ನನ್ನ ಅಭಿನಯದ ಲವ್ ಮಾಕ್ಟೆಲ್–3 ತೆರೆ ಮೇಲೆ ತರಲು ಸಿದ್ಧ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಸಿನಿಮಾ ಅಂದರೆ ಲೈಟ್ಸ್, ಕ್ಯಾಮರಾ, ಆಕ್ಷನ್ ಮಾತ್ರವಲ್ಲ. ಸಿನಿಮಾದಲ್ಲಿ ಜೀವನ ಕೂಡ ಇರುತ್ತದೆ. ಎಲ್ಲರೂ ಥಿಯೇಟರ್‌ಗಳಿಗೆ ಹೋಗಿ ಸಿನಿಮಾ ನೋಡಿ. ಈ ಮೂಲಕ ಕನ್ನಡ ಸಿನಿಮಾಗಳನ್ನು ಗೆಲ್ಲಿಸಿ ಎಂದು ನಟಿ ಮಾನ್ವಿತಾ ಮನವಿ ಮಾಡಿದರು.

> 6 ನರಸಿಂಹರಾಜು ಅಪರೂಪದ ನಟ. ಡಾ.ರಾಜ್ ಕುಮಾರ್ ಅವರ ಜೊತೆ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅದ್ಭುತ ಅಭಿನಯ ಹೊಂದಿದ್ದ ನರಸಿಂಹರಾಜು ಅವರಿಗೆ ನರಸಿಂಹರಾಜು ಅವರೇ ಸಾಟಿ ಎಂಬಂತೆ ಜನರಿಂದ ಪ್ರಶಂಸೆ ಪಡೆದಿದ್ದರು. ನರಸಿಂಹರಾಜು ಇಲ್ಲದಿದ್ದರೆ ಅದು ಸಿನಿಮಾವೇ ಅಲ್ಲ ಎಂಬ ಕಾಲವಿತ್ತು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ 112 ಸಿನಿಮಾಗಳು ಪ್ರದರ್ಶನವಾಗುತ್ತವೆ. ಈ ಸಿನಿಮಾಗಳ ಕಿರು ಹೊತ್ತಿಗೆಯನ್ನು ಈ ವೇಳೆ ಬಿಡುಗಡೆ ಮಾಡಲಾಯಿತು.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ಎನ್.ಸುರೇಶ್, ನಿರ್ಮಾಪಕರಾದ ಚಿನ್ನೆಗೌಡ, ಲಯನ್ ಶೃಂಗಾರ ಸಂಜೀವ ಶೆಟ್ಟಿ, ಕಲಾವಿದರಾದ ಲಯನ್ ಎಸ್.ವೆಂಕಟೇಶ್, ಹಂಚಿಕೆದಾರರಾದ ಎಂ.ಬಿ.ನರೇಂದ್ರ ಬಾಬು, ಪ್ರದರ್ಶಕರಾದ ವೈಶಾಲಿ ಹನುಮಂತು ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಹಾಸ್ಯನಟರೂ ಆದ ಸಂಗೀತ ನಿರ್ದೇಶಕ ಸಾಧು ಕೋಕಿಲಾ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ನಟಿ ಮಯೂರಿ, ವೈಭವಿ ಶಾಂಡಿಲ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಾ.ತಿಮ್ಮಯ್ಯ, ಎ.ಆರ್.ಕೃಷ್ಣಮೂರ್ತಿ, ರವಿಶಂಕರ್, ಅನಿಲ್ ಚಿಕ್ಕಮಾದು, ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಂಗಭೂಮಿ ಮುನ್ನಡೆಸಲು ಯುವ ಸಮೂಹ ಆಸಕ್ತಿ ವಹಿಸಬೇಕು



ಮೈಸೂರು,ಅ.15(ಎಸ್‌ಪಿಎನ್)– ರಂಗಭೂಮಿ ಕ್ಷೇತ್ರದ ಹಿರಿಯರ ಸಹಕಾರದೊಂದಿಗೆ ಆಧುನಿಕ ರಂಗಭೂಮಿ ಮುನ್ನಡೆಯಬೇಕಿದೆ. ರಂಗಭೂಮಿ ಮುನ್ನಡೆಸಲು ಯುವ ಸಮೂಹ ಹೆಚ್ಚು ಆಸಕ್ತಿ ವಹಿಸಬೇಕು ಎಂದು ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ನಿರಂತರ ಫೌಂಡೇಶನ್ ಮತ್ತು ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸಹಜ ರಂಗ' ಶೀರ್ಷಿಕೆಯ ಕಾಲೇಜು ವಿದ್ಯಾರ್ಥಿಗಳ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳ 'ಜಸ್ಟ್ ಎ ಮಿಸ್ಟೇಕ್' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಿರಿಯರನ್ನು ನೆನಪಿಸುವ ಪಿತೃಪಕ್ಷದ ದಿನದಂದು ಯುವ ಸಮೂಹದ 'ಜಸ್ಟ್ ಎ ಮಿಸ್ಟೇಕ್' ನಾಟಕ ಪ್ರದರ್ಶನಗೊಳ್ಳುತ್ತಿದೆ. ಮುಂದೆಯೂ ಯುವ ಸಮೂಹ ಹಿರಿಯರ ಸಲಹೆ–ಮಾರ್ಗ ದರ್ಶನದೊಂದಿಗೆ ರಂಗಭೂಮಿ ಮುನ್ನಡೆಸಬೇಕು ಎಂದು ಸಲಹೆ ನೀಡಿದರು.

ರಂಗದ ಮೇಲೆ: ಭೂಮಿಕಾ ಮಾಂಡ್ರೆ, ಬಿ.ಜೆ.ಆಶಾ, ಗೀತಾಂಜಲಿ ಎಲ್.ಹರಿಯಾಳ, ಬಿ.ಎಸ್.ಶೃತಿ, ಎಸ್.ಅನಿತಾ, ಎಂ.ಆರ್.ರಾಹುಲ್, ರವಿಕುಮಾರ್, ಭಾಸ್ಕರ ಸುಧೀಂದ್ರ ತಳಕೇರಿ, ಎಸ್.ಎಂ.ಪುಷ್ಕರ, ಆರ್.ಕುಶಾಲ್, ಕೆ.ಆರ್.ಲಿಕಿತ್, ಎಂ.ಎಸ್.ಮನೋಜ್, ಎ.ರಾಹುಲ್, ಕೆ.ಕೆ.ಡಿಲಾಕ್ಷ, ಎಸ್.ಧನುಷ್, ಎಂ.ಸಿ.ಅನಿಲ್ ಪ್ರಸಾದ್, ಕಾರ್ತಿಕ್ ಈ ನಾಟಕದಲ್ಲಿ ಅಭಿನಯಿಸಿದರು.

ಪರಿಸರ ತಜ್ಞ ಮನು, ನೃಪತುಂಗ ಕನ್ನಡ ಶಾಲೆ ಕಾರ್ಯದರ್ಶಿ ಸವಿತಾ ಮಲ್ಲೇಶ್, ನಿರಂತರದ ಶ್ರೀನಿವಾಸ್ ಪಾಲಹಳ್ಳಿ, ನಾಟಕದ ಸಂಗೀತ ನಿರ್ದೇಶಕರಾದ ಜೀವನ್ ಕುಮಾರ್ ಬಿ.ಹೆಗ್ಗೋಡು, ಎಚ್.ಎಂ.ಸಂಜೀತ್, ಕೌಶಿಕ್ ಕ್ಯಾತನಹಳ್ಳಿ ಹಾಜರಿದ್ದರು.

ಸಿದ್ದಯ್ಯಗೆ ಪಿಎಚ್.ಡಿ ಪದವಿ



ಮೈಸೂರು, ಅ.15– ಪ್ರೊ. ನಿರ್ಮಲ್ ರಾಜು ಅವರ ಮಾರ್ಗದರ್ಶನದಲ್ಲಿ ಸಿದ್ದಯ್ಯ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮಂಗಳೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಗೃಹಜ್ಯೋತಿ ಗ್ಯಾರಂಟಿಗೆ ಅನುದಾನದ ಕೊರತೆ ಇಲ್ಲ

ಮೈಸೂರು,ಅ.15(ಎಸ್‌ಪಿಎನ್)– ಗೃಹಜ್ಯೋತಿ ಗ್ಯಾರಂಟಿಗೆ ಅನುದಾನ ಕೊರತೆ ಇಲ್ಲ. ಈ ಯೋಜನೆ ಕುರಿತು ಬಿಜೆಪಿಯವರು ಮಾಧ್ಯಮಗಳಿಗೆ ಸುಮ್ಮನೆ ಸುಳ್ಳು ಮಾಹಿತಿ ನೀಡುತ್ತಿದ್ದಾರೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಕಿಡಿಕಾರಿದರು.



ಮೈಸೂರು ಸಯ್ಯಾಜಿರಾವ್ ರಸ್ತೆಯ ಹಸಿರು ಚಪ್ಪರದಡಿ ದೀಪಾಲಂಕಾರಕ್ಕೆ ಚಾಲನೆ ನೀಡಿ, ಮಾತನಾಡಿದ ಸಚಿವರು, ಗೃಹಜ್ಯೋತಿ ಅನುದಾನ ಬಿಡುಗಡೆ ಆಗುತ್ತಿಲ್ಲ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತ್ರಿಯಿಸಿದರು.

ಅನುದಾನ ಕೊರತೆ ಇಲ್ಲ. ಈಗಾಗಲೇ ಮೊದಲ ಕಂತಿನ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದು ಮಾಹಿತಿ ನೀಡುವ ಸಂದರ್ಭದಲ್ಲಿ 4 ನಿಗಮಗಳಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಿದ್ದಾರೆ, ಎಂದು 3 ಬಾರಿ ಪ್ರಶ್ನಿಸಿದಕ್ಕೆ, ಕೋಪಗೊಂಡ ಸಚಿವರು, ಎಷ್ಟೋ ಅನುದಾನ ಬಿಡುಗಡೆಗೊಳಿಸಿದೆ. ಎಷ್ಟು ಎಂಬುದು ನನಗೆ ಗೊತ್ತಿದೆ ಅಧಿಕಾರಿಗಳಿಗೆ ಗೊತ್ತಿದೆ. ನಿಮಗೇಕೆ? ಎಂದು ಮಾಧ್ಯಮದವರನ್ನೇ ಮರು ಪ್ರಶ್ನಿಸಿದರು.

ರಾಜ್ಯದಲ್ಲಿ ಮುಂಗಾರು ಕೊರತೆಯಾಗಿರುವುದರಿಂದ ರಾಜ್ಯದಲ್ಲಿ 1550 ಮೆ.ವ್ಯಾ ಕೊರತೆಯಾಗಿದೆ. ಇದನ್ನು ಸರಿದೂಗಿಸಲು ಇಲಾಖೆ ತಯಾರಿ ನಡೆಸಿರಲಿಲ್ಲ. ಮುಂದೆ ಈಗಾಗದಂತೆ ನೋಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿದ ಅವರು, ರಾಜ್ಯದಲ್ಲಿ ಖಾಸಗಿಯವರು ತಯಾರಿಸುತ್ತಿರುವ ವಿದ್ಯುತ್ ಅನ್ನು ಸರ್ಕಾರಕ್ಕೆ ನೀಡುವಂತೆ ಆದೇಶ ನೀಡಲಾಗಿದೆ. ಅಲ್ಲದೆ, ಪಂಜಾಬ್, ಗುಜರಾತ್ ಸೇರಿದಂತೆ ಇತರೆ ರಾಜ್ಯಗಳಿಂದ ಖರೀದಿಗೂ ಪ್ರಯತ್ನಿಸಲಾಗುತ್ತಿದೆ. ಇದರಿಂದ ಗೃಹಜ್ಯೋತಿ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಮುಂಗಾರು ಮಳೆ ಕೊರತೆಯಾದ ಹಿನ್ನೆಲೆಯಲ್ಲಿ ಅನಧಿಕೃತ ಲೋಡ್‌ಶೆಡ್ಡಿಂಗ್ ಮಾಡಲಾಗಿದೆ. ಆದರೆ, ತಾಯಿ ಚಾಮುಂಡೇಶ್ವರಿ ಕೃಪೆಯಿಂದ ಹಿಂಗಾರು ಮಳೆ ಚೆನ್ನಾಗಿ ಆದರೆ, ಈ ಕೊರತೆ ನಿಗಲಿದೆ ಆಗ ರೈತರಿಗೂ ಪೂರ್ಣ ಪ್ರಮಾಣ ವಿದ್ಯುತ್ ಪೂರೈಕೆಗೆ ಯಾವುದೇ ಅಡ್ಡಿಯಿಲ್ಲ. ಆದರೆ, ಈ ಸಮಸ್ಯೆ ಸರಿದೂಗಿಸಲು ಕೇಂದ್ರ ಸರ್ಕಾರಕ್ಕೂ ಮನವಿ ಮಾಡಲಾಗಿದೆ ಎಂದು ತಿಳಿಸಿದರು.



ರಾಜ್ಯಮಟ್ಟದ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಲು ಮೈಸೂರಿಗೆ ಆಗಮಿಸಿದ ಕ್ರೀಡಾ ಯುವ ಸಬಲೀಕರಣ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವ ಬಿ.ನಾಗೇಂದ್ರ ಅವರನ್ನು ಕಾರ್ಪೊರೇಟರ್ ಲೋಕೇಶ್ ಪಿಯಾ ಅಭಿನಂದಿಸಿದರು. ಈ ವೇಳೆ ಕೃಷ್ಣ. ಜೆ, ಯೋಗೇಶ್, ಶಿವಲಿಂಗಯ್ಯ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಶಿಲ್ಪಕಲಾ–ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ

● ಅರಮನೆ–ಅಂಬಾರಿ ಹೊತ್ತ ಗಜರಾಜ ಸೇರಿ ನಾನಾ ಚಿತ್ರಗಳ ಅನಾವರಣ ● ಗೌತಮ ಬುದ್ಧ, ಗಂಡಭೇರುಂಡ ಒಳಗೊಂಡಂತೆ ಕಲಾಕಲ್ಪನೆಯಲ್ಲಿ ಮೂಡಿದ ವೈವಿಧ್ಯಮಯ ಶಿಲ್ಪಗಳು



ಮೈಸೂರು, ಅ.15(ಪಿಎಂ)– ಮೈಸೂರು ಅರಮನೆ, ಅಂಬಾರಿ ಹೊತ್ತ ಗಜರಾಜ ಸೇರಿದಂತೆ ವಿವಿಧ ಚಿತ್ರಗಳು ಬಗೆಬಗೆಯ ಬಣ್ಣಗಳ ಹಿನ್ನೆಲೆಯಲ್ಲಿ ಕಲಾವಿದರ ಕುಂಚದಲ್ಲಿ ಮೂಡಿಬಂದಿದ್ದರೆ, ಗೌತಮ ಬುದ್ಧ, ಗಂಡಭೇರುಂಡ ಒಳಗೊಂಡಂತೆ ಮೊದಲಾದ ಶಿಲ್ಪಗಳು ಕುಶಲಕರ್ಮಿಗಳ ಕಲಾಕಲ್ಪನೆಯಲ್ಲಿ ಅರಳಿ ನೋಡುಗರ ಮನಸೂರೆಗೊಳ್ಳುತ್ತಿವೆ.

ದಸರಾ ಪ್ರಯುಕ್ತ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ಮೈಸೂರಿನ ಕಲಾಮಂದಿರದ ಆವರಣದಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ಚಿತ್ರಕಲಾ–ಶಿಲ್ಪಕಲಾ ಪ್ರದರ್ಶನದಲ್ಲಿ ಇಂತಹ ಕಲಾತ್ಮಕ ಲೋಕ ತಲೆ ಎತ್ತಿದ್ದು, ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಇದಕ್ಕೆ ಚಾಲನೆ ನೀಡಿದರು.


ಈಗಾಗಲೇ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಶಿಲ್ಪಕಲಾ ಶಿಬಿರ ಹಾಗೂ ರಾಜ್ಯಮಟ್ಟದ ಚಿತ್ರಕಲಾ ಶಿಬಿರದಲ್ಲಿ ಪಾಲ್ಗೊಂಡಿದ್ದ ಕಲಾವಿದರ ಕಲೆಗಳು ಇಲ್ಲಿ ಪ್ರದರ್ಶನಗೊಂಡಿವೆ. ಚಾಮುಂಡೇಶ್ವರಿ, ಮಹಿಷಾಸುರ, ವರನಟ ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅವರ ಚಿತ್ರಗಳೂ ಕಲಾವಿದರ ಕುಂಚದಿಂದ ಮೂಡಿಬಂದಿವೆ. ಅಲ್ಲದೆ, ಮೈಸೂರು ಪತ್ರಿಕಾ ಛಾಯಾಗ್ರಾಹಕರ ವೈವಿಧ್ಯಮಯ ಫೋಟೋಗಳೂ ಇಲ್ಲಿ ಪ್ರದರ್ಶನಗೊಂಡಿವೆ. ಅ.22ರವರೆಗೆ ಪ್ರದರ್ಶನ ಇರಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಭೇಟಿ ನೀಡಬಹುದು.

ಪ್ರದರ್ಶನ ಉದ್ಘಾಟಿಸಿದ ಸಚಿವ ಶಿವರಾಜ ಎಸ್.ತಂಗಡಗಿ ಮಾತನಾಡಿ, ಸಾಂಸ್ಕೃತಿಕ ನಗರಿ ಎಂದೇ ಪ್ರಸಿದ್ಧಿ ಪಡೆದಿರುವ ಮೈಸೂರು ನಗರವು ಕಲೆಗಳಿಗೆ ಹೆಸರುವಾಸಿಯಾಗಿದೆ. ನಮ್ಮ ಸರ್ಕಾರ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಿದೆ. ಈ ಕಲಾತ್ಮಕ ಕಾರ್ಯಕ್ರಮಕ್ಕೆ ಶ್ರಮವಹಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆಂದು ಅವರು ತಿಳಿಸಿದರು.

ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಉಪವಿಶೇಷಾಧಿಕಾರಿ ಎ.ದೇವರಾಜು ಮಾತನಾಡಿ, ನಮ್ಮ ಉಪಸಮಿತಿ ವತಿಯಿಂದ ಅ.17ರಂದು ರಾಜ್ಯ ಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಆಯೋಜನೆ ಮಾಡಲಾಗಿದೆ. ಅ.19ರಿಂದ ಅಖಿಲ ಭಾರತ ಹಾಗೂ ರಾಜ್ಯ ಮಟ್ಟದ ಕರಕುಶಲ ಕಲೆಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ನಡೆಯಲಿದೆ. ಅ.22ರಂದು ಸಮಾರೋಪ ಹಾಗೂ ಬಹುಮಾನ ವಿತರಣೆ ಸಮಾರಂಭ ನಡೆಯಲಿದೆ ಎಂದು ಹೇಳಿದರು.

ತರಾತುರಿಯಲ್ಲಿ ಉದ್ಘಾಟನೆ: 5.30ಕ್ಕೆ ನಿಗದಿಯಾಗಿದ್ದ ಉದ್ಘಾಟನಾ ಸಮಾರಂಭಕ್ಕೆ ಸುಮಾರು 6.15ಕ್ಕೆ ತಡವಾಗಿ ಬಂದ ಸಚಿವ ಶಿವರಾಜ್ ಎಸ್.ತಂಗಡಗಿ, ಅರಮನೆ ಆವರಣದ ಕಾರ್ಯಕ್ರಮಕ್ಕೆ ಹೋಗಬೇಕೆಂದು ತರಾತುರಿಯಲ್ಲಿ ಉದ್ಘಾಟಿಸಿ, ನಿರ್ಗಮಿಸಿದರು. ಕಲಾಮಂದಿರ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಈ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಭಿಕರು ಮಾತ್ರ ಬೆರಳೆಣಿಕೆಯಷ್ಟು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಎನ್.ಮಂಜುಳಾ, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಉಪಸಮಿತಿಯ ಉಪ ವಿಶೇಷಾಧಿಕಾರಿ ಎ.ದೇವರಾಜು, ಕಾರ್ಯಾಧ್ಯಕ್ಷೆ ನಾಜಿಯಾ ಸುಲ್ತಾನ, ಕಾರ್ಯದರ್ಶಿ ಬಿ.ರಶ್ಮಿ ಮತ್ತಿತರರು ಹಾಜರಿದ್ದರು.















ಆಹಾರ ಮೇಳ ಮಳಿಗೆ ಬಾಡಿಗೆ ಕಡಿಮೆ ಮಾಡಲು ಮನವಿ

ಮೈಸೂರು, ಅ.15–ದಸರಾ ಆಹಾರ ಮೇಳದಲ್ಲಿ ಈ ಬಾರಿ ಕಳೆದ ಬಾರಿಗಿಂತ ಮಳಿಗೆ ಬಾಡಿಗೆ 3 ಪಟ್ಟು ಹೆಚ್ಚು ಮಾಡಿದ್ದು, ಕೂಡಲೇ ಅದನ್ನು ಕಡಿಮೆ ಮಾಡಬೇಕೆಂದು ಮೈಸೂರು ದಸರಾ ಆಹಾರ ಮೇಳ ತಿಂಡಿ–ತಿನಿಸು ಮಾರಾಟಗಾರರ ಸಂಘ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ. ಮಳಿಗೆ ಬಾಡಿಗೆ ಕಳೆದ ಬಾರಿ 25 ರಿಂದ 30 ಸಾವಿರ ರೂ. ಮಾತ್ರ ಇತ್ತು. ಆದರೆ, ಈ ಬಾರಿ ಆಹಾರ ಮೇಳದಲ್ಲಿ ಸಸ್ಯಾಹಾರಿ ಮಳಿಗೆಗೆ(ಜಿಎಸ್‌ಟಿ ಸೇರಿ) 59,000 ರೂ., ಮಾಂಸಾಹಾರಿ ಮಳಿಗೆಗೆ 88,500 ರೂ. ನಿಗದಿ ಪಡಿಸಿದ್ದಾರೆ. ಇದರಿಂದ ಬಡ ವ್ಯಾಪಾರಿಗೆ ಸಾಕಷ್ಟು ಸಮಸ್ಯೆ ಉಂಟಾಗಿದ್ದು, ಆದ್ದರಿಂದ ಮುಖ್ಯಮಂತ್ರಿಗಳು ಕೂಡಲೇ ಮಳಿಗೆ ದರವನ್ನು ಕಡಿಮೆಗೊಳಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ದಸರಾ ಮುಖ್ಯಮಂತ್ರಿ ಕಪ್ 2023ರ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಜಯಪುರದ ಶಶಾಂಕ್ ಸತತ ಐದನೇ ಬಾರಿಗೆ ಗೋಲ್ಡ್ ಮೆಡಲ್ ಪಡೆದಿದ್ದಾರೆ. ಈತ ಜಯಪುರದ ಜೆ.ಶಿವರಾಜ್ ನಾಯಕ ಮತ್ತು ಮಂಜುಳಾ ದಂಪತಿ ಪುತ್ರ. ಕರಾಟೆ ತರಬೇತುದಾರ ವಿದ್ಯಾಸಾಗರ್, ಪ್ರೆಸಿಡೆಂಟ್ ಆಫ್ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್‌ನ ಅರುಣ್ ಮಾಚಯ್ಯ, ಸೆಕ್ರೆಟರಿ ಆಫ್ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಭಾರ್ಗವ್ ರೆಡ್ಡಿ ಅವರು ಶಶಾಂಕ್‌ನನ್ನು ಅಭಿನಂದಿಸಿದರು.

ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ

ರೋಟರಿ ಫಾರ್ಮಾಸಿಸ್ಟ್, ಕೆಮಿಸ್ಟ್ ಪ್ರಶಸ್ತಿ ಪ್ರದಾನ



ಮೈಸೂರು, ಅ.15(ಎಸ್‌ಪಿಎನ್)– ಮೈಸೂರು ವಿಜಯನಗರ ರೈಲ್ವೆ ಬಡಾವಣೆಯ ರೋಟರಿ ಭವನದಲ್ಲಿ ರೋಟರಿ ಮೈಸೂರು ಉತ್ತರ ಹಾಗೂ ಶರತ್ ಮೆಡಿಕಲ್ಸ್ ಸಹಯೋಗದೊಂದಿಗೆ 'ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ' ಅಂಗವಾಗಿ ಹಿರಿಯ ಫಾರ್ಮಾಸಿಸ್ಟ್ ಎಂ.ನಿರಂಜನ ಮೂರ್ತಿ ಸ್ಮರಣಾರ್ಥ ಐದು ಮಂದಿ ಹಿರಿಯ ಫಾರ್ಮಾಸಿಸ್ಟ್‌ಗಳಿಗೆ ಈ ಸಾಲಿನ 'ರೋಟರಿ ಫಾರ್ಮಾಸಿಸ್ಟ್ ಮತ್ತು ಕೆಮಿಸ್ಟ್ ಅವಾರ್ಡ್' ಅನ್ನು ಮೈಸೂರು ತಹಸೀಲ್ದಾರ್ ಬಿ.ಎನ್.ಗಿರೀಶ್ ಶುಕ್ರವಾರ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಗಂಡು–ಹೆಣ್ಣಿನ ನಡುವಿನ ಸಮಾನತೆ ಕುರಿತು ಸಮಾಜದಲ್ಲಿ ಹೆಚ್ಚು ಚರ್ಚೆ ನಡೆಯುತ್ತಿದೆ. ಮಿತಿಮೀರಿದ ಸಮಾನತೆ ಕುರಿತು ಚರ್ಚೆ ನಡೆದರೆ ಸಮಾಜ ಬೇರೆ ದಿಕ್ಕಿನೆಡೆಗೆ ವಾಲುತ್ತದೆ ಎಂದು ಪುರುಷರ ನಡೆಯನ್ನು ಅನುಮಾನಿಸುವವರಿಗೆ 'ಮಿಡಿದ ಹೃದಯಗಳು' ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಗಾಯನದ ಹಾಡು ಉಲ್ಲೇಖಿಸಿದರು.

ನಟ ಅಂಬರೀಶ್ ಅಭಿನಯದ, ಹಂಸಲೇಖ ರಚನೆಯ, ಡಾ.ರಾಜ್‌ಕುಮಾರ್ ಹಾಡಿರುವ 'ಮಿಡಿದ ಹೃದಯಗಳು' ಚಿತ್ರದ 'ತಂದೆ ಕೊಡಿಸೊ ಸೀರೆ ಮದುವೆ ಆಗೋವರೆಗೆ, ತಾಯಿ ಉಡಿಸೋ ಸೀರೆ ತಾಯಿ ಆಗೋವರೆಗೆ, ಬಂಧು ಕೊಡಿಸೋ ಸೀರೆ ಬಣ್ಣ ಹೋಗೊವರೆಗೆ, ಗಂಡ ಕೊಡಿಸೋ ಸೀರೆ ಕುಂಕುಮ ಇರುವವರೆಗೆ, ಹೆಣ್ಣಿನ ಜನುಮ ಕಳೆವವರೆಗೆ, ಮಣ್ಣಿನ ಮಮತೆ ಮರೆವವರೆಗೆ' ಉಲ್ಲೇಖಿಸಿ ಗಂಡು–ಹೆಣ್ಣಿನ ದಾಂಪತ್ಯದ ಸಮಾನತೆ ಕುರಿತು ವಿವರಿಸಿದರು.

'ಭಾಗ್ಯದ ಬಳೆಗಾರ ಹೋಗಿ ಬಾ ನನ್ ತವರೀಗೆ' ಜಾನಪದ ಹಾಡನ್ನು ಹಾಡಿ, ಗೌರಿ ಹಬ್ಬಕ್ಕೆ ತನ್ನ ತವರು ಮನೆಯಿಂದ ನೀಡುವ ಹಸಿರು ಬಳೆಗೆ ಹೊಸದಾಗಿ ಮದುವೆಯಾದ ಹೆಣ್ಣು ಹೆಚ್ಚು ಪ್ರಾಮುಖ್ಯತೆ ನೀಡುವ ಕುರಿತು ವಿವರಿಸಿದ ಅವರು, 'ಕಳ್ಳ–ಕುಳ್ಳ' ಚಿತ್ರದ 'ಅಮ್ಮ ಎಂದರೆ ಏನೋ ಹರುಷವು' ಹಾಡನ್ನು ಉಲ್ಲೇಖಿಸಿ, ತಾಯಿ ಮತ್ತು ಮಕ್ಕಳ ಸಂಬಂಧ ಕುರಿತು ವಿವರಿಸಿದರಲ್ಲದೆ, 'ಅಮೃತ ಘಳಿಗೆ' ಚಿತ್ರದ 'ಹಿಂದೂಸ್ಥಾನವು ಎಂದೂ ಮರೆಯದ ಭಾರತ ರತ್ನವೂ ಜನ್ಮಿಸಲಿ' ಹಾಡನ್ನು ಹಾಡಿ, ಇಂತಹ ಮಕ್ಕಳಿಗೆ ನಾವು ಜನ್ಮ ನೀಡಬೇಕು ಎಂದು ಆಶಿಸಿದರು.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದ ಮಕ್ಕಳಿಗೆ ಮೊಬೈಲ್ ಗೀಳು ಹಿಡಿಸುವಲ್ಲಿ ಪೋಷಕರ ಪಾತ್ರ ಪ್ರಮುಖವಾಗಿದೆ. ಕುಟುಂಬ ನಿರ್ವಹಣೆಗಾಗಿ ಗಂಡ–ಹೆಂಡತಿ ಇಬ್ಬರು ಹೊರಗಡೆ ದುಡಿಯುವ ಅನಿವಾರ್ಯತೆ ಇದೆ. ಈ ವೇಳೆ ಮಕ್ಕಳ ಲಾಲನೆ–ಪಾಲನೆಗಾಗಿ ಹೆಚ್ಚಿನ ಸಮಯ ಮೀಸಲಿಡಲು ಸಾಧ್ಯವಾಗದಿರುವುದರಿಂದ ಪೋಷಕರು, ತಮ್ಮ ಮಕ್ಕಳನ್ನು ತಾತ್ಕಾಲಿಕವಾಗಿ ಸುಮ್ಮನಿರಿಸಲು ಮೊಬೈಲ್ ಕೊಡುತ್ತಾರೆ. ಆ ಮಕ್ಕಳು ಮೊಬೈಲ್ ಗೀಳಿಗೆ ಬೀಳುತ್ತಾರೆ. ಮುಂದೊಂದು ದಿನ ಮೊಬೈಲ್ ಇಲ್ಲದೆ ಜೀವನವೇ ಇಲ್ಲ ಎಂಬಂತೆ ವರ್ತಿಸುವುದು ಬೇಸರದ ಸಂಗತಿ ಎಂದರು.

ಅಂಕಗಳ ಆಧಾರ ಮೇಲೆ ಬದುಕು ರೂಪಿಸಿಕೊಳ್ಳುತ್ತಿರುವ ಇಂದಿನ ವಿದ್ಯಾರ್ಥಿಗಳು, ಮುಂದೆ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಉತ್ತಮ ಅಂಕಗಳಿಸಿ, ವಿದೇಶಕ್ಕೆ ಹಾರುತ್ತಾರೆ. ಮಕ್ಕಳ ಭವಿಷ್ಯಕ್ಕಾಗಿ ದುಡಿದ ಪೋಷಕರು, ತಮ್ಮ ಮುಪ್ಪಿನ ವೇಳೆ ಅನಾಥರಾಗಿ ಜೀವಿಸುತ್ತಾರೆ. ಸಮಾಜದಲ್ಲಿ ಇಂತಹ ಘಟನೆಗಳನ್ನು ನೋಡಿದರೆ ಶಿಕ್ಷಣದಿಂದ ಕೌಟುಂಬಿಕ ಮೌಲ್ಯಗಳು ಕುಸಿಯುತ್ತಿರುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ ಎಂದರು.

2019–20ರಲ್ಲಿ ಕೋವಿಡ್ ಕಾಣಿಸಿಕೊಂಡಾಗ ನಾನು ಶಿವಮೊಗ್ಗದಲ್ಲಿ ಸೇವೆ ಸಲ್ಲಿಸುತ್ತಿದ್ದೆ. ಈ ಸಂದರ್ಭದಲ್ಲಿ ಸರ್ಕಾರದಿಂದ ಅನುದಾನ ಬರುವುದು ತಡವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಕೊರೊನಾ ಪೀಡಿತರಿಗೆ ಶಿವಮೊಗ್ಗ ರೋಟರಿ ಸಂಸ್ಥೆಗಳು ಅಮ್ಮನ ಸ್ಥಾನದಲ್ಲಿ ನಿಂತು ಕೆಲಸ ಮಾಡಿವೆ. ಆ ಸಂದರ್ಭದಲ್ಲಿ ಅಲ್ಲಿನ ರೋಟರಿ ಪದಾಧಿಕಾರಿಗಳು ನೀಡಿದ ಸಹಕಾರವನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದು ಸ್ಮರಿಸಿದರು.

ಐದು ಮಂದಿಗೆ ಪ್ರಶಸ್ತಿ ಪ್ರದಾನ: ಮೈಸೂರು ಟಿ.ಕೆ.ಬಡಾವಣೆಯ ನಮ್ರತಾ ಮೆಡಿಕಲ್ಸ್‌ನ ಸಿ.ಕೆ.ಅರುಣ್, ಕುವೆಂಪುನಗರದ ಕುಮಾರ್ ಮೆಡಿಕಲ್ಸ್‌ನ ಎಂ.ಕುಮಾರಸ್ವಾಮಿ, ಗೌಸಿಯಾ ಮೆಡಿಕಲ್ಸ್‌ನ ಬಿ.ಬಿ.ಜಾವಿದ್ ಅಹಮ್ಮದ್ ಖಾನ್, ಜೆ.ಪಿ.ನಗರದ ಚಂದನ್ ಮೆಡಿಕಲ್ಸ್‌ನ ಎಸ್.ಪ್ರಕಾಶ್‌ಕುಮಾರ್, ಕೆ.ಆರ್.ನಗರದ ಗಿರಿ ಮೆಡಿಕಲ್ಸ್‌ನ ವಿ.ಎಸ್.ಸತ್ಯನಾರಾಯಣ ಅವರಿಗೆ ಈ ಬಾರಿಯ 'ರೋಟರಿ ಫಾರ್ಮಾಸಿಸ್ಟ್ ಮತ್ತು ಕೆಮಿಸ್ಟ್ ಅವಾರ್ಡ್' ಪ್ರದಾನ ಮಾಡಲಾಯಿತು.

ಈ ವೇಳೆ ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ.ಎಂ.ಕೆ.ಶ್ರೀಧರ್, ಕಾರ್ಯದರ್ಶಿ ರೊ.ರಾಜು, ರೋ.ಎ.ಪಿ.ವಿರೂಪಾಕ್ಷ, ನಗರ ಪಾಲಿಕೆ ಮಾಜಿ ಅಧ್ಯಕ್ಷ ಕೆ.ವಿ.ಮಲ್ಲೇಶ್, ಸುಜಾತ ನಿರಂಜನಮೂರ್ತಿ, ಡಾ.ಶರತ್, ರೊ.ಬಿ.ಆರ್.ಶಿವಕುಮಾರ್, ರೊ.ರಾಜಶೇಖರ್ ಕದಂಬ, ಕಸಾಪ ಮಾಜಿ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಮಿತ್ರ

ಚಿಕ್ಕದೇವಮ್ಮನ ಉಯ್ಯಾಲೆ ಪೂಜೆ



ಸರಗೂರು: ಪಟ್ಟಣದ ಶ್ರೀ ಚಿಕ್ಕದೇವಮ್ಮ ದೇವಸ್ಥಾನದಲ್ಲಿ ನವರಾತ್ರಿಯ ಮೊದಲ ದಿನವಾದ ಭಾನುವಾರ ಮಾತೃರೂಪ ದುರ್ಗಾ ದೇವಿ ಶ್ರೀ ಚಿಕ್ಕದೇವಮ್ಮನವರನ್ನು ಉಯ್ಯಾಲೆ ಮೇಲಿನ ಪಟ್ಟಕ್ಕೆ ಕೂರಿಸಿ ಪೂಜಿಸಲಾಯಿತು.

ಮೊದಲ ದಿನ ಸಾಂಕೇತಿಕವಾಗಿ ಶೈಲ ಪುತ್ರಿ ಎಂದು ದೇವಿಗೆ ವಿಶೇಷ ಪೂಜಾ ಕಾರ್ಯ, ಮಹಾಮಂಗಳಾರತಿ ನಡೆಸಿ ಭಕ್ತರಿಗೆ ತೀರ್ಥಪ್ರಸಾದ ವಿನಿಯೋಗಿಸಲಾಯಿತು. 9 ದಿನ ದುರ್ಗಾ ದೇವಿಯ 9 ರೂಪ ಗಳಾಗಿ ಪೂಜಿಸಲಾಗುವುದು.

ನವರಾತ್ರಿ ವೇಳೆ ಒಂಬತ್ತು ಮಂಗಳಕರ ದಿನ ವಿವಿಧ ಸಂಪ್ರದಾಯಗಳನ್ನು ಉತ್ಸಾಹ ದಿಂದ ಆಚರಿಸಲಾಗುವುದು. ಹತ್ತನೇ ದಿನ ದುರ್ಗಾ ಪೂಜೆ ಮತ್ತು ವಿಜಯದಶಮಿ ಆಚರಿಸಲಾಗುವುದು ಎಂದು ದೇವಸ್ಥಾನದ ಪುರೋಹಿತರಾದ ಹರೀಶ್ ಸುಬ್ಬಣ್ಣ ತಿಳಿಸಿದರು. ಪುರೋಹಿತ ಸುಕೃತ್ ಭಾರತ್‌ದ್ವಜ್, ನಾಯಕ ಸಮಾಜದ ಮುಖಂಡರು, ಭಕ್ತರು ಉಪಸ್ಥಿತರಿದ್ದರು.

ತೋಪಿನಮ್ಮ ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ



ಬೆಟ್ಟದಪುರ ಅ.15–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮರದೂರು ಗ್ರಾಮದ ಶ್ರೀ ತೋಪಿನಮ್ಮ ದೇವಾಲಯದಲ್ಲಿ ಮಹಾಲಯ ಅಮಾವಾಸ್ಯೆ ಅಂಗವಾಗಿ ಶನಿವಾರ ವಿಶೇಷ ಪೂಜೆ ಹಾಗೂ ವಿವಿಧ ಅಭಿಷೇಕ ನೆರವೇರಿಸಲಾಯಿತು.

ಹೊಸಕೋಟೆ ಕೊಪ್ಪಲು ಗ್ರಾಮದ ಮಹೇಶ್ ಮತ್ತು ಪ್ರಭಾವತಿ ಕುಟುಂಬ ದವರು ಎಲ್ಲಾ ಭಕ್ತರಿಗೆ ಊಟದ ವ್ಯವಸ್ಥೆ ಏರ್ಪಡಿಸಿದರು. ತಾಲೂಕಿನ ವಿವಿಧ ಗ್ರಾಮಗಳಿಂದ ಭಕ್ತರು ಆಗಮಿಸಿದ್ದರು.

ಗೇರದಡ ಗ್ರಾಮದಲ್ಲಿ ಚಿರತೆ ದಾಳಿಗೆ ಕರು ಬಲಿ

ಭೇರ್ಯ, ಅ.15–ಸಮೀಪದ ಗೇರದಡ ಗ್ರಾಮದಲ್ಲಿ ಚಿರತೆಯ ಉಪಟಳ ಹೆಚ್ಚಾಗಿದ್ದು, ಎಮ್ಮೆ, ದನ–ಕರು, ಕುರಿ, ಮೇಕೆ ಸೇರಿದಂತೆ ಸಾಕುಪ್ರಾಣಿಗಳನ್ನು ತಿಂದು ಹಾಕುತ್ತಿದ್ದು, ಶನಿವಾರ ರಾತ್ರಿ ಕೊಟ್ಟಿಗೆಯಲ್ಲಿದ್ದ ಕರುವೊಂದನ್ನು ಕೊಂದುಹಾಕಿದೆ.

ಗ್ರಾಮದ ಗೌರಮ್ಮ ರಾಜಯ್ಯ ಅವರಿಗೆ ಸೇರಿದ ಹೆಚ್‌ಎಫ್ ತಳಿಯ ಕರುವನ್ನು ಚಿರತೆ ಎಳೆದೊಯ್ದು ಮನೆಯ ಹಿಂಭಾಗದಲ್ಲಿ ತಿಂದು ಹಾಕಿದೆ. ಇದರಿಂದ ಈ ಭಾಗದ ರೈತರು ಹಾಗೂ ಗ್ರಾಮದ ಜನರು ಭಯಗೊಂಡಿದ್ದಾರೆ. ಕಳೆದ ತಿಂಗಳಿಂದ ಇಲ್ಲಿಯವರೆಗೆ ಚಿರತೆ ಐದಾರು ಜಾನುವಾರುಗಳನ್ನು ತಿಂದು ಹಾಕಿದೆ. ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರ ಆರೋಪಿಸಿದ್ದಾರೆ. ಸ್ಥಳಕ್ಕೆ ಅರಣ್ಯ ರಕ್ಷಕ ಸ್ವಾಮೀಗೌಡ, ಚಿರತೆ ಕಾರ್ಯಪಡೆಯ ಮಂಜುನಾಥ್ ಭೇಟಿ ನೀಡಿ, ಪರಿಶೀಲಿಸಿದರು. ಉಪವಲಯ ಅರಣ್ಯಾಧಿಕಾರಿ ಬಿ.ಎನ್.ಕುಮಾರ್ ಗೌರಮ್ಮಗೆ ಪರಿಹಾರ ನೀಡುವುದಾಗಿ ತಿಳಿಸಿದರು.

ಗ್ರಾಮೀಣ ದಸರಾಕ್ಕೆ ಚಾಲನೆ

ನಂಜನಗೂಡಿನಲ್ಲಿ ಕಣ್ಮನ ಸೆಳೆದ ವೀರಗಾಸೆ, ಅಸ್ಸಾಂ ಜಾನಪದ ನೃತ್ಯ



ನಂಜನಗೂಡು, ಅ.15–ಮೈಸೂರು ದಸರಾ ಹಾಗೂ ನವರಾತ್ರಿ ಅಂಗವಾಗಿ ನಗರದ ಶ್ರೀಕಂಠೇಶ್ವರ ದೇವಾಲಯದ ಮುಂಭಾಗ ತಾಲೂಕು ಆಡಳಿತದ ವತಿಯಿಂದ 9 ದಿನ ಆಯೋಜಿಸಿರುವ ಗ್ರಾಮೀಣ ದಸರಾಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ಮೊದಲ ದಿನ ನಡೆದ ಕಾರ್ಯಕ್ರಮದಲ್ಲಿ ಅಸ್ಸಾಂನ ಜಾನಪದ ನೃತ್ಯ ನೋಡುಗರ ಮನಸೂರೆಗೊಂಡಿತು. ಸ್ಥಳೀಯ ಕಲಾವಿದರ ವೀರಗಾಸೆ ನೃತ್ಯ ಪ್ರೇಕ್ಷಕರ ಕಣ್ಮನ ಸೆಳೆದವು. ಪ್ರತಿದಿನ ಸಾಂಸ್ಕೃತಿಕ ಮತ್ತು ಯೋಗ ದಸರಾ ಸೇರಿದಂತೆ ವಿವಿಧ ಕಾರ್ಯಕ್ರಮ ನಡೆಯಲಿವೆ.

ಗ್ರಾಮೀಣ ದಸರಾಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ದರ್ಶನ್ ಧ್ರುವನಾರಾಯಣ್, ಮೈಸೂರು ದಸರಾ ವಿಶ್ವ ವಿಖ್ಯಾತಿ ಪಡೆದಿದ್ದು, ನಾಡಿನ ಕಲೆ, ಸಂಸ್ಕೃತಿಯನ್ನು ಅನಾವರಣಗೊಳಿಸಿ ಪ್ರೋತ್ಸಾಹಿಸಿ ಬೆಳೆಸುವ ಹಬ್ಬವಾಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಸಲುವಾಗಿ ಗ್ರಾಮೀಣ ದಸರಾ ರೂಪಿಸಲಾಗಿದೆ ಎಂದರು.

ದಸರಾ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ, ಗ್ರಾಮೀಣ ಜನರಿಗೂ ತಲುಪಿಸಬೇಕೆಂಬ ಉದ್ದೇಶದಿಂದ ಸರ್ಕಾರ ಪ್ರತಿ ತಾಲೂಕಿನಲ್ಲೂ ಗ್ರಾಮೀಣ ದಸರಾ ಏರ್ಪಡಿಸಿದೆ. ಅಲ್ಲದೆ ಗ್ರಾಮೀಣ ಕ್ರೀಡೆ, ಜಾನಪದ, ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಗ್ರಾಮೀಣ ಕಲಾವಿದರಿಗೆ ಅವಕಾಶ ನೀಡಲಾಗುತ್ತಿದೆ ಎಂದರು.

ಗ್ರಾಮೀಣ ದಸರಾದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ತಾಲೂಕು ಮಟ್ಟದಲ್ಲೂ ವಿಜೃಂಭಣೆಯ ದಸರಾ ಆಚರಣೆಗೆ ಅವಕಾಶ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆಜಿ.ಮಹೇಶ್, ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಶ್ವೇತಾಲಕ್ಷ್ಮೀ, ಪ್ರದೀಪ್, ಎಸ್.ಪಿ.ಮಹೇಶ್, ಖಾಲಿದ್ ಅಹಮದ್, ಮುಖಂಡರಾದ ಶ್ರೀಧರ್, ಅನಸೂಯ ಗಣೇಶ್, ಕಾರ್ಮಿಕ ಮುಖಂಡ ಗೋವಿಂದರಾಜು, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಆರ್‌ಐ ಹರೀಶ್, ಬಿಇಒ ಎ.ಟಿ.ಶಿವಲಿಂಗಯ್ಯ, ಮಂಜುನಾಥ್, ಯಶವಂತ್ ಇದ್ದರು.

ಅ.23ರವರೆಗೆ ಹುಣಸೂರಲ್ಲಿ ನವರಾತ್ರಿ ಉತ್ಸವ



ಹುಣಸೂರು, ಅ.15–ನಗರದ ಮಾರಿಗುಡಿ ಬೀದಿಯ ಮುತ್ತುಮಾರಮ್ಮ ದೇವಾಲಯದಲ್ಲಿ ಭಾನುವಾರದಿಂದ ಅ.23ರವರೆಗೆ ನವರಾತ್ರಿ ಉತ್ಸವ, ವಿಶೇಷ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ, ಆಟೋಟ ಸ್ಪರ್ಧೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿಯ ಅಧ್ಯಕ್ಷ ಎಚ್.ವೈ.ಮಹದೇವ್ ತಿಳಿಸಿದರು.

ದೇವಾಲಯದಲ್ಲಿ ನವರಾತ್ರಿ ಉತ್ಸವ 9 ದಿನ ವಿಜೃಂಭಣೆಯಿಂದ ನಡೆಯಲಿದ್ದು, ಮುಂಜಾನೆ ದೇವರಿಗೆ ವಿವಿಧ ಅಭಿಷೇಕ, ಸಂಜೆ 7.30ಕ್ಕೆ ದೇವಿಗೆ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಹಾಗೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಅ.16ರಂದು ಕೊರವಂಜಿ ಅವತಾರ, ಶ್ರೀನಿವಾಸ ತಂಡ ಮತ್ತು ಕೌಸ್ತುಭ ಭಜನಾ ಮಂಡಳಿ ವತಿಯಿಂದ ಭಕ್ತಿಗೀತೆ. 17ರಂದು ವರಾಹಿ ಅಮ್ಮನ ಅವತಾರ, ಸೇತುವೆಯ ಹುಣ್ಣಿಮೆ ಭಜನಾ ಮಂಡಳಿ, ಸೋಮು ತಂಡದವರಿಂದ ಭಕ್ತಿಗೀತೆ. 18ರಂದು ಅರ್ಧನಾರೀಶ್ವರ ಅವತಾರ, ದಿವಾಕರ್, ಮಹದೇಶ್ವರ ಸ್ವಾಮಿ ತಂಡದಿಂದ ಭಜನೆ. 19ಕ್ಕೆ ಪ್ರತ್ಯಂಗಿರದೇವಿ ಅವತಾರ, ಮಹೇಂದ್ರ ಹಾಗೂ ಪೇಟೆ ವಾಸವಿ ಮಹಿಳಾ ಸಂಘದಿಂದ ಸಂಗೀತ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

20ರಂದು ಎಲ್ಲಮ್ಮತಾಯಿ ಅವತಾರ, ಶ್ರೀನಿವಾಸ್ ತಂಡದಿಂದ ಭಕ್ತಿಗೀತೆ, ತನ್ಮಿತ ಮನೋಹರ್‌ರಿಂದ ಭರತನಾಟ್ಯ. 21ರಂದು ಸರಸ್ವತಿ ಅವತಾರ, ಅರ್ಚನಾ ತಂಡದಿಂದ ಭಕ್ತಿಗೀತೆ, ಇಂಚರಪ್ರಿಯರಿಂದ ಭರತನಾಟ್ಯ, 22ರಂದು ಭದ್ರಕಾಳಿದೇವಿ ಅವತಾರ, ರವಿ ಮೆಲೋಡಿಸ್ ತಂಡದ ಭಕ್ತಿಗೀತೆ, ದರ್ಶಿನಿ ರಂಗಅಯ್ಯಪ್ಪರಿಂದ ಭರತನಾಟ್ಯ. 23ರಂದು ಮಹಿಷಾಸುರ ಮರ್ಧಿನಿ ಅವತಾರ, ಗಾನವೃಂದ ತಂಡದಿಂದ ಭಕ್ತಿಗೀತೆ ನಡೆಯಲಿದೆ ಎಂದು ತಿಳಿಸಿದರು.

ಇಂದು ಆಟೋಟ ಸ್ಪರ್ಧೆ: ಅ.16ರಂದು ಮಧ್ಯಾಹ್ನ 3 ಗಂಟೆಗೆ ಮಹಿಳೆಯರಿಗೆ ಮ್ಯೂಸಿಕಲ್ ಚೇರ್, ರಂಗೋಲಿ, ಲೆಮನ್ ಆ್ಯಂಡ್ ಸ್ಪೂನ್ ಸ್ಪರ್ಧೆ ಹಾಗೂ 20ರಂದು ಪುರುಷರಿಗೆ ಮ್ಯೂಸಿಕಲ್ ಚೇರ್ ಸ್ಪರ್ಧೆ ಆಯೋಜಿಸಲಾಗಿದೆ. ಅ.24ರಂದು ಮಧ್ಯಾಹ್ನ 12.30ಕ್ಕೆ ವಿವಿಧ ಕಲಾತಂಡಗಳೊಂದಿಗೆ ಹೂವಿನ ಅಲಂಕೃತ ವಾಹನದಲ್ಲಿ ಮುತ್ತುಮಾರಮ್ಮನ ಉತ್ಸವ ಹುಣಸೂರಿನ ರಾಜಬೀದಿಗಳಲ್ಲಿ ನಡೆಯಲಿದೆ ಎಂದು ಸಮಿತಿಯ ಜಂಟಿ ಕಾರ್ಯದರ್ಶಿ ಅಶೋಕ್ ರಾಜಲಿಂಗಯ್ಯ ತಿಳಿಸಿದರು. ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಈಶ್ವರಯ್ಯ, ಖಜಾಂಚಿ ಪುರುಷೋತ್ತಮ್ ಇದ್ದರು.

ಇಂದು ಮುಖ್ಯಮಂತ್ರಿ, ಸಚಿವರಿಗೆ ಸನ್ಮಾನ



ಕೆ.ಆರ್.ನಗರ: ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಕೆ.ಆರ್.ನಗರ ಶಾಖಾ ಮಠದ ವತಿಯಿಂದ ಅ.16ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಸಿದ್ಧಾರ್ಥನಗರದ ಮಠದ ಆವರಣದಲ್ಲಿ ಸನ್ಮಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಕನಕಗುರುಪೀಠದಲ್ಲಿ ನಡೆದ ಕುರುಬ ಸಮುದಾಯ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಶಾಸಕರಿಗೆ ಸನ್ಮಾನ ಹಾಗೂ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಕಾಗಿನೆಲೆ ಮಠದ ನಿರಂಜನಾನಂದಪುರಿ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದು, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕೆ.ಆರ್.ನಗರದ ಕನಕಗುರುಪೀಠದಲ್ಲಿ 20ನೇ ವರ್ಷದ ದಸರಾ ಮಹೋತ್ಸವ ಮತ್ತು 10 ದಿನ ಚಾಮುಂಡೇಶ್ವರಿ ಪೂಜೆ ಕಾರ್ಯ, ವಿವಿಧ ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಶಿವಾನಂದಪುರಿಸ್ವಾಮೀಜಿ 19 ವರ್ಷಗಳಿಂದ ದಸರಾ ಮಹೋತ್ಸವ ಜತೆಗೆ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ ಎಂದರು.

ಕುರುಬರ ಸಂಘದ ತಾಲೂಕು ಅಧ್ಯಕ್ಷ ಚಿರ್ನಹಳ್ಳಿ ಶಿವಣ್ಣ, ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಆಕಾಂಕ್ಷಿ ಜೆ.ಜೆ.ಆನಂದ್, ಪುರಸಭೆ ಸದಸ್ಯರಾದ ಕೋಳಿ ಪ್ರಕಾಶ್, ನಟರಾಜು, ನಿವೃತ್ತ ಡಿಹೆಚ್‌ಒ ಡಾ.ಎಸ್.ಎಂ.ಮಾಲೇಗೌಡ, ಜಿಪಂ ಮಾಜಿ ಸದಸ್ಯರಾದ ಜಿ.ಆರ್.ರಾಮೇಗೌಡ, ಮಾರ್ಚಹಳ್ಳಿ ಶಿವರಾಮು, ಟಿಎಪಿಸಿಎಂಎಸ್ ನಿರ್ದೇಶಕ ಎಸ್.ಸಿದ್ದೇಗೌಡ, ಕುರುಬರ ಸಂಘದ ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ್, ಖಜಾಂಚಿ ಬಿ.ಎಂ.ಗಿರೀಶ್, ನಿರ್ದೇಶಕರಾದ ಕೃಷ್ಣೇಗೌಡ, ರಾಜಶೇಖರ್, ಮಾನವ ಹಕ್ಕು ಆಯೋಗದ ತಾಲೂಕು ಅಧ್ಯಕ್ಷ ಪಿ.ಮಹದೇವ್ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿಶ್ವಕರ್ಮ ಸಮಾಜದ ವಿದ್ಯಾರ್ಥಿಗಳಿಂದ ಯುವ ಬ್ರಿಗೇಡ್ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಅಂಕಪಟ್ಟಿಯ, ಆಧಾರ್ ಕಾರ್ಡ್ ಪ್ರತಿ ಮತ್ತು ಭಾವಚಿತ್ರದೊಂದಿಗೆ ಅ.25ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿಗಾಗಿ ಯುವ ಬ್ರಿಗೇಡ್‌ನ ಕಾರ್ಯದರ್ಶಿ ಬಿ.ನಿಂಗರಾಜ್ ಆಚಾರ್ ಅಥವಾ ಮೊ.ಸಂ: 9902418008, 9972966243 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪೋಷಕರನ್ನು ದೂರ ಮಾಡುವ ಪ್ರವೃತ್ತಿ ಹೆಚ್ಚು



ಹೆಚ್.ಡಿ.ಕೋಟೆ, ಅ.15– ಆಧುನಿಕ ಸಮಾಜದಲ್ಲಿ ಮಕ್ಕಳು ಆಸ್ತಿ ಪಡೆದು ಪೋಷಕರನ್ನು ದೂರ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದ್ದು, ಹಿರಿಯ ನಾಗರಿಕರು ತಮ್ಮ ರಕ್ಷಣೆಗೆ ಉಚಿತ ಕಾನೂನು ನೆರವು ಪಡೆಯಬೇಕು ಎಂದು ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶ ಕೆ.ಜೆ.ಸತೀಶ್ ಸಲಹೆ ನೀಡಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಶನಿವಾರ ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಡೆದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಿಂದ ಅನ್ಯಾಯಕ್ಕೊಳಪಟ್ಟು ತಮ್ಮ ಜೀವನ ನಡೆಸಲು ಸಾಧ್ಯವಾಗದ ಪೋಷಕರು ಕಾನೂನು ಸೇವಾ ಸಮಿತಿ ಮೂಲಕ ದೂರು ದಾಖಲಿಸಬಹುದು. ನಂತರ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆಯಡಿ ಆಸ್ತಿಗಳನ್ನು ಹಿಂಪಡೆಯಬಹುದು ಎಂದು ಮಾಹಿತಿ ನೀಡಿದರು.

ಮಹಿಳೆಯರು ದೌರ್ಜನ್ಯಕ್ಕೆ ಒಳಗಾದಾಗ ಉಚಿತ ಕಾನೂನು ನೆರವು ಪಡೆಯಬಹುದು. ಇದರಲ್ಲಿ ಗಂಡನಿಂದ ದೂರವಾದಾಗ ಜೀವನ ನಿರ್ವಹಣೆ ಮತ್ತು ಮಕ್ಕಳ ಪೋಷಣೆಗೆ ಜೀವನಾಂಶ ಪಡೆಯಬಹುದು. ಮಹಿಳೆಯ ಅಭಿವೃದ್ಧಿಗಾಗಿ ಸ್ತ್ರೀ ಶಕ್ತಿ, ಗೃಹಲಕ್ಷ್ಮೀ, ಮಾತೃ ವಂದನಾ, ಶಕ್ತಿ ಯೋಜನೆ ಸೇರಿದಂತೆ ಹಲವಾರು ಯೋಜನೆಗಳಿವೆ ಎಂದರು.

ನ್ಯಾಯಾಧೀಶ ಬಿ.ಸಂದೇಶ್ ಪ್ರಭು ಮಾತನಾಡಿ, ದೇಶದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನವಿದೆ. ಆದರೆ, ಕಾಲ ಬದಲಾದಂತೆ ಪುರುಷ ಸಮಾಜ ಮಹಿಳೆಯರ ನಿಯಂತ್ರಣ ಸೇರಿದಂತೆ ಅವರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಮಹಿಳೆಯರ ರಕ್ಷಣೆಗೆ ಹಲವಾರು ಕಾನೂನುಗಳನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

ತಾಲೂಕು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ವಿ.ಭಾಸ್ಕರ್ ಮಾತನಾಡಿದರು. ನ್ಯಾಯಾಧೀಶ ಎಸ್.ಎನ್.ಸುರೇಶ್, ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ಉಪಾಧ್ಯಕ್ಷ ಆರ್.ನಾಗೇಶ್, ಕಾರ್ಯದರ್ಶಿ ಹೆಚ್.ಎಸ್.ದಿನೇಶ್, ಜಂಟಿ ಕಾರ್ಯದರ್ಶಿ ಲೋಕೇಶ್, ಖಜಾಂಚಿ ಚಲುವಪ್ಪ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಕನ್ನಡ ಪ್ರಮೋದ, ಜ್ಞಾನವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಬಿ.ಎಸ್.ವರ್ಷಾ, ಸೇವಾ ಪ್ರತಿನಿಧಿ ಕೃಷ್ಣ ಇದ್ದರು.

ಕೆ.ಆರ್.ನಗರದಲ್ಲಿ 4 ಲಕ್ಷ ರೂ. ಮೌಲ್ಯದ ಪಟಾಕಿ ವಶ



ಕೆ.ಆರ್.ನಗರ, ಅ.15– ಪಟ್ಟಣದಲ್ಲಿ ಅಕ್ರಮವಾಗಿ ದಾಸ್ತಾನು ಇಟ್ಟಿದ್ದ ಸುಮಾರು 4 ಲಕ್ಷ ರೂ. ಮೌಲ್ಯದ 1200 ಕೆಜಿಯ ವಿವಿಧ ಮಾದರಿಯ ಪಟಾಕಿಗಳನ್ನು ಪೊಲೀಸರು ದಾಳಿ ನಡೆಸಿ ಶನಿವಾರ ವಶಪಡಿಸಿಕೊಂಡಿದ್ದಾರೆ.

ಪಟ್ಟಣ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕ ಪಿ.ಪಿ.ಸಂತೋಷ್ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು, ಆಂಜನೇಯ ಬಡಾವಣೆಯ ಲೋಕೇಶ್ ಅವರು ರೈಲ್ವೆ ನಿಲ್ದಾಣ ಪಕ್ಕದಲ್ಲಿದ್ದ ಮನೆಯೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಪಟಾಕಿಗಳನ್ನು ವಶಪಡಿಸಿಕೊಂಡರು.

ನಂತರ ಲೋಕೇಶ್ ಮತ್ತು ರವಿನಂದನ್‌ನನ್ನು ಬಂಧಿಸಿದರು. ಕಾರ್ಯಾಚರಣೆಯಲ್ಲಿ ಉಪ ನಿರೀಕ್ಷಕರಾದ ಆರ್.ಧನರಾಜ್, ನಂಜಪ್ಪ, ಅಗ್ನಿಶಾಮಕ ದಳದ ಅಧಿಕಾರಿ ಲಕ್ಷ್ಮಿಕಾಂತ್ ಜಾಧವ್, ಪುರಸಭಾ ಆರೋಗ್ಯ ನಿರೀಕ್ಷಕ ರಾಜೇಂದ್ರ, ಕಂದಾಯ ರಾಜಸ್ವ ನಿರೀಕ್ಷಕ ಶಶಿಕುಮಾರ್, ಪೊಲೀಸ್ ಸಿಬ್ಬಂದಿ ಮಂಜು, ಕೆಂಪ ರಾಜು, ಗಣೇಶ್, ಸುಧಾರಾಣಿ, ಚಾಲಕ ಆಲಿ ಭಾಗವಹಿಸಿದ್ದರು.

ಮಹಿಷ ದಸರಾ ಆಚರಿಸಿ ಜನರ ಮನಸ್ಸಲ್ಲಿ ವಿಷಬೀಜ ಬಿತ್ತನೆ

ಪುರಸಭಾ ಸದಸ್ಯ, ಚಿತ್ರನಟ ಅರ್ಜುನ್ ರಮೇಶ್ ಸುದ್ದಿಗೋಷ್ಠಿಯಲ್ಲಿ ಕಿಡಿ



ತಿ.ನರಸೀಪುರ, ಅ.15–ನಾಡಹಬ್ಬ ದಸರಾ ವೇಳೆ ಕಾಂಗ್ರೆಸ್‌ನ ಕೆಲ ಏಜೆಂಟರು ಮಹಿಷ ದಸರಾ ಆಚರಿಸುವ ಮೂಲಕ ಜನರ ಮನಸ್ಸಲ್ಲಿ ವಿಷಬೀಜ ಬಿತ್ತುವ ಕೆಲಸ ಮಾಡಿದ್ದು, ದಸರಾ ಹಬ್ಬಕ್ಕೆ ಕಪ್ಪುಚುಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ಪುರಸಭಾ ಸದಸ್ಯ ಹಾಗೂ ಚಿತ್ರನಟ ಅರ್ಜುನ್ ರಮೇಶ್ ಕಿಡಿಕಾರಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವೂ ದಲಿತರೇ ಆಗಿದ್ದು ಇಷ್ಟು ವರ್ಷ ಇತಿಹಾಸದಲ್ಲಿ ಮಹಿಷನ ಪೂಜೆ ಮಾಡಿಲ್ಲ. ಅಕಸ್ಮಾತ್ ಅವರವರ ಮನೆಗಳಲ್ಲಿ ಆಚರಿಸಿದರೆ ತಪ್ಪೇನಿಲ್ಲ. ದಸರಾ ವೇಳೆ ನಾಡದೇವಿ ಚಾಮುಂಡೇಶ್ವರಿ ಆರಾಧನೆ ಮಾಡುವ ಪರಂಪರೆ ನಮ್ಮದು. ಈ ವೇಳೆ ಜನರ ಮನದಲ್ಲಿ ಮಹಿಷ ದಸರಾ ಎಂಬ ವಿಷಬೀಜ ಬಿತ್ತಿ ಇಡೀ ದಲಿತ ಸಮುದಾಯಕ್ಕೆ ಕಳಂಕ ತರುವ ಕೆಲಸವನ್ನು ಕೆಲವರು ಮಾಡಲೊರಟಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನ ಕೆಲ ಏಜೆಂಟರುಗಳು ದಲಿತಪರ ಸಂಘಟನೆಗಳ ಹೆಸರಿಟ್ಟುಕೊಂಡು ಒಂದು ರಾಜಕೀಯ ಪಕ್ಷಕ್ಕೆ ಇಡೀ ಸಮುದಾಯವನ್ನು ಒತ್ತೆ ಇಟ್ಟಿದ್ದೇವೆ ಎಂಬಂತೆ ವರ್ತಿಸುತ್ತಿರುವುದು ಖಂಡನೀಯವಾಗಿದ್ದು, ದಲಿತ ಸಮುದಾಯದವರೆಲ್ಲಾ ಕಾಂಗ್ರೆಸ್‌ಗೆ ಸೀಮಿತರಾಗಿಲ್ಲ ಎಂದರು.

ಸಂಸದ ಸ್ಥಾನಕ್ಕೆ ಗೌರವ ಇಲ್ಲವೇ?: ಸಂಸದ ಎಂದರೆ ಆ ಸ್ಥಾನಕ್ಕೆ ತನ್ನದೇ ಗೌರವ ಇದೆ. ವೈಯಕ್ತಿಕ ಚರ್ಚೆಗಳೇನೇ ಇರಲಿ, ನಾವು ದಲಿತರು ಎಂಬ ಹಣೆಪಟ್ಟಿ ಕಟ್ಟಿಕೊಂಡು ಸಮಾಜದಲ್ಲಿ ಮಾಧ್ಯಮಗಳ ಮುಂದೆ ಮಾತನಾಡಬೇಕಾದರೆ ಪದ ಬಳಕೆ ಹಿಡಿತವಾಗಿರಬೇಕು. ಯಾವುದೋ ಜಿಲ್ಲೆಯಿಂದ ಬಂದ ವ್ಯಕ್ತಿಯೊಬ್ಬ ಸಂಸದ ಪ್ರತಾಪ್ ಸಿಂಹ ಕುರಿತು ಬಾಯಿಗೆ ಬಂದಂತೆ ಮಾತನಾಡುತ್ತಾನೆ. ಲೋ ಪ್ರತಾಪ್ ಸಿಂಹ ಬಾರೋ, ನಿಮ್ಮಪ್ಪನಿಗೆ ನೀನು ಹುಟ್ಟಿದ್ದರೆ ಬಾರೋ ಎಂದು ಕರೆಯುತ್ತಾನೆ. ಇಂತಹ ಪದ ಬಳಕೆ ಮಾಡುತ್ತಿರುವುದನ್ನು ನೋಡಿದರೆ ಇಡೀ ರಾಜ್ಯಕ್ಕೆ ದಲಿತರ ಬಗ್ಗೆ ಯಾವ ರೀತಿಯ ಸಂದೇಶ ಹೋಗುತ್ತದೆ ಎಂಬ ಸಾಮಾನ್ಯ ಜ್ಞಾನ ನಿಮಗಿದ್ದಂತಿಲ್ಲ. ಹಾಗಾಗಿ ದಲಿತರು ಮತ್ತು ದಲಿತ ಸಂಘಟನೆಗಳ ಹೆಸರೇಳಿ ಕೀಳು ಮಟ್ಟದ ಪದ ಬಳಕೆ ಮಾಡುವುದು ತಪ್ಪು. ಸಂಸದ ಸ್ಥಾನಕ್ಕೆ ಗೌರವ ಕೊಡುವುದನ್ನು ಮೊದಲು ಕಲಿತುಕೊಳ್ಳಬೇಕಿದೆ ಎಂದು ಹೇಳಿದರು.

ಬಿಜೆಪಿ ದಲಿತ ವಿರೋಧಿಯಲ್ಲ: ಬಿಜೆಪಿ ಯಾವತ್ತಿಗೂ ದಲಿತ ವಿರೋಧಿಯಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಪರಮ ಶಿಷ್ಯರಾಗಿದ್ದ ಛಲವಾದಿ ನಾರಾಯಣಸ್ವಾಮಿ ಅವರಿಗೆ ಕಾಂಗ್ರೆಸ್‌ನವರು ಯಾವ ಸ್ಥಾನ ನೀಡಿದ್ದಿರಿ? ಅವರನ್ನು ಕರೆತಂದು ಎಂಎಲ್ಸಿ ಮಾಡಿದ್ದು ಬಿಜೆಪಿ, ಎ.ಆರ್.ಕೃಷ್ಣಮೂರ್ತಿ ಸತತ ಸೋಲುಂಡಾಗ ಅವರನ್ನು ಮೂಲೆಗುಂಪು ಮಾಡಿತ್ತು. ಅವರಿಗೆ ಸಹ ಬಿಜೆಪಿ ಟಿಕೆಟ್ ನೀಡಿ ರಾಜಕೀಯದಲ್ಲಿ ಉನ್ನತ ಸ್ಥಾನ ನೀಡಿದೆ. ನಂಜುಂಡ ಸ್ವಾಮಿಯವರನ್ನು ಬೈ ಎಲೆಕ್ಷನ್‌ನಲ್ಲಿ ಗೆಲ್ಲಿಸಿದ್ದೂ ಬಿಜೆಪಿಯೇ. ಹಾಗಾಗಿ ಯಾವ ಮಾನದಂಡದ ಮೇಲೆ ನೀವು ಬಿಜೆಪಿಗೆ ದಲಿತ ವಿರೋಧಿ ಎಂಬ ಹಣೆಪಟ್ಟಿ ಕಟ್ಟುತ್ತೀರಾ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ತಾಪಂ ಮಾಜಿ ಸದಸ್ಯ ಬಿ.ಎಲ್. ಮಹದೇವ್, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಮಾಜಿ ಅಧ್ಯಕ್ಷ ಸಿ.ಡಿ.ವೆಂಕಟೇಶ್, ಗ್ರಾಪಂ ಸದಸ್ಯ ಶಿವು, ಬೈರಾಪುರ ರಜನಿರಾಜ್ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ರಾಜಮಾರ್ತಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂತಿರಾಂ ಚಾಪ್ಟರ್–1 (ತೆ)	4 ಪ್ರದರ್ಶನಗಳು
ಸಂಗಂ	
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.4.10ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ,
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್


ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೆರವಣಿಗೆ, ಯುವ ದಸರಾ ಉಪಸಮಿತಿಗೆ ನೇಮಕ



ಚೆಲುವರಾಜು



ವಜ್ರೇಗೌಡ

ತಿ.ನರಸೀಪುರ, ಅ.15–ಮೈಸೂರು ದಸರಾ ಮಹೋತ್ಸವದ ಯಶಸ್ವಿಗೆ ಸರ್ಕಾರ ಕೆಲ ಉಪ ಸಮಿತಿಗಳನ್ನು ರಚಿಸಿದ್ದು, ಮೆರವಣಿಗೆ ಮತ್ತು ಪಂಜಿನ ಕವಾಯಿತು ಉಪ ಸಮಿತಿಯ ಅಧ್ಯಕ್ಷರನ್ನಾಗಿ ತಿ.ನರಸೀಪುರ ತಾಲೂಕು ಕಾಂಗ್ರೆಸ್ ಮುಖಂಡ ವಜ್ರೇಗೌಡ ಅವರನ್ನು ನೇಮಕ ಮಾಡಿದೆ.


ಅಧಿಕಾರಿಗಳು ಮತ್ತು ದಸರಾ ಉಪ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿ ದಸರಾ ಮೆರವಣಿಗೆ ಮತ್ತು ಪಂಜಿನ ಕವಾಯಿತೆಗೆ ಶ್ರಮಿಸುವುದಾಗಿ ಅವರು ತಿಳಿಸಿದ್ದಾರೆ.

ಚೆಲುವರಾಜು: ಯುವ ದಸರಾ ಉಪ ಸಮಿತಿಗೆ ಅಧ್ಯಕ್ಷರಾಗಿ ಮೈಮುಲ್ ನಿರ್ದೇಶಕ ಹಾಗೂ ತಾಪಂ ಮಾಜಿ ಅಧ್ಯಕ್ಷ ಆರ್.ಚೆಲುರಾಜು(ಕೆಆರ್) ಅವರನ್ನು ದಸರಾ ವಿಶೇಷ ಅಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನೇಮಕ ಮಾಡಿದ್ದಾರೆ.

ದಸರಾ ಕವಿಗೋಷ್ಠಿ ಅಧ್ಯಕ್ಷರಾಗಿ ಮಹೇಶ್: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಮಹೇಶ್ ಅವರನ್ನು ದಸರಾ ಕವಿಗೋಷ್ಠಿ ಅಧ್ಯಕ್ಷರಾಗಿ ಜಿಲ್ಲಾಧಿಕಾರಿ ನೇಮಕ ಮಾಡಿದ್ದಾರೆ. ನೇಮಕಕ್ಕೆ ಸಹಕರಿಸಿದ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಕೆ.ವೆಂಕಟೇಶ್ ಅವರಿಗೆ ಮಹೇಶ್ ಅಭಿನಂದಿಸಿದ್ದಾರೆ.



ಕಣ್ಣಿನ ನಿರ್ಲಕ್ಷ್ಯ ಬೇಡ: ಡಾ.ಬೃಂದಾ ಸಲಹೆ



ಸರಗೂರು: ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ, ಡಾ.ಮಜೀದ್ ಫೌಂಡೇಷನ್, ಮೈಸೂರು ಜಿಲ್ಲಾ ಅಂಧತ್ವ ನಿಯಂತ್ರಣಾ ಸಂಸ್ಥೆ ಮತ್ತು ವರುಣ್ ಟೆಕ್ಸ್‌ಟೈಲ್ಸ್ ವತಿಯಿಂದ ವಿಶ್ವ ದೃಷ್ಟಿ ದಿನಾಚರಣೆ ಪ್ರಯುಕ್ತ ಕಣ್ಣಿನ ಉಚಿತ ತಪಾಸಣೆ ಮತ್ತು ಅರಿವು ಕಾರ್ಯಕ್ರಮವನ್ನು ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆಸಲಾಯಿತು.

ಮೈಸೂರು ಜಿಲ್ಲಾ ಅಂಧತ್ವ ನಿಯಂತ್ರಣಾ ಸಂಸ್ಥೆ ನಿಯಂತ್ರಣಾಧಿಕಾರಿ ಡಾ.ಬೃಂದಾ ಮಾತನಾಡಿ, ಸರ್ಕಾರ ಕಣ್ಣಿನ ದೋಷ ನಿಯಂತ್ರಿಸಲು ಹಲವಾರು ಕಾರ್ಯಕ್ರಮಗಳ ಮೂಲಕ ಖಾಸಗಿ ಸಂಸ್ಥೆಗಳೊಂದಿಗೆ ನೇತ್ರ ತಪಾಸಣೆ ಶಿಬಿರಗಳನ್ನು ಆಯೋಜಿಸುತ್ತಿದೆ. ಇಂಥ ಶಿಬಿರಗಳಲ್ಲಿ ಜನರು ಭಾಗವಹಿಸಬೇಕು ಎಂದರು.

ಐಪಿಎಸ್ ನಿವೃತ್ತ ಅಧಿಕಾರಿ ಚಾಮನ್‌ಲಾಲ್, ವರುಣ್ ಸೂಪರ್ ಮಾರ್ಕೆಟ್ ಸಂಸ್ಥಾಪಕ ವರುಣ್, ವಿವೇಕಾನಂದ ಸ್ಮಾರಕ ಆಸ್ಪತ್ರೆಯ ನೇತ್ರ ತಜ್ಞ ನರೇಂದ್ರ ರಾಮಕೃಷ್ಣ, ನೇತ್ರ ಪರೀಕ್ಷಕ ಗಿರೀಶ್, ವೈದ್ಯಕೀಯ ವಿದ್ಯಾರ್ಥಿ ಪ್ರೀಯಂಗ್ನ, ಕೆಎಸ್‌ಆರ್‌ಟಿಸಿಯ ಟಿಸಿ ಕೇಶವಮೂರ್ತಿ, ನಾಗರತ್ನ, ಸಿದ್ದರಾಜು, ಮಮತಾ, ಬಂಗಾರಶೆಟ್ಟಿ, ಎಂ.ಪಿ.ರಮೇಶ್, ಗೋಪಾಲಕೃಷ್ಣ, ಚಿನ್ನ ಮಹದೇವು, ಚನ್ನಪ್ಪ, ಮಹೇಶ್, ಶ್ರೀಧರ ಹಾಜರಿದ್ದರು.

ಪ್ರಯತ್ನಕ್ಕೆ ಸೋಲಾಗಬಹುದು, ಪ್ರಾರ್ಥನೆ ಮಾಡಿ ಸೋತವರಿಲ್ಲ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಮತ

ಮೈಸೂರು, ಅ.15(ಆರ್‌ಕೆ)–ಪ್ರಯತ್ನ ಮಾಡಿ ಸೋಲಾಗಬಹುದು. ಆದರೆ ಪ್ರಾರ್ಥನೆ ಮಾಡಿ ಸೋತವರಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಆಯೋಜಿಸಿದ್ದ 2023ರ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ದುಃಖ ದೂರ ಮಾಡು ತಾಯಿ ಎಂದು ನಾವೆಲ್ಲರೂ ಚಾಮುಂಡೇಶ್ವರಿ ದೇವಿಯನ್ನು ಪ್ರಾರ್ಥಿಸಿದ್ದೇವೆ. ನಾಡಿನ ಇತಿಹಾಸ, ಪರಂಪರೆ, ಸಂಸ್ಕೃತಿಯನ್ನು ಸಾರುವ ನವರಾತ್ರಿ ಉತ್ಸವದಲ್ಲಿ ನಾಡಿನ ಜನತೆಗೆ ಒಳಿತಾಗಲೆಂದು ಪ್ರಾರ್ಥಿಸಿದ್ದೇವೆ ಎಂದರು.

ಭೂಮಿ ತಾಯಿ, ಗ್ರಾಮದೇವತೆ, ತಾಯಿ ಭಾಷೆ ಎನ್ನುತ್ತೇವೆ. ವೆಂಕಟೇಶ್ವರನನ್ನು ಲಕ್ಷ್ಮೀ ವೆಂಕಟೇಶ್ವರ, ಪರಮೇಶ್ವರನನ್ನು ಪಾರ್ವತಿ ಪರಮೇಶ್ವರ, ಗಣೇಶನನ್ನು ತಾಯಿಯೊಂದಿಗೆ ಗೌರಿ–ಗಣೇಶ ಎಂದೂ ಕರೆಯುವ ನಾವು, ಸಂಸ್ಕೃತಿ–ಪರಂಪರೆಯನ್ನು ಮರೆಯುವುದಿಲ್ಲ. ಪ್ರಾರ್ಥನೆಯಲ್ಲಿ ತಾಯಿಯನ್ನು ಸ್ಮರಿಸುತ್ತೇವೆ. ಅದಕ್ಕೆ ಫಲ ಲಭಿಸಲಿದೆ ಎಂದು ಅವರು ನುಡಿದರು.

ದೇವರನ್ನು ಪ್ರಾರ್ಥಿಸಿದರೆ ಎಂದೂ ಸೋಲಾಗುವುದಿಲ್ಲ. ಎಲ್ಲರಿಗೂ ಒಳಿತಾಗಲಿ ಎಂದು ಪ್ರಾರ್ಥಿಸಿದ್ದೇವೆ. ಸಂಪತ್ತಿದ್ದರೂ ಸರಳತೆಗೆ ಒತ್ತು ಕೊಡುವವರು ನಾವು. ಅದಕ್ಕಾಗಿ ಈ ಬಾರಿ ದಸರಾ ಮಹೋತ್ಸವ ಉದ್ಘಾಟನೆಗೆ ಸರಳ ವ್ಯಕ್ತಿ ಹಂಸಲೇಖರನ್ನು ಆಯ್ಕೆ ಮಾಡಿದ್ದೇವೆ ಎಂದ ಡಿ.ಕೆ.ಶಿವಕುಮಾರ್, ಸಾಮಾನ್ಯ ಜನರ ಬದುಕು, ಪರಂಪರೆ, ಸಂಸ್ಕೃತಿಯನ್ನು ಉಳಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ನಮ್ಮ ಯೋಜನೆಗಳನ್ನು ತಾಯಿ ಸನ್ನಿಧಿಯಲ್ಲಿ ಪ್ರಾರ್ಥಿಸಿ ಘೋಷಿಸಿದ್ದೆವು. ಅವುಗಳ ಅನುಷ್ಠಾನಕ್ಕೆ ಪ್ರಾರ್ಥಿಸಿದ್ದೆವು. ಚಾಮುಂಡೇಶ್ವರಿ ಅನುಗ್ರಹದಿಂದ ಅಧಿಕಾರಕ್ಕೆ ಬಂದ ನಂತರವೂ ತಾಯಿ ಬಳಿಯೇ ಬಂದು 1.11 ಕೋಟಿ ಮಹಿಳೆಯರಿಗೆ ತಲಾ 2,000 ರೂ. ನೀಡುವ ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಇಂದು ವಿಶೇಷ 'ಸ್ವಾತಿ' ಪೂಜೆ

ಮೈಸೂರು, ಅ.15– ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಅ.16ರಂದು ಸೋಮವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮೊ.93421 88323, 7598832271 ಸಂಪರ್ಕಿಸಿ.



Sl.No	Material Description
1	SS SCRAP
2	MSSCRAP
3	ALLUMINIUM SCRAP
4	ELECTRICAL SCRAP
5	GI SCRAP
6	SCRAP CONVEY BELT
7	PLASTIC SCRAP- Used Plastic Strips
8	PLASTIC SCRAP - Used Plastic Polyethene Covers
9	WOODEN SCRAP
10	WASTE PAPER BITS
11	ESCORTS COAL LOADER (after dismantling)

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿದ ಸ್ವತ್ತುಗಳನ್ನು ಅಂದರೆ ಐಟಂ ನಂಬರ್ 1 ಗುಂಡ್ಲುಪೇಟೆ ತಾಲ್ಲೂಕು, ಹಂಗಲ ಹೋಬಳಿ, ಚೆನ್ನಮಲ್ಲಿಪುರ ಗ್ರಾಮದ ಸ್ವತ್ತುಗಳಾದ ಸರ್ವೆ ನಂ. 87/37 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/45 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/46ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/47ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/48 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/49 ರಲ್ಲಿ 4 ಎಕರೆ ಖುಷ್ಕಿ ಜಮೀನು ಹೀಗೆ ಒಟ್ಟು 24 ಎಕರೆ ಖುಷ್ಕಿ ಜಮೀನನ್ನು ಅದರ ಮಾಲೀಕರಾದ ವಿ. ಮೊಹಮ್ಮದ್ ಕೊಯ ಬಿನ್ ಮಲಯಕ್ಕಾಲ್ ಕುನ್ನಮುಟ್ಟಿ ಹಾಜಿ, ಇವರ ವಾಸ ಮದ್ದೂರು, ಕೋಜಿಕೋಡ್, ಕೇರಳ ರಾಜ್ಯ ಹಾಗೂ

ಐಟಂ ನಂಬರ್ 2 ಗುಂಡ್ಲುಪೇಟೆ ತಾಲ್ಲೂಕು, ಹಂಗಲ ಹೋಬಳಿ, ಚೆನ್ನಮಲ್ಲಿಪುರ ಗ್ರಾಮದ ಸ್ವತ್ತುಗಳಾದ ಸರ್ವೆ ನಂ. 87/14 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/30 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/32 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/ 33 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/34 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/35 ರಲ್ಲಿ 4 ಎಕರೆ ಖುಷ್ಕಿ ಜಮೀನು, ಹೀಗೆ ಒಟ್ಟು 24 ಎಕರೆ ಖುಷ್ಕಿ ಜಮೀನನ್ನು ಅದರ ಮಾಲೀಕರಾದ ಬಿ. ಮೊಹಮ್ಮದ್ ಬಷೀರ್ ಬಿನ್ ಮದೇರಿ ಬಿಚಿಕೊಯ, ಇವರ ವಾಸ ಫೆರೋಕೆ ಗ್ರಾಮ, ಕೋಜಿಕೋಡ್ ತಾಲ್ಲೂಕು ಮತ್ತು ಜಿಲ್ಲೆ, ಕೇರಳ ರಾಜ್ಯ ಹಾಗೂ

ಐಟಂ ನಂಬರ್ 3 ಗುಂಡ್ಲುಪೇಟೆ ತಾಲ್ಲೂಕು, ಹಂಗಲ ಹೋಬಳಿ, ಚೆನ್ನಮಲ್ಲಿಪುರ ಗ್ರಾಮದ ಸ್ವತ್ತುಗಳಾದ ಸರ್ವೆ ನಂ. 87/13 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/15 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/23 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/ 24 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/25 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/26 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/28 ರಲ್ಲಿ 4 ಎಕರೆ ಖುಷ್ಕಿ ಜಮೀನು, ಹೀಗೆ ಒಟ್ಟು 28 ಎಕರೆ ಖುಷ್ಕಿ ಜಮೀನನ್ನು ಅದರ ಮಾಲೀಕರಾದ ಅಬುಬಕ್ಕರ್ ಬಿನ್ ಮೂಶಾ, ಇವರ ವಾಸ ವಲಿಯತೊಡಿಕಾಯಿಲ್, ಓಲವಣ್ಣ ಗ್ರಾಮ, ಕೋಜಿಕೋಡ್ ತಾಲ್ಲೂಕು ಮತ್ತು ಜಿಲ್ಲೆ, ಕೇರಳ ರಾಜ್ಯ ಹಾಗೂ

ಐಟಂ ನಂಬರ್ 4 ಗುಂಡ್ಲುಪೇಟೆ ತಾಲ್ಲೂಕು, ಹಂಗಲ ಹೋಬಳಿ, ಚೆನ್ನಮಲ್ಲಿಪುರ ಗ್ರಾಮದ ಸ್ವತ್ತುಗಳಾದ ಸರ್ವೆ ನಂ. 87/11 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/22 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/41 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/ 44 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 134 ರಲ್ಲಿ 4 ಎಕರೆ ಖುಷ್ಕಿ ಜಮೀನು, ಹೀಗೆ ಒಟ್ಟು 20 ಎಕರೆ ಖುಷ್ಕಿ ಜಮೀನನ್ನು ಅದರ ಮಾಲೀಕರಾದ ಸೈಯ್ಯದ್ ಮಮೂಟಿ ಇನ್ ಸೈಯ್ಯದ್ ಅಬ್ದುಲ್ಲಾ, ಇವರ ವಾಸ ಸೈಯ್ಯದ್‌ಮನೆ, ಇದವಾಕೆ ಗ್ರಾಮ, ಮಾನಂಡವಾಡಿ, ಕೇರಳ ರಾಜ್ಯ ಹಾಗೂ ಐಟಂ ನಂಬರ್ 5 ಗುಂಡ್ಲುಪೇಟೆ ತಾಲ್ಲೂಕು, ಹಂಗಲ ಹೋಬಳಿ, ಚೆನ್ನಮಲ್ಲಿಪುರ ಗ್ರಾಮದ ಸ್ವತ್ತುಗಳಾದ ಸರ್ವೆ ನಂ. 87/31 ರಲ್ಲಿ 4 ಎಕರೆ ಖುಷ್ಕಿ ಜಮೀನು, ಸರ್ವೆ ನಂ. 87/40 ರಲ್ಲಿ 4 ಎಕರೆ ಖುಷ್ಕಿ ಜಮೀನು ಹೀಗೆ ಒಟ್ಟು 08 ಎಕರೆ ಖುಷ್ಕಿ ಜಮೀನನ್ನು ಅದರ ಮಾಲೀಕರಾದ ಬಿ. ಫೈಸಲ್ ಬಿನ್ ಬದೇರಿ ಪಿಚಿಕೋಯ, ಇವರ ವಾಸ ಫೆರೋಕೆ ಗ್ರಾಮ, ಕೋಜಿಕೋಡ್ ತಾಲ್ಲೂಕು ಮತ್ತು ಜಿಲ್ಲೆ, ಕೇರಳ ರಾಜ್ಯ

ನಮೂದಾದ ಐಟಂ ನಂಬರ್ 1 ರಿಂದ ಐಟಂ ನಂಬರ್ 5 ರ ಸ್ವತ್ತುಗಳನ್ನು ನಮ್ಮ ಕಕ್ಷಿದಾರರು ಶುದ್ಧ ಕ್ರಯಕ್ಕೆ ಮೇಲ್ಕಂಡ ಸ್ವತ್ತುಗಳ ಮಾಲೀಕರಿಂದ ಖರೀದಿಸುವ ಸಲುವಾಗಿ ಒಪ್ಪಿದ್ದು ಸದರಿ ಮೇಲ್ಕಂಡ ಐಟಂ ನಂಬರ್ 1 ರಿಂದ ಐಟಂ ನಂಬರ್ 5 ರಲ್ಲಿ ಬರುವ ಒಟ್ಟು 104 (ನೂರನಾಲ್ಕು) ಎಕರೆ ಖುಷ್ಕಿ ಜಮೀನುಗಳ ಖರೀದಿ ಸಂಬಂಧವಾಗಿ, ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದಾಗಲೀ ಅಥವಾ ಇನ್ನಿತರೆ ಯಾರಾದರೂ ವಾರಸುದಾರರು, ಹಕ್ಕು ಪಡೆಯುವವರು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಅಗತ್ಯ ಮೂಲ ದಾಖಲೆಗಳೊಂದಿಗೆ 15 (ಹದಿನೈದು) ದಿನಗಳ ಒಳಗಾಗಿ ಖುದ್ದಾಗಿಯಾಗಲೀ, ಅಥವಾ ಲಿಖಿತ ತಕರಾರಿನೊಂದಿಗೆ ಮೇಲ್ಕಂಡ ನಮ್ಮ ಕಛೇರಿಗೆ ಭೇಟಿಯಾಗತಕ್ಕದ್ದು, ತದ ನಂತರ ಯಾವುದೇ ತಕರಾರು ಬಾರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಮೇಲ್ಕಂಡವರಿಂದ ಐಟಂ ನಂಬರ್ 1 ರಿಂದ ಐಟಂ ನಂಬರ್ 5 ರ ಸ್ವತ್ತುಗಳನ್ನು ಶುದ್ಧ ಕ್ರಯಕ್ಕೆ ಖರೀದಿಸುತ್ತಾರೆಂದು ಈ ಮೂಲಕ ಸಾರ್ವಜನಿಕ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Sd/- K.P. KRISHNA, B.A., LL.B., Advocate, Mob: 99003 76674, 9845104048
J.K. Law Associates, # 2852, Upstairs, 2nd main, 4th Cross, Jayanagar, Mysuru